ಓದು, ಬರಹ, ಬಲ್ಲವರ ಪುಸ್ತಿಕೆ

- ಸಮಗ್ರ ಸಾಂಸ್ಕೃತಿಕ ಪ್ರತಿಭೆ : ಕುವೆಂಪು
- ವಿಶ್ವ ಕನ್ನಡದ ಕನಸು
- ಕನ್ನಡಕ್ಕಾಗಿ ದುಡಿದ : ಎಚ್.ಎಸ್.ಪಾಟೀಲ
- ವಿನಾಯಕ ಕೃಷ್ಣ ಗೋಕಾಕ್ : ಸಾಂಸ್ಕೃತಿಕ ಸಾಧನೆ
- ಜಿ.ಪಿ. ರಾಜರತ್ನಂ : ಧೀಮಂತ ವ್ಯಕ್ತಿತ್ವದ ಒಂದು ನೆನಪು
- ಶಂಕರ ಮೊಕಾಶಿ – ಪುಣೇಕರ : ಸ್ವೋಪಜ್ಞತೆಗೆ ಸಾಕ್ಷಿ
- ಎಂ.ಎಸ್. ಲಠ್ಠೆ : ಕಾಯಕಯೋಗಿ
- ಅಕ್ಷರ ಪ್ರಕಾಶನ, ನೀನಾಸಂ ಮತ್ತು ಕೆ.ವಿ. ಸುಬ್ಬಣ್ಣ
- ಪ್ರಗತಿಶೀಲರ ಜಟಾಪಟಿ : ಒಂದು ಅನುಬಂಧ
- ಆರ್ಕೆ : ಸಮಾಜವಾದಿ ವಿಮರ್ಶೆಯ ಮಾದರಿ

ಸಂಪಾದಕ

ಹರಿಹರಪ್ರಿಯ

೨ನೇ ವರುಷದ ೩ನೇ ಪುಸ್ತಿಕೆ

ಫೆಬ್ರವರಿ ೨೦೦೮

ಪುಸ್ತಕಮನೆ

ಓದು, ಬರಹ, ಬಲ್ಲವರ ಪುಸ್ತಿಕೆ

ಬೆಲೆ : ಒಟ್ಟು 24 ಪುಸ್ತಿಕೆಗಳಿಗೆ ರೂ. 500/- (ಅಂಚೆ ವೆಚ್ಚ ಸೇರಿ)
ಬಿಡಿ ಪುಸ್ತಿಕೆಗೆ ರೂ. 20/- (ಅಂಚೆ ವೆಚ್ಚ ಸೇರಿ ರೂ. 25/-)
ಬೆಂಗಳೂರಿನ ಹೊರಗಿನವರು ಹಣವನ್ನು ಎಂ.ಓ./ಡಿ.ಡಿ.ಗಳಲ್ಲಿ ಮಾತ್ರ ಕಳಿಸಿಕೊಡಬೇಕಾಗಿ ವಿನಂತಿ

ಒಳಪುಟಗಳಲ್ಲಿ....

ಪ್ರಕಾಶನ : ಪುಸ್ತಕಮನೆ
702, ಬಿ.ಸಿ.ಸಿ.ಹೆಚ್.ಎಸ್. ಲೇಔಟ್, ವಾಜರಹಳ್ಳಿ, ತಲಘಟ್ಟಪುರ, ಬೆಂಗಳೂರು 560062
ಮೊಬೈಲ್ : 9845867184 / 9242221506
e-mail : hariharapriya@gmail.com pustakamane@yahoo.com

ಮುದ್ರಣ : ಇಳಾ ಮುದ್ರಣ
ನಂ. 36, 40 ಅಡಿ ರಸ್ತೆ, ರಾಘವನಗರ, ನ್ಯೂಟಿಂಬರ್‌ಯಾರ್ಡ್ ಲೇಔಟ್
ಬೆಂಗಳೂರು 560 026 ದೂರವಾಣಿ : 26757159

೧

ಸಮಗ್ರ ಸಾಂಸ್ಕೃತಿಕ ಪ್ರತಿಭೆ : ಕುವೆಂಪು

ಸಂಪಾದಕೀಯ

ಯಾವುದನ್ನೂ ಇರುವ ಹಾಗೆಯೇ ಪ್ರತ್ಯಕ್ಷ ಪ್ರಮಾಣ ಎನ್ನುವಂತೆ ಸ್ವೀಕರಿಸುವುದು ಸಾಧ್ಯವೋ? ಹಾಗಾದಾಗ; ಸಾಮಾಜಿಕ ಬದುಕಾಗಲಿ, ಸಾಂಸ್ಕೃತಿಕ ಭಿತ್ತಿಯಾಗಲಿ - ಆಳ, ಅಗಲ, ಎತ್ತರವಿಲ್ಲದೆ; ಮಂದ್ರ, ಮಧ್ಯಮ, ತಾರ ಸ್ಥಾಯಿಗಳಿಲ್ಲದೆ ಗ್ರಹಿಸಲಾದೀತೊ? ಛಾಯೆ ಇಲ್ಲದ ಬಣ್ಣ, ಪರಸ್ಪರ ಸೋಂಕಿಲ್ಲದ ಸ್ವರ, ಸ್ವರೂಪವಿಲ್ಲದ ಅಕ್ಷರಗಳೂ ಇರಲು ಸಾಧ್ಯವುಂಟೊ? ಕಾಣುವ 'ಸತ್ಯ'ವನ್ನು ಅರ್ಥಮಾಡಿಕೊಳ್ಳಬೇಕಾದರೆ, ಕಾಣುವ ಮುಂಚೆಯಾಗಲಿ ಅಥವ ಕಂಡಾದ ಮೇಲಾಗಲಿ ಆ ಬಗೆಗೆ ತಿಳಿಯುವ 'ಸತ್ಯ' ಕೂಡ, ಸಮಗ್ರ ಗ್ರಹಿಕೆಗೆ ಇಂಬಾಗುವುದರಲ್ಲಿ ಸುಳ್ಳಿಲ್ಲವಷ್ಟೆ. ಹೀಗಾಗಿ ಒಲವು ನಿಲುವು ಎರಡೂ; ವ್ಯಕ್ತಿಯ, ಕೃತಿಯ, ಘಟನೆಯ, ವಿಚಾರದ ಎರಡು ಮಗ್ಗುಲೇ ತಾನೆ.

ಒಬ್ಬ ಬರಹಗಾರನ ಕೃತಿ, ಕೃತಿಯೊಳಗಿನ ವೈಚಾರಿಕ ಒಲವು, ಅದು ಬೆಳೆದ ಪರಿ, ಪರಸ್ಪರ ಕೃತಿಗಳು ಕಟ್ಟಿಕೊಡುವ ತಾತ್ತ್ವಿಕ ನಿಲುವು, ಆ ಮೂಲಕ ಸದ್ಯದ ಸಂದರ್ಭ ಮಾತ್ರವೇ ಅಲ್ಲ, ಸದ್ಯಕ್ಕೆ ಆಹ್ವಾನಿಸಿ ಎದುರಿಸಿದ ಆವೆರೆಗಿನ ಸಾಮಾಜಿಕ, ಸಾಂಸ್ಕೃತಿಕ ಒತ್ತಡಗಳು; ಅದಕ್ಕೆ ಜವಾಬ್ದಾರಿಯಿಂದ ತಾನು ಜೋಡಿಸಿದ ಹೊಸ ಮೈ ಮನಸ್ಸು - ಇವುಗಳನ್ನು ಬಿಡಿಬಿಡಿಯಾಗಿಯೂ ಸಮಗ್ರವಾಗಿಯೂ ಅಧ್ಯಯನ ಮಾಡಲು ಆಯ್ಕೆ ಮಾಡಿಕೊಂಡದ್ದು ಕುವೆಂಪು ಅವರನ್ನೇ. ಕರ್ನಾಟಕದಲ್ಲಿ ಮಾತ್ರವಲ್ಲ ಭಾರತದ ಇತರ ಭಾಷೆಗಳಲ್ಲಿಯೂ ಈ ಬಗೆಯ ಪ್ರಯತ್ನ, ಪ್ರಯೋಗ ನಡೆದಿಲ್ಲವೆಂದೇ ಹೇಳುವಾಗ, ಮಾದರಿಯ ಹುಡುಕಾಟ ಇಲ್ಲಿದೆ ಎಂಬುದನ್ನೂ ಬಲ್ಲವರು ಪರಾಂಬರಿಸಬೇಕು.

ಅದಕ್ಕೆ ಮುಖ್ಯ ಕಾರಣ : ಕನ್ನಡದ, ಕನ್ನಡಿಗರ, ಕರ್ನಾಟಕದ ನಿಜವಾದ, ವಿಶ್ವಾಸದ, ಸಮಗ್ರ ಸಾಂಸ್ಕೃತಿಕ ಪ್ರತಿಭೆ, ಕುವೆಂಪು ಎನ್ನುವುದೇ ಆಗಿದೆ.

ಬಿಡಿಬಿಡಿ ಪ್ರತಿಭಾ ವಿಲಾಸಕ್ಕೆ, ಕೇವಲ ವ್ಯಕ್ತಿ ವಿಕಾಸಕ್ಕೆ, ಬೌದ್ಧಿಕ ನಾಟ್ಯೀಕರಣಕ್ಕೆ, ವಿದ್ವತ್ತಿನ ಬೆಡಗಿಗೆ, ಶುದ್ಧ ಸಾಹಿತ್ಯಪ್ರಜ್ಞೆಗೆ - ಬೇರೆ ಬೇರೆಯವರು ಕಣ್ಣ ಮುಂದೆ ಕಾಣಿಸಿದರೂ; ಅವರ ನಡುವೆಯೇ ತನ್ನ ಶತಮಾನ ಮಾತ್ರವಲ್ಲ, ತನ್ನ ಕಾಲದವರೆಗಿನ ಎಲ್ಲ ಬಗೆಯ ಸಾಮಾಜಿಕ ಸಾಂಸ್ಕೃತಿಕ ಒತ್ತಡಗಳಿಗೆ ಹನುಮಶಕ್ತಿಯ ಉತ್ತರವಾಗಿ - ಬೆಳೆದು ನಿಂತವರು ಕುವೆಂಪು ಒಬ್ಬರೇ.

ಪಂಪ, ಹರಿಹರ, ಕುಮಾರವ್ಯಾಸ, ರತ್ನಾಕರವರ್ಣಿ, ಸರ್ವಜ್ಞ - ಮಾತ್ರವೇ ಅಲ್ಲದೆ; ಪಂಜೆ, ಅಡಿಗ, ಲಂಕೇಶ್, ದೇವನೂರ ಅಂಥ ಗಗನಚುಕ್ಕಿ, ಭರಚುಕ್ಕಿಗಳು ಕುವೆಂಪು ಆಕಾಶದಲ್ಲಿಯೇ ಮಿಂಚಬಹುದು, ಹೊಳೆಯಲೂಬಹುದು. ಭಾರತದಲ್ಲಿ ಶ್ರೀ ಶ್ರೀ, ಮಹಾಶ್ವೇತಾದೇವಿ, ಪ್ರೇಮಚಂದ, ವೈಕಂ ಮಹಮ್ಮದ್ ಬಷೀರ್ ಅಂಥ ಮಹಾಪ್ರತಿಭಾ ವಿಲಾಸ, ವಿಕಾಸಗಳನ್ನು ದೊಡ್ಡದು ಎಂದು ಕಣ್ಣ ಮುಂದೆ ಇರಿಸಿಕೊಂಡರೂ, ಸಮಗ್ರತೆ ದೃಷ್ಟಿಯಿಂದ ವಿಶ್ವ ಸಾಂಸ್ಕೃತಿಕ ನಭೋಮಂಡಲಕ್ಕೆ ನೆಗೆಯಬಲ್ಲ ಏಕೈಕ ನಾಯಕ ಪ್ರತಿಭೆ ಕುವೆಂಪು ಮಾತ್ರವೇ. ಒಂದಲ್ಲ ಒಂದು ರೀತಿ, ಗೊತ್ತಿದ್ದೊ ಗೊತ್ತಿಲ್ಲದೆಯೊ ಕುವೆಂಪು ಪ್ರತಿಭೆಯನ್ನು ಎದುರಿಸದೆಯೇ ಮುಂದೆ ಯಾರೂ ತಲೆ ಎತ್ತುವಂತಿಲ್ಲ, ನಿಲ್ಲುವಂತಿಲ್ಲ; ಏಕೆಂದರೆ, ಸಾವಿರಾರು ವರುಷಗಳ ಸಾಹಿತ್ಯವಿರಬಹುದು, ಹತ್ತಾರು ಸಾವಿರ ವರುಷಗಳ ಸಾಮಾಜಿಕ ಸ್ಥಿತಿಗತಿಗಳಿರಬಹುದು; ಕರಗಿ, ನೀರಾಗಿ, ಹರಿಯುತ್ತಿರುವುದು ಕುವೆಂಪು ಮಹಾಸಾಗರದಲ್ಲಿಯೇ.

ಈ ಅರಿವು ಮೂಡುವ ಮುಂಚೆಯೇ, ೧೯೬೪ರಿಂದಲೇ ಕುವೆಂಪು ಸಮಗ್ರ ಅಧ್ಯಯನಕ್ಕೆ, ಸಂಪೂರ್ಣವಾಗಿ ತೊಡಗಿಸಿಕೊಳ್ಳಲಾಯಿತು. ಆಗ ನನಗೆ ಕೇವಲ ೧೬-೧೭ರ ಹರೆಯ. ಕನ್ನಡ ನವ್ಯ ಸಾಹಿತ್ಯಕ್ಕೂ ಹೆಚ್ಚು ಕಡಿಮೆ ಅಷ್ಟೇ ಹುರುಪು, ತುಂಟಾಟ. ಕುವೆಂಪು, ಕುವೆಂಪು ಸಾಹಿತ್ಯದ ಮೇಲೆ ಎಲ್ಲ ದಿಕ್ಕುಗಳಿಂದ ದಾಳಿ ನಡೆಸಿದ್ದ ಕಾಲ ಅದು. ಅವರ ಜಾತಿ, ಒಂದು ವಿಶ್ವವಿದ್ಯಾನಿಲಯ, ಭಕ್ತರ ಸಮೂಹ

ಇತ್ತು ಅನ್ನುವುದು ಬೇರೆ. ಆದರೆ ಯಾರೂ, ಯಾರೇ ಆದರೂ ಕುವೆಂಪು, ಕುವೆಂಪು ಸಾಹಿತ್ಯದ ಹೆಸರು ಎತ್ತುವವರಿಗೆ ಮರ್ಯಾದೆಯ ಕಾಲವಾಗಿರಲಿಲ್ಲ. ನಿಸಾರ್ ಅಹಮದ್ ಅವರ ಮಾತಿನಲ್ಲಿ ಆ ಎಲ್ಲ ಸತ್ಯ ಅಡಗಿದೆ. ಆಗ್ಗಿನ್ನೂ ಬಂಡಾಯ ಸಾಹಿತ್ಯ ಸಂಘಟನೆ ಹುಟ್ಟಲು ೧೦ ವರ್ಷಗಳ ಕಾಲಾವಕಾಶವಿತ್ತಷ್ಟೆ.

ಪರಿಸ್ಥಿತಿ ಹೀಗಿರುವಾಗ, ಕುವೆಂಪು ಅವರ ಬಗ್ಗೆ ಭಿನ್ನ ನೆಲೆಗಳಲ್ಲಿ ನಿಂತು ನೋಡುವ, ನೋಡಲೂ ಇಚ್ಛೆ ಪಡದ ಲಂಕೇಶ್, ಬನ್ನಂಜೆ ಗೋವಿಂದಾಚಾರ್ಯ ಅಂಥವರಿಂದಲೂ ಬರೆಸಿದ್ದು ಸ್ವತಃ ಭಕ್ತರಿಗೆ ಇರಲಿ, ಕುವೆಂಪು ಅವರಿಗೂ ಮೊದಮೊದಲಿಗೆ ಸಮಾಧಾನ ಕೊಡದ ವಿಷಯವಾಗಿತ್ತು. ಕ್ರಮೇಣ ಅವರು ನನ್ನನ್ನು ಅಪಾರ್ಥ ಮಾಡಿಕೊಳ್ಳಲಿಲ್ಲ ಎಂಬುದು ಇಲ್ಲಿ ಮುಖ್ಯವಾದ ಮಾತು.

ಈ ನೆಲೆಯಲ್ಲಿ : ಇವರು ಕುವೆಂಪು, ಕುವೆಂಪು ಪತ್ರಗಳು, ಕುವೆಂಪು ರಾಮಾಯಣ ಬರಹಗಾರರ ಪ್ರತಿಕ್ರಿಯೆ, ಕುವೆಂಪು ದರ್ಶನ, ಕುವೆಂಪು ಒಲವು ನಿಲುವು - ಹೀಗೆ ೧೦ ವರುಷಗಳಲ್ಲಿ ಹೊರಬಂದವು.

೧. ಕುವೆಂಪು ಪದಪ್ರಯೋಗ ಕೋಶ
೨. ಕುವೆಂಪು ಶಬ್ದಕೋಶ
೩. ಕುವೆಂಪು ಟಿಪ್ಪಣಿಗಳು (ಕುವೆಂಪು ಅವರು ಯಾವುದೇ - ಯಾರದೇ ಪುಸ್ತಕ ಓದಿದರೂ ಮಾರ್ಜಿನ್‌ನಲ್ಲಿ ಪ್ರತಿಕ್ರಿಯೆ ಬರೆಯುತ್ತಿದ್ದರು. ಅದರ ಸಂಗ್ರಹ.)

ಹೀಗೆ ಇಂಥವು ಸಿದ್ಧಪಡಿಸುವ ಹಂತದಲ್ಲಿಯೇ ಉಳಿದುಬಿಟ್ಟವು.

ಸುಮಾರು ೪೦ ವರುಷಗಳ ನಂತರ, ಒಮ್ಮೆಲೇ ಹಿಂದಿರುಗಿ ನೋಡಿದಾಗ, ಎಷ್ಟೋ ನೋವು ನಲಿವು ಉಮ್ಮಳಿಸಿ ಬರುತ್ತಿವೆ : ಮಂಡ್ಯ ಜಿಲ್ಲೆಯ ಹಳ್ಳಿಯಲ್ಲಿ, ಕಾಲೇಜು ಮೆಟ್ಟಲೂ ಹತ್ತಲಾಗದೆ, ದೇವಸ್ಥಾನದ ಅರ್ಚಕರ ಹುಡುಗ, ಉದ್ಯೋಗದ ಹತಾಶೆಯಲ್ಲಿ, ಸೀಮೆಎಣ್ಣೆ ಬುಡ್ಡಿಯಲ್ಲಿ ಮಾಡಿದ ಕೆಲಸ ಇವಾಗಿವೆ. ಆಗ ಸೂಕ್ತ ವಾತಾವರಣ, ಪ್ರೋತ್ಸಾಹ, ನೆರವು, ಕೊನೆಯಪಕ್ಷ ಗೆಳೆಯರು ಸಿಕ್ಕಿದ್ದಿದ್ದರೆ, ಇನ್ನೂ ಹತ್ತು ಹಲವು ರೂಪುರೇಖೆಗಳು ತಲೆಯಲ್ಲಿ ಇದ್ದವು, ತಲೆಯಲ್ಲಿಯೇ ಉಳಿದುಬಿಟ್ಟವು.

ಏನೇ ಇರಲಿ, ಉದ್ಯೋಗವಿಲ್ಲದೆ ಉದ್ಯೋಗದ ಆಶೆಯೂ ಕೈಬಿಟ್ಟು, ಓದು ಬರಹಗಳನ್ನೇ ನಂಬಿ ಬದುಕುವ ನಿರ್ಣಯಕ್ಕೆ ತಲುಪಿದ್ದಾಯಿತು. ಕುವೆಂಪು, ಕುವೆಂಪು ಸಾಹಿತ್ಯ ಬದುಕಿಗೆ ವಿಶ್ವಾಸವಾಗಿ ಬೆಳೆಯಿತು. ಅವರನ್ನೇ ಮೂಲಾಧಾರವಾಗಿ ಅಧ್ಯಯನಕ್ಕೆ ತೊಡಗಿದ್ದೆ. ಎಲ್ಲಕ್ಕೂ ಸಂಪೂರ್ಣ ಒಪ್ಪಿಗೆ ಕೊಟ್ಟಿದ್ದೇ ಅವರ ದೊಡ್ಡತನಕ್ಕೆ, ನನ್ನ ಪುಣ್ಯಕ್ಕೆ ಹೆಚ್ಚುಗಾರಿಕೆ. ಮನೆಗೆ ಹೋಗಿಬರಲು ಸಮಯ ಕೊಡುತ್ತಿದ್ದವರು, ಕೊನೆಗೆ ಯಾವಾಗ ಬೇಕಾದರೂ ಬರುವಂತೆ, ಕೊನೆಕೊನೆಗೆ ವಾಹನ ವೆಚ್ಚ ಕೂಡ ಎಂ.ಓ. ಮಾಡುವಷ್ಟು 'ಕಾರುಣ್ಯಶಿಶು'ವಾಗಿ ಕಂಡರು. ಆ ಚಿಕ್ಕವಯಸ್ಸಿನಲ್ಲೇ ಬದುಕಿನ ಉದ್ದಕ್ಕೂ ಕಾಣಬಹುದಾದ ದೊಡ್ಡ ವ್ಯಕ್ತಿಯನ್ನು, ಓದಬಹುದಾದ ದೊಡ್ಡ ಸಾಹಿತ್ಯವನ್ನು ಕಂಡೆ, ಓದಿದೆ ಎಂಬುದೇ ನನ್ನ ಬದುಕಿನ ಭಾಗ್ಯ.

ಈಗಾಗಲೇ ನನ್ನ ಕೃತಿಗಳು ಮೂರು ಸಂಪುಟ ಹೊರಬಂದಿವೆ. ಈಗ ಕುವೆಂಪು ಕುರಿತ ಸಾಹಿತ್ಯ ಸಂಪುಟಗಳು ಹೊರಬರಲಿವೆ. ಅದರಲ್ಲಿ ಸದ್ಯ 'ಕುವೆಂಪು ಒಲವು ನಿಲವು' ನಿಮ್ಮ ಕೈಗಳಲ್ಲಿದೆ. ನನ್ನ ಎಲ್ಲಾ ಪುಸ್ತಕಗಳಿಗೂ ಒಂದೊಂದು ಕತೆ ಅಲ್ಲ ಪುರಾಣ ಇದೆ. ಅಂತೆಯೇ ಇದಕ್ಕೂ ಕೂಡ : ೩೫ ವರ್ಷಗಳ ಹಿಂದೆ, ಒಂದು ವರ್ಷಕ್ಕೂ ಮೀರಿ, ಜಿ.ಎಸ್. ಶಿವರುದ್ರಪ್ಪ ಅವರು, ಮನೆಗೇ ಕರೆಸಿಕೊಂಡು, ಹಸ್ತಪ್ರತಿಯ ಪುಟಪುಟವನ್ನೂ, ಸಾಲುಸಾಲನ್ನೂ ಪರಿಶೀಲಿಸಿಕೊಟ್ಟರು. ಸ್ವತಃ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ, ಆನಂತರ ಕನ್ನಡ ಸಾಹಿತ್ಯ ಪರಿಷತ್ತಿಗೆ ಅವರೇ ತೆಗೆದುಕೊಂಡು ಹೋಗಿ ಪ್ರಕಟಣೆಗಾಗಿ ಪ್ರಯತ್ನಿಸಿದರು. ಕೊನೆಗೆ ತಾನೇ ರೋಸಿ ಹೋಗಿ, ಈ ಹಸ್ತಪ್ರತಿ ಇರುವುದೇ ಬೇಡವೆಂದು (ಸಂಸರಂತೆ) ಸುಡುವ ದುರಂತಕ್ಕೆ ಕೈ ಹಾಕಿದೆ. ಆಗ ಬೆಂಗಳೂರಿನ ರಾಜಾಜಿನಗರ ಕ್ರೀಡಾ ಮತ್ತು ಸಾಂಸ್ಕೃತಿಕ ಕೇಂದ್ರದ ಬಯಲು ಪರಿಷತ್ತಿನ ವೈ.ಎಸ್.ವಿ. ದತ್ತ ಮತ್ತು ಅವರ ವಿದ್ಯಾರ್ಥಿ, ಮಿತ್ರರು ಮುಂದೆ ಬಂದು; ಮನೆ ಮನೆ ಬೀದಿ ಬೀದಿ ಬಡಾವಣೆ ಬಡಾವಣೆಗಳಲ್ಲಿ ಅಲೆದು, ಹಣ ಸಂಗ್ರಹಿಸಿ ಕೊನೆಗೂ ಪ್ರಕಟಿಸಿದ ಸಾಹಸ, ಕರ್ನಾಟಕ ಸಾಂಸ್ಕೃತಿಕ ಇತಿಹಾಸದಲ್ಲಿ ವಿನೂತನವಾದದ್ದು. ಆವತ್ತಿನ ನನ್ನ ಸ್ಥಿತಿಯಲ್ಲಿ ದತ್ತ ಅವರು ಗೌರವ ಸಂಭಾವನೆಯಾಗಿ ನೀಡಿದ ಹಣವೂ ಕೂಡ ದೊಡ್ಡದೆ ! ಅಂತೆಯೇ ನನ್ನ ಎಲ್ಲಾ ಉಪಟಳ ನುಂಗಿ, ಇಳಾ ಮುದ್ರಣದವರು ಅಚ್ಚುಕಟ್ಟಾಗಿ ಮುದ್ರಿಸಿದ್ದರು.

ಈಗ ಮತ್ತೆ ಜಿ.ಎಸ್. ಶಿವರುದ್ರಪ್ಪ ಅವರೇ ಮುಂದೆ ನಿಂತು ಈ ಮರು ಮುದ್ರಣಕ್ಕೆ ಒತ್ತಾಸೆ

ತಂದದ್ದು, ರಾಷ್ಟ್ರಕವಿ ರಾಷ್ಟ್ರಕವಿಗೆ ತೋರಿದ ಗೌರವವಷ್ಟೆ. ಇಬ್ಬರು ರಾಷ್ಟ್ರಕವಿಗಳ ಒಡನಾಟ ನನ್ನ ಬದುಕಿನ ಹೆಮ್ಮೆಯೆ. ಜೊತೆಗೆ ನನ್ನ ಸಮಕಾಲೀನ ಪ್ರಮುಖ ಕವಿ ಎಸ್.ಜಿ. ಸಿದ್ದರಾಮಯ್ಯ ಅವರ ಕರ್ತೃತ್ವ ಶಕ್ತಿಯ ಫಲದಿಂದ, ಕನ್ನಡ ಪುಸ್ತಕ ಪ್ರಾಧಿಕಾರದ ಆಶ್ರಯದಲ್ಲಿ, ಅಲ್ಲಿನ ಸದಸ್ಯರು, ಕುಲಸಚಿವರು ನೆರವಾಗಿ, ಇಷ್ಟು ಬೇಗ ಅಂದುಕೊಂಡಂತೆ, ನಾಡಿನ ಸಾಹಿತ್ಯ ಅಭಿಮಾನಿಗಳಿಗೆ ತಲುಪಿಸುತ್ತಿದ್ದಾರೆ. ಇದಕ್ಕೆ ಲಕ್ಷ್ಮೀ ಮುದ್ರಣಾಲಯದವರ, ಶ್ರೀಮತಿ ದೇವಿಕಾ ತಂಡದವರ ಸಹಕಾರವೂ ಸೇರಿದೆ.

ಮೊದಲ ಮುದ್ರಣದ ಪಠ್ಯದಲ್ಲಿನ ಅಕ್ಷರ ಸ್ಖಾಲಿತ್ಯವನ್ನು ತಿದ್ದಿರುವುದು, ಅನುಬಂಧ ಮುಂತಾದ ಕಡೆ ಸೇರ್ಪಡೆ, ಬದಲಾವಣೆಗೊಂಡಿರುವುದು – ಈ ಮರುಮುದ್ರಣದ ಮುಖ್ಯ ಅಂಶಗಳು. ಹಾಗೂ 'ಶೂನ್ಯ ಸಂಪಾದನೆ'ಯಿಂದ ಆರಂಭವಾದ ಸಂಪಾದಕ ಶಬ್ದಪ್ರಯೋಗ, ಈಗ ತಲುಪಿರುವ ಅವಸ್ಥೆಗೆ ಬೆಚ್ಚಿಬಿದ್ದು, ಸದ್ಯಕ್ಕೆ ಬೇರೊಂದು ಶಬ್ದ ಹೊಳೆಯದೆ, ಅಧ್ಯಯನ ಆಯ್ಕೆ ಎಂಬ ಜಂಟಿ ಪದವನ್ನೇ ಇರಿಸಿಕೊಳ್ಳಲಾಗಿದೆ. ಮುಂದಿನ ೩೦ ವರುಷಗಳ ಮೂರನೇ ಮುದ್ರಣದ ಹೊತ್ತಿಗೆ ನೋಡಿಕೊಳ್ಳೋಣ.

ಅಂತೂ, ಕುವೆಂಪು ಹಾಗೂ ಅವರ ಸಾಹಿತ್ಯಕ್ಕೆ ಇದೊಂದು (ಅ, ಆ) ಪ್ರವೇಶವಾಗಿ, ಆ ಮೂಲಕ ನೀವೇ ನೇರವಾಗಿ ಅಧ್ಯಯನ ಮಾಡುವಂತಾದರೆ ನನ್ನ ಶ್ರಮ ಸಾರ್ಥಕ.

ಇದಕ್ಕಾಗಿ ಎಲ್ಲರಿಗೂ ನಮನ.

❑

'**ಪು**ಸ್ತಕಮನೆ' - ೧೭ ತಲುಪಿದೆ. ಧನ್ಯವಾದಗಳು. ಕನ್ನಡಿಗರಲ್ಲಿ - ಮುಖ್ಯವಾಗಿ ರಾಜಕಾರಣಿ ಹಾಗೂ ಅಧಿಕಾರಿಗಳಲ್ಲಿ - ಅಸ್ಮಿತೆಯ ಕೊರತೆ ಎಲ್ಲ ಕ್ಷೇತ್ರಗಳಲ್ಲಿಯೂ ಎದ್ದು ಕಾಣುವ ದೌರ್ಬಲ್ಯ. ಹಾಗೆಂದು ಪ್ರಜ್ಞಾವಂತರು ಸುಮ್ಮನೆ ಕೂರುವುದಿಲ್ಲ. ನೀವು ಬೆಂಗಳೂರು ನಾಗರತ್ನಮ್ಮನವರ ಬಗ್ಗೆ ಬೆಳಕು ಚೆಲ್ಲಿ ಉಪಕರಿಸಿದ್ದೀರಿ. ಅಭಿನಂದನೆಗಳು.

ಇಂತೀ ವಂದನೆಗಳು

ಮೈಸೂರು

ಜಿ.ಟಿ. ನಾರಾಯಣರಾವ್

ಕರ್ನಾಟಕದ ಜನತೆಗೆ ಸಾಮೂಹಿಕವಾಗಿ ಬಹಳ ಹಿಂದಿನಿಂದಲೂ ಹಿಡಿದಿರುವ ಜಾಡ್ಯ - 'ಸ್ವಾಭಿಮಾನಶೂನ್ಯತೆ'. ಅಲ್ಲಲ್ಲಿ, ಆಗೀಗ ಕನ್ನಡ ನಾಡಿನ ಸಂಸ್ಕೃತಿಯ ಬಗೆಗೆ ಕೆಚ್ಚಿನ ಹುಚ್ಚು ಆರ್ಭಟಗಳು ಕೇಳಿಬಂದು ಏನನ್ನೋ 'ಕುಟ್ಟೋಣ'ವಾಗುತ್ತಿದೆಯೇ ಹೊರತು ಏನನ್ನೂ 'ಕಟ್ಟೋಣ'ವಾಗಿಲ್ಲ ಎನ್ನುವುದೇ ನಿಜ. ಇದಕ್ಕೆ ಮದ್ದೇನು? 'ಪುಸ್ತಕಮನೆ'ಯ ೧೭ನೇ ಸಂಚಿಕೆ, ಮದ್ದನ್ನು ಸಕಾಲದಲ್ಲಿ ಸೇವಿಸದೆ ರೋಗ ಗುಣವಾಗದೆನ್ನುವುದನ್ನಂತೂ ತಾರ್ಕಿಕವಾಗಿ, ಸಾಧಾರವಾಗಿ, ಹೊಡೆದು ಹೇಳಿದೆ.

ಕೇವಲ ಮಿಂಚಿ ಕಣ್ಮರೆಯಾಗದೆ ಶಾಶ್ವತವಾದ ಸಂಸ್ಕೃತಿ ದೀಪವನ್ನು ಬೆಳಗಿ ಹೋದ 'ಬೆಂಗಳೂರು ನಾಗರತ್ನಮ್ಮ'ನವರನ್ನು ಕುರಿತು ನಮ್ಮ ದಿವ್ಯ ನಿರ್ಲಕ್ಷ್ಯವನ್ನು ಲಜ್ಜೆಗೇಡಿತನದ ಉಜ್ವಲ(!) ಉದಾಹರಣೆಯಾಗಿ ನೀಡಿ ಹಿರಿಯರ ಅಭಿಪ್ರಾಯಗಳನ್ನು ಕ್ರೋಢೀಕರಿಸಿ, ಆ ಮಹಾ ಮಹಿಳೆಗೆ ಸಲ್ಲಬೇಕಾದ ಗೌರವವನ್ನು ನಿಮ್ಮ ಮಾತುಗಳಲ್ಲೂ ಸಲ್ಲಿಸಿ ತೋರಿಸಿದ್ದೀರಿ. ಇದಕ್ಕಾಗಿ ನಿಮಗೆ ಹಾರ್ದಿಕ ಅಭಿನಂದನೆಗಳನ್ನು ಅರ್ಪಿಸುತ್ತೇನೆ. ಆದರೆ, ಯಾವುದೇ ಸಂಸ್ಥೆಯ ಸಭಾಂಗಣದಲ್ಲಿ ಅವರ ಭಾವಚಿತ್ರವನ್ನು ತೂಗು ಹಾಕುವುದು ಅಥವಾ ಹಾಕದಿರುವುದು ದೊಡ್ಡ ವಿಷಯವಾದೀತೆನ್ನುವುದನ್ನು ಒಪ್ಪಲಾರೆ. ಪುಸ್ತಕಮನೆಯ ಈ ಸಂಚಿಕೆ ಹೊರಬೀಳುವ ಮುನ್ನವೆ ಸಿದ್ಧವಾದ 'ಅನನ್ಯ'ದ ೨೦೦೮ರ ಕ್ಯಾಲೆಂಡರ್‌ನ ಮೊದಲ ಪುಟವೇ ನಾಗರತ್ನಮ್ಮನವರಿಗೆ ಮೀಸಲಾಗಿದ್ದರೂ ಇದರ ಪರಿಣಾಮವೇನೂ ಮಹತ್ತ್ವದ್ದಾಗಬಹುದೆನಿಸುವುದಿಲ್ಲ. ಬಹಳ ಹಿಂದೆಯೇ ಬಿ.ವಿ.ಕೆ. ಶಾಸ್ತ್ರಿಯವರು ಬರೆದ ಪುಸ್ತಿಕೆ ಪ್ರಕಟವಾಗಿದೆ. ಇತ್ತೀಚೆಗೆ ಕ.ಸಂ.ನ್ಯ.ಅ. ಹೊರತಂದಿರುವ 'ಕಲಾಚೇತನ' ಗ್ರಂಥದಲ್ಲೂ ಶ್ರೀಮತಿಯವರನ್ನೂ ಅವರ ಅನುಪಮ ಕೊಡುಗೆಯನ್ನೂ ಸ್ಮರಿಸುವ ಸುದೀರ್ಘ ಲೇಖನವಿದೆ. ಏನಿದ್ದೂ, ನಾಗರತ್ನಮ್ಮನವರಿಗೆ ನಾವು ನ್ಯಾಯಸಲ್ಲಿಸಿಲ್ಲವೆಂದು ಒಪ್ಪಿಕೊಂಡು ಒಟ್ಟಾಗಿ ಏನು ಮಾಡಬೇಕೆಂಬದತ್ತ ಆಲೋಚಿಸಬೇಕೆನ್ನುವುದು ಸರಿಯಾದೀತು.

ಇಡೀ ಪುಸ್ತಿಕೆಯನ್ನೇ ಆ ಹಿರಿಯ ಚೇತನದ ನೆನಪಿಗೆ ಮುಡಿಪಿಟ್ಟ ನಿಮಗೆ ಮತ್ತೊಮ್ಮೆ ಅಭಿನಂದನೆಗಳು.

ತಮ್ಮ ಕಳಕಳಿಯನ್ನು ಗೌರವಿಸುವ

ಟಿ.ಎಸ್. ಸತ್ಯವತಿ

ಬೆಂಗಳೂರು

ವಿಶ್ವ ಕನ್ನಡದ ಕನಸು

ಜಿ.ಎಸ್. ಶಿವರುದ್ರಪ್ಪ

ಮಂಗಳೂರಿನ ಹೃದಯವಾಹಿನಿಯ ಸಹಯೋಗದೊಂದಿಗೆ ಕುವೈತ್ ಕನ್ನಡ ಕೂಟವು ವ್ಯವಸ್ಥೆಗೊಳಿಸಿರುವ ಎರಡು ದಿನಗಳ ಈ ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನದ ಅಧ್ಯಕ್ಷತೆಯ ಗೌರವವನ್ನು ನನಗೆ ತಂದುಕೊಟ್ಟ ಈ ಸಮಾವೇಶದ ವ್ಯವಸ್ಥಾಪಕರಾದ ಕುವೈತ್ ಕನ್ನಡ ಕೂಟದ ಅಧ್ಯಕ್ಷರಾದ ಶ್ರೀ ಸುಧಾಕರ ಶೆಟ್ಟಿ ಮತ್ತು ಪದಾಧಿಕಾರಿಗಳೇ,

ಈ ಸಮ್ಮೇಳನಕ್ಕೆ ಕರ್ನಾಟಕದಿಂದ ಹಾಗೂ ಮತ್ತೆ ಬೇರೆಬೇರೆ ಕಡೆಗಳಿಂದ ಬಂದಿರುವ, ವಿವಿಧ ಸಾಂಸ್ಕೃತಿಕ ಕ್ಷೇತ್ರದ ಪ್ರತಿನಿಧಿಗಳೇ ಮತ್ತು ಸಹೃದಯರೇ,

ನಾವೆಲ್ಲ ಇಂದು ಕುವೈತ್ ಕನ್ನಡ ಕೂಟದ ಇಪ್ಪತ್ತೆರಡನೆ ಕನ್ನಡ ರಾಜ್ಯೋತ್ಸವದಲ್ಲಿ ಮತ್ತು ಪ್ರಥಮ ವಿಶ್ವ ಕನ್ನಡ-ಸಾಹಿತ್ಯ-ಸಮ್ಮೇಳನದಲ್ಲಿ ಪಾಲುಗೊಳ್ಳುವ ಅವಕಾಶ ಲಭ್ಯವಾದದ್ದು, ಒಂದು ವಿಶೇಷವಾದ ಘಟನೆ ಎಂದು ಭಾವಿಸುತ್ತ ನಿಮ್ಮೆಲ್ಲರ ಹಾಗೂ ನನ್ನ ಪರವಾಗಿ ವ್ಯವಸ್ಥಾಪಕರಿಗೆ ವಂದನೆಗಳನ್ನೂ ಅಭಿನಂದನೆಗಳನ್ನೂ ಸಲ್ಲಿಸುತ್ತೇನೆ.

ಈ ಜಗತ್ತಿನ ವಿಸ್ತಾರದಲ್ಲಿ ಅಂಗೈ ಅಗಲದಷ್ಟೂ ಇಲ್ಲದ ಕರ್ನಾಟಕ ಎಂಬ ಭೂಭಾಗದಲ್ಲಿ ನೆಲಸಿದ ಕನ್ನಡಿಗರಾದ ನಾವು, ಕುವೈತ್‌ನಂಥ ಅನ್ಯ ದೇಶೀಯವಾದ ನೆಲದ ಮೇಲೆ ನಿಂತು 'ವಿಶ್ವ ಕನ್ನಡ'ದ ಕನಸನ್ನು ಕಾಣುವಂತಾಗಿರುವುದು ಮನುಕುಲದ ಚರಿತ್ರೆಯ ಗತಿಯಲ್ಲಿ ಒಂದು ಆಶ್ಚರ್ಯವೇ ಸರಿ. ಎಲ್ಲಿಯ ಕುವೈತ್, ಎಲ್ಲಿಯ ಕರ್ನಾಟಕ, ಅದೆಲ್ಲಿಯ ವಿಶ್ವ ಕನ್ನಡ ಸಮ್ಮೇಳನ-ಎತ್ತಣಿಂದೆತ್ತ ಸಂಬಂಧವಯ್ಯಾ? - ಎಂದು ಮೇಲು ನೋಟಕ್ಕೆ ಅನ್ನಿಸಿದರೂ ಕುವೈತ್‌ನ ಈ ನೆಲ ತತ್ಕಾಲಕ್ಕಾದರೂ ಮಾನಸಿಕವಾಗಿ ಕರ್ನಾಟಕವೇ ಆಗಿದೆ ಎನ್ನುವುದು ಸುಳ್ಳಲ್ಲ. ಯಾಕೆಂದರೆ ನಿಜವಾದ ಕನ್ನಡಿಗ ತಾನು ನಿಂತಲ್ಲಿಗೇ ಕನ್ನಡದ ಗಡಿಗಳನ್ನು ವಿಸ್ತರಿಸಿಕೊಳ್ಳುತ್ತ 'ಎಲ್ಲಾದರೂ ಇರು, ಎಂತಾದರು ಇರು, ಎಂದೆಂದಿಗು ನೀ ಕನ್ನಡವಾಗಿರು' ಎಂಬ ಕವಿವಾಣಿಯನ್ನು ನಿಜ ಮಾಡುತ್ತಾನೆ. ಕುವೈತ್‌ನ ಕನ್ನಡ ಬಂಧುಗಳು ಮಾಡುತ್ತಿರುವುದೂ ಅದೇ ಕೆಲಸವನ್ನು.

ಒಂದು ಕಾಲಕ್ಕೆ 'ಸ್ವದೇಶೋ ಭುವನತ್ರಯಂ' ಎನ್ನುವ ಉಕ್ತಿ ಭಾರತೀಯ ಮನೋಧರ್ಮದ ಪ್ರತೀಕವಾಗಿತ್ತು. ನಾನು ನಿಂತ ನೆಲದಲ್ಲೇ ಮೂರು ಲೋಕಗಳೂ ಇವೆ - ಎಂಬ ಸೀಮಿತ ಜಗತ್ತಿನ ಕಲ್ಪನೆಯಲ್ಲಿ ಕಟ್ಟುಗೊಂಡ ಮನಸ್ಸು ಈಗ 'ಭುವನತ್ರಯವೇ ಸ್ವದೇಶ' ಎಂಬ ನಿಲುವಿಗೆ ಬೆಳೆದಿರುವುದು ವಿಶೇಷದ ಸಂಗತಿಯಾಗಿದೆ.

'ಸ್ವದೇಶೋ ಭುವನತ್ರಯಂ' ಎಂಬ ನಿಲುವು ಒಂದು ರೀತಿಯ ತೃಪ್ತಿಯನ್ನು, ನಿಂತ ನೆಲೆಯಿಂದಾಚೆಗೆ ಹೋಗುವ ವಿಚಾರದಲ್ಲಿ ಅನಾಸಕ್ತಿಯನ್ನು ಸೂಚಿಸುತ್ತದೆ. ನಮ್ಮ ದೇಶದ ಚರಿತ್ರೆಯನ್ನು ನೋಡಿದರೆ, ಆಕ್ರಮಣಶೀಲರಾದ ಹೊರ ದೇಶಗಳವರು ಉದ್ದಕ್ಕೂ ನಮ್ಮ ದೇಶದ ಮೇಲೆ ದಾಳಿ ಮಾಡಿ, ತಮ್ಮ ನೆಲೆಗಳನ್ನು ಸ್ಥಾಪಿಸಿದ ಸಂಗತಿ ವಿಶೇಷವಾಗಿ ಗಮನಕ್ಕೆ ಬರುವಂತೆ, ನಮ್ಮ ದೇಶದವರು, ಸಮುದ್ರವೇ ಮೇರೆಯಾಗಿ ಉಳ್ಳ ಈ ಭರತ ಖಂಡದಿಂದಾಚೆಗೆ ಹೋಗಿ ಅನ್ಯ ದೇಶಗಳನ್ನು ಗೆದ್ದು ತಮ್ಮ ನೆಲೆಗಳನ್ನು ಸ್ಥಾಪಿಸಿದ್ದು ತೀರಾ ವಿರಳವೆಂದೇ ಹೇಳಬೇಕು. ಗಮನಿಬೇಕಾದ ಸಂಗತಿಯೆಂದರೆ, ಇಂದಿನಂತೆ ಹಿಂದೆ ಸಮುದ್ರವನ್ನು ದಾಟಿ ಯಾವುದೇ ಹೊರದೇಶಕ್ಕೆ ಹೋಗುವುದು ಹಿಂದೂ ಧರ್ಮಶಾಸ್ತ್ರಗಳ ಪ್ರಕಾರ ದಂಡನಾರ್ಹವಾದ ಅಪರಾಧವಾಗಿತ್ತು. ಒಂದು ವೇಳೆ ಹಾಗೆ ಹೋಗಿ ಬಂದವರು ಶಾಸ್ತ್ರೋಕ್ತವಾದ ಶುದ್ಧೀಕರಣಕ್ಕೆ ಒಳಗಾಗಬೇಕಾಗಿತ್ತು.

ಇಂಡಿಯಾಕ್ಕೆ ಹೀಗೆ ನುಗ್ಗಿ ಬಂದವರ ಪರಂಪರೆಯೆ ಇದೆ : ಮೊದಲು ಅಲೆಗ್ಸಾಂಡರ ಕಾಲದಲ್ಲಿ

ಗ್ರೀಕರು ಬಂದರು. ಅನಂತರ ಮಂಗೋಲಿಯನ್ನರು ಬಂದರು, ಮೊಘಲರು ಬಂದರು, ಪೋರ್ಚುಗೀಸರು ಬಂದರು; ಫ್ರೆಂಚರು ಬಂದರು, ಬ್ರಿಟಿಷರು ಬಂದು ಬಹುಕಾಲ ದೇಶವನ್ನು ಕೊಳ್ಳೆ ಹೊಡೆದರು.

ಕರ್ನಾಟಕ ಚಕ್ರವರ್ತಿಗಳು, ಕರ್ನಾಟಕವನ್ನು ದಾಟಿ ಭಾರತದೊಳಗಿನ ಕೆಲವು ಪ್ರದೇಶಗಳನ್ನು ಗೆದ್ದರು. ಒರಿಸ್ಸಾ-ಬಿಹಾರ-ಪಶ್ಚಿಮ ಬಂಗಾಳ-ನೇಪಾಳಗಳನ್ನು ಕೆಲವು ಕಾಲ ಆಳಿದ್ದರ ದಾಖಲೆಗಳಿವೆ.

ಆದರೆ ಪಶ್ಚಿಮದ ಜನ, ಸುಮಾರು ನಾಲ್ಕು ಶತಮಾನಗಳ ಹಿಂದೆಯೇ ತಾವು ನಿಂತ ನೆಲೆಯಿಂದಾಚೆಯ ಭೂಖಂಡಗಳ ಅನ್ವೇಷಣೆಗೆ, ಆಕ್ರಮಣಕ್ಕೆ, ವಾಣಿಜ್ಯಕ್ಕೆ, ವಸಾಹತುಗಳನ್ನು ಸ್ಥಾಪಿಸುವುದಕ್ಕೆ ಕೈಕೊಂಡ ಪರ್ಯಟನದ ಉತ್ಸಾಹಕ್ಕೆ ಹೋಲಿಸಿದರೆ, ನಮ್ಮವರ ಮನೋಧರ್ಮ ಈ ವಿಷಯದಲ್ಲಿ ಒಂದು ಬಗೆಯ ತಟಸ್ಥತೆಯಂತೆ ತೋರುತ್ತದೆಂಬುದರಲ್ಲಿ ಸಂದೇಹವಿಲ್ಲ. ಆದರೆ ವಾಸ್ತವ ಸಂಗತಿಯೇನೆಂದರೆ ಭಾರತೀಯ ಮನಸ್ಸು, ಬಹಿರ್ಮುಖಿ ಪರ್ಯಟನೆಗಿಂತ ಅಂತರಂಗದ ಅನ್ವೇಷಣೆಯ ಕಡೆಗೆ ಹೆಚ್ಚು ಒಲಿದದ್ದು. ಪಶ್ಚಿಮದ ಮನಸ್ಸು ಬಹಿರಂಗ ಜಗತ್ತಿನ ಸಾಹಸ ಯಾತ್ರೆಗೆ ಆಶಿಸುವಂಥದ್ದು. ಈ ಎರಡು ಪ್ರವೃತ್ತಿಗಳನ್ನು ನಮ್ಮ ಪುರಾಣಗಳಲ್ಲಿ ಬರುವ ಗಣಪತಿ ಮತ್ತು ಷಣ್ಮುಖ ಇವರಿಬ್ಬರ ಪ್ರಪಂಚ ಪರ್ಯಟನದ ಸ್ಪರ್ಧೆಯ ಕಥೆ ಸೊಗಸಾಗಿ ಸಂಕೇತಿಸುತ್ತದೆ. ಇದನ್ನು ನಾನು 'ವಿನಾಯಕ ಪ್ರಜ್ಞೆ' ಮತ್ತು 'ಷಣ್ಮುಖ ಸಾಹಸ' ಎಂದು ಕರೆಯಲು ಅಪೇಕ್ಷಿಸುತ್ತೇನೆ.

ಒಮ್ಮೆ ಕೈಲಾಸದಲ್ಲಿ ಪಾರ್ವತೀ ಪರಮೇಶ್ವರರಿಬ್ಬರೂ ಸುಖ ಸಂಕಥಾ ವಿನೋದದಲ್ಲಿ ತೊಡಗಿದ್ದಾಗ ತಮ್ಮಿಬ್ಬರ ಮಕ್ಕಳಾದ ಗಣಪತಿ ಷಣ್ಮುಖರನ್ನು ಕರೆದು, 'ನಿಮ್ಮಿಬ್ಬರಲ್ಲಿ ಯಾರು ಮೊದಲು ಈ ಜಗತ್ತನ್ನು ಸುತ್ತಿ ಬರುತ್ತೀರೋ ಅವರಿಗೆ ಒಂದು ಬಹುಮಾನ' ಎಂದು ಘೋಷಿಸುತ್ತಾರೆ. ಷಣ್ಮುಖ ಕೂಡಲೇ ತನ್ನ ವಾಹನವಾದ ನವಿಲನ್ನೇರಿ ಪ್ರಪಂಚ ಪ್ರದಕ್ಷಿಣೆಗೆ ಹೊರಟು ಬಿಡುತ್ತಾನೆ. ಆದರೆ ಅವನು ಹೊರಟು ಎಷ್ಟು ಹೊತ್ತಾದರೂ ವಿನಾಯಕನು ಕೂತಲ್ಲೆ ಕೂತಿರುತ್ತಾನೆ. ಷಣ್ಮುಖನು ಜಗತ್ತನ್ನು ಸುತ್ತಿ ಇನ್ನೇನು ಬಂದು ಬಿಡುತ್ತಾನೆ ಎನ್ನುವಷ್ಟು ಹೊತ್ತಾದರೂ ಈ ಗಣಪತಿ ಕೂತೇ ಇದ್ದಾನೆ. ಪಾರ್ವತೀ ಪರಮೇಶ್ವರರು ಆಶ್ಚರ್ಯದಿಂದ ಕುತೂಹಲದಿಂದ ವೀಕ್ಷಿಸುತ್ತಿದ್ದಂತೆ, ಕೊನೆಗೂ ವಿನಾಯಕನು ಮೇಲೆದ್ದು, ಪಾರ್ವತೀ-ಪರಮೇಶ್ವರರನ್ನು, ಒಂದಲ್ಲ, ಮೂರು ಸಲ ಸುತ್ತಿ, ಗೆಲುವಿನ ಮುಖದಿಂದ ಜಗತ್ತಿನ ಸೃಷ್ಟಿಕರ್ತರಾದ ಪಾರ್ವತೀ ಪರಮೇಶ್ವರರ ಎದುರಿಗೆ ಕೂತುಕೊಳ್ಳುತ್ತಾನೆ. ಸ್ವಲ್ಪ ಹೊತ್ತಿನ ನಂತರ ನವಿಲನ್ನೇರಿ ಇಡೀ ಜಗತ್ತನ್ನು ಸುತ್ತಿ ಬಂದ ಷಣ್ಮುಖ ಬಂದು ನೋಡುತ್ತಾನೆ, ಗಣಪತಿ ತನ್ನ ಪಂದ್ಯವನ್ನು ಮುಗಿಸಿ ಅನಾಯಾಸವಾಗಿ ಕೂತಿದ್ದಾನೆ ! ಈ ಪ್ರದಕ್ಷಿಣೆಯ ಸ್ಪರ್ಧೆಯ ಬಹುಮಾನ ದೊರಕಿದ್ದು ವಿನಾಯಕನಿಗೇ.

ಈ ಕಥೆಯ ಮಥಿತಾರ್ಥವೇನೆಂದರೆ, ಜಗತ್ತಿನ ಮಾತಾಪಿತರಾದ ಪಾರ್ವತೀಪರಮೇಶ್ವರರನ್ನು ಒಂದು ಸುತ್ತು ಹಾಕಿದ್ದು, ಜಗತ್ತನ್ನೆ ಸುತ್ತು ಹಾಕಿದ ಹಾಗೆ; ಅವರನ್ನು ಹೊರತುಪಡಿಸಿ ಬೇರೆ ಜಗತ್ತೆಲ್ಲಿದೆ? ಇದು ವಿನಾಯಕನ ತಿಳಿವಳಿಕೆ ಅಥವಾ ವಿನಾಯಕ ಪ್ರಜ್ಞೆ, ಇದೊಂದು ರೀತಿಯಲ್ಲಿ ಅಂತರ್‌ದೃಷ್ಟಿ. ಆದರೆ ಷಣ್ಮುಖನು ಸುತ್ತಿದ್ದೂ ವಾಸ್ತವವಾದ ಜಗತ್ತು ಎನ್ನುವುದು ನಿಜವಾದರೂ ಅದೂ ಬಹಿರಂಗದ ಜಗತ್ತು. ಭಾರತೀಯ ಮನಸ್ಸಿನ ಮುಖ್ಯ ಕಾಳಜಿ ಅಂತರಂಗ ಜಗತ್ತಿನ ಅನ್ವೇಷಣೆ. ಪಶ್ಚಿಮದ ಮನಸ್ಸಿನ ಮುಖ್ಯ ಕಾಳಜಿ ಬಹಿರಂಗ ಜಗತ್ತನ್ನು ಅರಿಯುವ ಹಾಗೂ ಗೆಲ್ಲುವ ಸಾಹಸ.

ಈ ಹೊತ್ತು, ಅಂತರಂಗ ಜಗತ್ತಿನ ಅನ್ವೇಷಣೆ ನಮ್ಮ ಪರಂಪರೆಯ ಒಂದು ಭಾಗವಾಗಿ ಮನುಷ್ಯ ಇಂದು ಬದಲಾದ ಜಗತ್ತಿನಲ್ಲಿ ಹೊಸ ಸವಾಲುಗಳನ್ನು ಎದುರಿಸಬೇಕಾಗಿದೆ. ನಾವು ಕೂತಲ್ಲೆ ಕೂರದೆ ಈ ಜಗತ್ತಿನಲ್ಲಿ ಎಲ್ಲಿಗೆ ಬೇಕಾದರೂ ಹೋಗಿ ನಮ್ಮ ಬದುಕನ್ನು ರೂಪಿಸಿಕೊಳ್ಳಬಲ್ಲೆವೆಂಬ ಧೈರ್ಯ ಮತ್ತು ವಿಶ್ವಾಸ ಮೂಡಿದೆ. ಭಾರತದ ಬೇರೆಬೇರೆ ಪ್ರಾಂತಗಳ ಜನರಂತೆ, ಕನ್ನಡಿಗರೂ ತಮ್ಮ ಅದೃಷ್ಟವನ್ನರಸಿಕೊಂಡು ಜಗತ್ತಿನ ಬೇರೆ ಬೇರೆಯ ದೇಶಗಳಿಗೆ ಹೋಗಿ ಉದ್ಯೋಗಸ್ಥರಾಗಿ ನೆಲೆ ನಿಂತಿದ್ದಾರೆ. ಈ ಷಣ್ಮುಖ ಸಾಹಸ ಪರಂಪರೆಗೆ ಕುವೈತ್‌ಗೆ ಬಂದು ನೆಲಸಿರುವ ಕನ್ನಡಿಗರೂ ಇದೇ ಪರಂಪರೆಗೆ ಸೇರುತ್ತಾರೆ.

ವಿವಿಧ ದೇಶಗಳಿಗೆ ಹೋಗಿ ಹೀಗೆ ನೆಲೆ ನಿಂತವರ ಹೊಟ್ಟೆ-ಬಟ್ಟೆಯ ಬದುಕು ನೆಟ್ಟಗಾದರೂ, ಮನಸ್ಸು ಎಂಬುದೊಂದು ಇದೆಯಲ್ಲ ಅದು ತನ್ನ ತುಂಬ ತುಂಬಿಕೊಂಡ 'ಬಿಟ್ಟು ಬಂದ ಊರಿನ' ನೆನೆಪುಗಳನ್ನು ಅಷ್ಟು ಸುಲಭವಾಗಿ ಮರೆಯುವುದು ಸಾಧ್ಯವೇ ಇಲ್ಲ. ಮನಸ್ಸಿನ ಈ ಹಸಿವು ಹಿಂಗಬೇಕಾದರೆ ಅದಕ್ಕೆ ತನ್ನ ದೇಶೀಯವಾದ ಸಾಂಸ್ಕೃತಿಕ ಸ್ಮರಣೆ ಮತ್ತು ಸಂಪರ್ಕಗಳನ್ನು ಏರ್ಪಡಿಸುವ ಪ್ರಯತ್ನಗಳಾಗಬೇಕು.

ಹತ್ತನೆ ಶತಮಾನದ ಕವಿಯಾದ ಪಂಪ ಇಂದಿನ ಆಂಧ್ರಪ್ರದೇಶದ ವೇಮುಲವಾಡ ಎಂಬ, ಚಾಳುಕ್ಯರಾಜ ಅರಿಕೇಸರಿಯ ರಾಜಾಸ್ಥಾನದ ಭೋಗ ವೈಭವಗಳ ನಡುವೆ, ತಾನು ಹುಟ್ಟಿ ಬೆಳೆದ ಎಳೆಯಂದಿನ ಬನವಾಸಿಯನ್ನು ನೆನೆದು 'ಆರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ' ಎಂದು ಹಂಬಲಿಸಲಿಲ್ಲವೆ? ಇಪ್ಪತ್ತನೆ ಶತಮಾನದ ಮಹಾಕವಿ ಕುವೆಂಪು ಅವರು ಉದ್ಯೋಗ ನಿಮಿತ್ತವಾಗಿ ಮೈಸೂರಿನಲ್ಲಿ ನೆಲಸಬೇಕಾಗಿ ಬಂದಾಗ ತಮ್ಮ ಬಾಲ್ಯ-ಯೌವ್ವನಗಳ ನೆನಪಿನ ಗಣಿಯಾದ ಮಲೆನಾಡನ್ನು ನಿರಂತರವಾಗಿ ನೆನೆಯುತ್ತ 'ಹೋಗುವೆನು ನಾ ಮಲೆನಾಡಿಗೆ, ನನ್ನ ಒಲುಮೆಯ ಗೂಡಿಗೆ' ಎಂದು ಕೊರಗಲಿಲ್ಲವೆ? ಹೀಗಿರುವಾಗ ಕನ್ನಡದ ನೆಲದಿಂದ ಸಾವಿರಾರು ಮೈಲಿ ದೂರದ ಅನ್ಯ ಭಾಷಿಕ-ಅನ್ಯ ಸಾಂಸ್ಕೃತಿಕ ಪರಿಸರಗಳಲ್ಲಿ ಬದುಕುತ್ತಿರುವ ಕನ್ನಡಿಗರಿಗೆ ಕರ್ನಾಟಕದ ಹಾಗೂ ಭಾರತದ ನೆನಪುಗಳು ಇನ್ನೂ ತೀವ್ರತರವಾಗಿ ಕಾಡುತ್ತವೆ ಎನ್ನುವುದು ವಾಸ್ತವದ ಸಂಗತಿಯಾಗಿದೆ. ಈ ಹೊರನಾಡ ಕನ್ನಡಿಗರು ಇಂಥ ಪರಿಸ್ಥಿತಿಯಲ್ಲಿ ಎದುರಿಸಬೇಕಾದ ಸವಾಲುಗಳು ಸ್ಥೂಲವಾಗಿ ಎರಡು ಎನ್ನಬಹುದು. ಒಂದು ತೀರಾ ವಿಭಿನ್ನವೂ, ಆಕರ್ಷಕವೂ, ಪ್ರಬಲವೂ, ಲೌಕಿಕವೂ ಆದೊಂದು ಜೀವನಕ್ರಮದೊಂದಿಗೆ ಮುಖಾಮುಖಿಯಾಗಿ ಬದುಕುವುದು. ಎರಡನೆಯದು, ಈ ಅನ್ಯ ಪರಿಸರದ ಸಂಸ್ಕೃತಿಯ ನಡುವೆ ತಾವು ಕಳೆದುಹೋಗದೆ, ಕರಗಿ ಹೋಗದೆ ತಮ್ಮ ವ್ಯಕ್ತಿತ್ವವನ್ನು ಉಳಿಸಿಕೊಳ್ಳುವುದು ಹೇಗೆ ಎನ್ನುವುದು. ಈ ಸಾಂಸ್ಕೃತಿಕ ಸಂಘರ್ಷದಲ್ಲಿ, ತಮ್ಮ ನೆನಪುಗಳನ್ನು, ತಮ್ಮ ವ್ಯಕ್ತಿತ್ವವನ್ನು ಸಂರಕ್ಷಿಸಿಕೊಳ್ಳುವ ಕಾಳಜಿಗಳಿಂದಾಗಿಯೆ ಕನ್ನಡ ಕೂಟಗಳಂಥ ಸಾಂಸ್ಕೃತಿಕ ಸಂಘಟನೆಗಳು ಹುಟ್ಟಿಕೊಂಡಿರುವುದು. ಅಮೆರಿಕಾ, ಇಂಗ್ಲೆಂಡ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಅಬುದಾಬಿ, ಕುವೈತ್ ಈ ದೇಶಗಳ ಕನ್ನಡಿಗರ ಸಂಘಟನೆಗಳು ತುಂಬ ಕ್ರಿಯಾಶೀಲವಾಗಿ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿವೆ ಎನ್ನುವುದು ತುಂಬ ಸಂತೋಷದ ಸಂಗತಿಯಾಗಿದೆ. ಅಮೆರಿಕಾದಲ್ಲಿ ೨೫ಕ್ಕೂ ಹೆಚ್ಚಿನ ಕನ್ನಡ ಕೂಟಗಳಿವೆ. ವಿಶ್ವ ಕನ್ನಡ ಸಮ್ಮೇಳನ ಕನಸು ಕಂಡದ್ದು, ಅಮೆರಿಕಾ ಕನ್ನಡಿಗರು. ಈಗಾಗಲೆ ನಾಲ್ಕೈದು ವಿಶ್ವ ಕನ್ನಡ ಸಮ್ಮೇಳನಗಳಾಗಿವೆ. ನನ್ನ ಅದೃಷ್ಟ ಎಂದರೆ ಕೆಲವು ವರ್ಷಗಳ ಹಿಂದೆ ಫೀನಿಕ್ಸ್‌ನಲ್ಲಿ ನಡೆದ ಪ್ರಥಮ ವಿಶ್ವ ಕನ್ನಡ ಸಮ್ಮೇಳನದಲ್ಲಿ ಮುಖ್ಯ ಅತಿಥಿಯಾಗಿ ನಾನು ಭಾಗವಹಿಸಿದ್ದೆ. ಈಗ ಕುವೈತ್ ಕನ್ನಡ ಕೂಟದ ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನದ ಅಧ್ಯಕ್ಷತೆಯ ಗೌರವ ನನಗೆ ಸಂದಿದೆ. ಹೊರನಾಡ ಕನ್ನಡಿಗರು ತಮ್ಮನ್ನು ಯಾವುದೇ ಜಾತಿ-ಧರ್ಮ-ವೃತ್ತಿಗಳ ಮೂಲಮಾನದಲ್ಲಿ ಗುರುತಿಸಿಕೊಂಡು ಸಂಘಟಿತರಾಗುವುದಕ್ಕಿಂತ ತಾವೆಲ್ಲ ಕನ್ನಡಿಗರು ಎಂಬ ಕಾರಣಕ್ಕೆ ಒಂದುಗೂಡುವುದು ಅತ್ಯಂತ ಶ್ರೇಯಸ್ಕರವಾದದ್ದು.

ನನಗೆ ಆಶ್ಚರ್ಯದ ಮಾಹಿತಿ ಎಂದರೆ, ಕುವೈತ್‌ನಂತಹ ಪುಟ್ಟ ದೇಶದಲ್ಲಿ ಸುಮಾರು ಮೂವತ್ತಾರು ಸಾವಿರ ಕನ್ನಡಿಗರಿದ್ದಾರೆ - ಎನ್ನುವುದು. ಇಂದಿನ ಸಮ್ಮೇಳನವನ್ನು ವ್ಯವಸ್ಥೆಗೊಳಿಸಿರುವ ಕುವೈತ್ ಕನ್ನಡ ಕೂಟ ಪ್ರಾರಂಭವಾದದ್ದು ೧೯೮೫ರಲ್ಲಿ, ಅಂದರೆ ಇಪ್ಪತ್ತೆರಡು ವರ್ಷಗಳ ಹಿಂದೆ. ಕಳೆದ ೨೨ ವರ್ಷಗಳಿಂದಲೂ ನಿರಂತರವಾಗಿ ಕನ್ನಡ ರಾಜ್ಯೋತ್ಸವವನ್ನು ನಡೆಯಿಸಿಕೊಂಡು ಬರುತ್ತಿರುವ ಈ ಕನ್ನಡ ಕೂಟದ ನಿರ್ವಹಣೆ ಇಲ್ಲಿ ನೆಲಸಿರುವ ಒಂದು ನೂರಾ ಎಂಬತ್ತು ಕುಟುಂಬಗಳಿಂದ ಎನ್ನುವುದು ಗಮನಿಸಬೇಕಾದ ಸಂಗತಿಯಾಗಿದೆ. ತಮ್ಮ ಮಕ್ಕಳಿಗೆ ಕನ್ನಡವನ್ನು ಕಲಿಸುವುದು, ವಿವಿಧ ಸಾಂಸ್ಕೃತಿಕ ಚಟುವಟಿಕೆಗಳನ್ನು ಏರ್ಪಡಿಸುವುದು, ಕನ್ನಡ ಗ್ರಂಥಾಲಯವನ್ನು ನಿರ್ವಹಿಸುವುದು, 'ಮರಳ ಮಲ್ಲಿಗೆ' ಎಂಬ ಹೆಸರಿನ ತ್ರೈಮಾಸಿಕ ಪತ್ರಿಕೆಯನ್ನು ಪ್ರಕಟಿಸುವುದು - ಇತ್ಯಾದಿ ಕಾರ್ಯಕ್ರಮಗಳ ಮೂಲಕ ತಮ್ಮೊಳಗಿನ ಕನ್ನಡತನವನ್ನು ಹಚ್ಚಹಸಿರಾಗಿ ಉಳಿಸಿಕೊಂಡಿರುವ, ಕುವೈತ್ ಕನ್ನಡ ಕೂಟ ಮೊಟ್ಟಮೊದಲ ಬಾರಿಗೆ ಇಂಥ ಒಂದು ಕನ್ನಡಿಗರ ವಿಶೇ ಸಮಾವೇಶವನ್ನು ಹಮ್ಮಿಕೊಂಡ ಸಾಹಸಕ್ಕೆ ಈ ಕನ್ನಡ ಕೂಟದ ಅಧ್ಯಕ್ಷರಾದ ಶ್ರೀ ಸುಧಾಕರ ಶೆಟ್ಟಿ ಹಾಗೂ ಇನ್ನಿತರ ಪದಾಧಿಕಾರಿಗಳನ್ನೂ ಮತ್ತು ಮಂಗಳೂರಿನ ಹೃದಯವಾಹಿನಿಯ ಶ್ರೀ ಮಂಜುನಾಥ ಸಾಗರ್ ಅವರನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಜಗತ್ತಿನ ಬೇರೆ ಬೇರೆ ಕನ್ನಡ ಒಕ್ಕೂಟಗಳ ಪ್ರತಿನಿಧಿಗಳನ್ನೂ, ಕರ್ನಾಟಕದ ಕವಿ-ಕಲಾವಿದರನ್ನೂ ಮತ್ತು ವಿವಿಧ ಕ್ಷೇತ್ರಗಳ ಗಣ್ಯರನ್ನೂ ಬರಮಾಡಿಕೊಂಡಿರುವ ಈ ಸಮ್ಮೇಳನವನ್ನು 'ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನ' ಎಂದು ಕರೆದಿರುವುದು ಅತ್ಯಂತ ಉಚಿತವಾಗಿದೆ. ಸಂಸ್ಕೃತಿ ಎನ್ನುವ ಪದ ಭಾಷೆ - ಸಾಹಿತ್ಯ ಇವುಗಳನ್ನೂ ಒಳಗೊಂಡಂತೆ, ಕನ್ನಡ ಪರಂಪರೆಯ ಸಮಗ್ರ ಜೀವನಕ್ರಮವನ್ನೂ ಪ್ರತಿನಿಧಿಸುತ್ತದೆ. ಕನ್ನಡ ಸಂಸ್ಕೃತಿಗೆ ಅಥವಾ ಜೀವನಕ್ರಮಕ್ಕೆ ಸುಮಾರು ಎರಡು ಸಾವಿರ ವರ್ಷಗಳಷ್ಟು ಕಾಲದ ಭಾಷಾ ಪರಂಪರೆಯಿದೆ.

ಒಂದು ಸಾವಿರದ ಐನೂರು ವರ್ಷಗಳ ಸಾಹಿತ್ಯ ಚರಿತ್ರೆಯಿದೆ. ಇಂಗ್ಲಿಷ್ ಸಾಹಿತ್ಯ ಇನ್ನೂ ಅಂಬೆಗಾಲಿಡುವ ಕಾಲಕ್ಕೆ ಮುನ್ನವೇ ಕನ್ನಡ ಸಾಹಿತ್ಯ ಪಂಪ-ರನ್ನ-ಹರಿಹರ-ಕುಮಾರವ್ಯಾಸರಂಥ ಮಹಾಕವಿಗಳ ಮೂಲಕ ತನ್ನ ಉಚ್ಛ್ರಾಯ ಸ್ಥಿತಿಯನ್ನು ತಲುಪಿತ್ತು.

ಕನ್ನಡ ಎಂದರೆ ಕೇವಲ ಭಾಷೆ ಅಲ್ಲ. ಈ ಜೀವನಕ್ರಮವನ್ನು ಪ್ರತಿನಿಧಿಸುವ ಜನಸಮುದಾಯವು ಕಟ್ಟಿಕೊಂಡ ಕನಸುಗಳು, ಇಟ್ಟುಕೊಂಡ ಆದರ್ಶಗಳು, ನಡೆಯಿಸಿದ ಚಿಂತನೆಗಳು, ಎದುರಿಸಿದ ಸವಾಲುಗಳು, ಸಾಧಿಸಿದ ಸಾಧನೆಗಳು - ಎಲ್ಲವೂ ಸೇರಿ ಕನ್ನಡ ಸಂಸ್ಕೃತಿ ಎನ್ನಿಸಿಕೊಂಡಿದೆ. ಶತಶತಮಾನಗಳ ಕಾಲ ಇದನ್ನು ಕಟ್ಟಿದವರು ಕಾಲದಿಂದ ಕಾಲಕ್ಕೆ ಈ ದೇಶವನ್ನು ಆಳಿದ ರಾಜರುಗಳು-ಕವಿಗಳು-ಶಿಲ್ಪಿಗಳು-ಸಂತರು-ಆಚಾರ್ಯರು ಮತ್ತು ಬಹುಸಂಖ್ಯೆಯ ಶ್ರೀಸಾಮಾನ್ಯರು. ಇವರೆಲ್ಲರ ಕೊಡುಗೆಗಳು ಲಿಪಿಗಳಲ್ಲಿ-ಕಲ್ಲುಗಳಲ್ಲಿ-ಬಣ್ಣಗಳಲ್ಲಿ-ರಾಗಗಳಲ್ಲಿ ಹಾಗೂ ಸಮಾನಾಂತರವಾದ ಅಲಿಖಿತ ಧ್ವನಿಗಳಲ್ಲಿ ದಾಖಲಾಗಿವೆ.

ಕರ್ನಾಟಕಕ್ಕೆ ತನ್ನದೆ ಆದ ಚಾಲುಕ್ಯ-ರಾಷ್ಟ್ರಕೂಟ-ಹೊಯ್ಸಳ ಶಿಲ್ಪಗಳಿವೆ; ಜಗತ್ಪ್ರಸಿದ್ಧವಾದ ಅಜಂತಾ-ಎಲ್ಲೋರಾ-ಎಲಿಫೆಂಟಾ ಶಿಲ್ಪಗಳು ನಿರ್ಮಿತಿಯಾದದ್ದು ಕನ್ನಡಿಗರಾದ ರಾಷ್ಟ್ರಕೂಟ ದೊರೆಗಳ ಕಾಲದಲ್ಲಿ; ಭಾರತೀಯ ಸಂಗೀತಕ್ಕೆ ಕೊಡುಗೆಯಾದ ಕರ್ನಾಟಕ ಸಂಗೀತ ಉಗಮಗೊಂಡಿದ್ದು ದಾಸವರೇಣ್ಯ ಪುರಂದರ ದಾಸರಿಂದ, ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ. ಜಗತ್ತಿನ ಸಾಹಿತ್ಯದಲ್ಲೆ ವಿರಳ ಸಾಹಿತ್ಯ ಪ್ರಕಾರವೆನ್ನಲಾದ ವಚನಗಳು ರಚನೆಯಾದದ್ದು ಹನ್ನೆರಡನೆಯ ಶತಮಾನದ ಶಿವಶರಣರಿಂದ. ಕರ್ನಾಟಕದಲ್ಲಿ ಪ್ರವರ್ಧಮಾನಕ್ಕೆ ಬಂದ ಜೈನ-ವೀರಶೈವ-ಶ್ರೀವೈಷ್ಣವ ಮತ್ತು ಮಾಧ್ವಮತ ಧರ್ಮಗಳೂ ಮತ್ತು ಅನಂತರ ಈ ದೇಶಕ್ಕೆ ಬಂದ ಕ್ರೈಸ್ತ-ಮುಸಲ್ಮಾನ ಮತಧರ್ಮಗಳೂ ಜತೆಜತೆಯಾಗಿ ಒಂದು ಬಗೆಯ ಸಾಮರಸ್ಯದ ವಾತಾವರಣವನ್ನು ನಿರ್ಮಿಸಿ ಕರ್ನಾಟಕವನ್ನು 'ಸರ್ವಜನಾಂಗದ ಶಾಂತಿಯ ತೋಟ'ವನ್ನಾಗಿ ಮಾಡಿವೆ.

ಇಂಥ ಉಜ್ವಲವಾದ ಪರಂಪರೆಯನ್ನುಳ್ಳ ಕನ್ನಡವು ಈ ಜಗತ್ತು ಅಥವಾ ತನ್ನ ಸುತ್ತಣ ವಿಶ್ವದೊಂದಿಗೆ ಇರಿಸಿಕೊಂಡಿರುವ ಸಂಬಂಧದ ಸ್ವರೂಪವು ಕನ್ನಡ ಸಂಸ್ಕೃತಿಯ ಬಹುಮುಖ್ಯವಾದ ಲಕ್ಷಣವಾಗಿದೆ. ಅದೆಂದರೆ : ಕನ್ನಡ ಸಂಸ್ಕೃತಿ ಯಾವತ್ತೂ ವಿಶಿಷ್ಟತೆಯನ್ನು ಮಾನ್ಯ ಮಾಡಿದೆಯೇ ಹೊರತು ಪ್ರತ್ಯೇಕತೆಯನ್ನಲ್ಲ. ಕನ್ನಡ ನಾಡು ಈ ವಸುಧಾ ವಲಯದಲ್ಲಿ ವಿಲೀನವಾಗಿಯೂ - ಅದರದೊಂದು ಅವಿನಾಭಾಗವಾಗಿಯೂ-ತನ್ನದೇ ಆದ 'ವಿಶದ'ವಾದ ಅಸ್ತಿತ್ವವನ್ನು ಹೊಂದಿದೆ, ಎಂದು ಒಂಬತ್ತನೆಯ ಶತಮಾನದ 'ಕವಿರಾಜಮಾರ್ಗ' ಎಂಬ ಕೃತಿ ವರ್ಣಿಸುತ್ತದೆ. ನಾವು ಎಷ್ಟರಮಟ್ಟಿಗೆ ಕನ್ನಡಿಗರೋ ಅಷ್ಟರಮಟ್ಟಿಗೆ ಭಾರತೀಯರೂ ಹೌದು. ಈ ಜಗತ್ತಿಗೆ ಸೇರಿದವರೂ ಹೌದು-ಎಂದು ಹೇಳಿದ ರಾಷ್ಟ್ರಕವಿ ಕುವೆಂಪು, ಕರ್ನಾಟಕವನ್ನು 'ಭಾರತ ಜನನಿಯ ತನು ಜಾತೆ' ಎಂಬ ರೂಪಕದಲ್ಲಿ ಗ್ರಹಿಸಿದವರು. ವರಕವಿ ದ.ರಾ. ಬೇಂದ್ರೆಯವರು 'ಕನ್ನಡವೂ ಭಾರತವೂ ಜಗವೆಲ್ಲವು ಒಂದೇ' ಎಂದು ಉದ್ಘೋಷಿಸಿದರು. ಇಂದು ಏರ್ಪಟ್ಟಿರುವ ಈ 'ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನ'ವು ಈ ಕವಿವಾಣಿಯ ಮೂರ್ತರೂಪವಾಗಿದೆ ಎಂದರೆ ಅದೇನೂ ಉತ್ಪ್ರೇಕ್ಷೆಯ ಮಾತಲ್ಲ.

❑

೩೦ನೆ ನವೆಂಬರ್ ೨೦೦೭, ಶುಕ್ರವಾರ
ಕುವೈತ್ ಕನ್ನಡ ಕೂಟ ಆಯೋಜಿಸಿದ್ದ 'ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನ'ದ ಅಧ್ಯಕ್ಷ ಭಾಷಣ

ಪ್ರಿಯ ಹರಿಹರಪ್ರಿಯರೇ,

ತಮ್ಮ ನೇತೃತ್ವದಲ್ಲಿ ಹೊರಬರುತ್ತಿರುವ 'ಪ್ರಜಾಸಾಹಿತ್ಯ' 'ಪುಸ್ತಕಮನೆ'ಯಾಗಿ ನನ್ನ ಕೈ ಸೇರಿತು. ತಮ್ಮ ಪತ್ರಿಕೆ ತಿಂಗಳ ಪುಸ್ತಿಕೆಯಾದರೂ ಅದು ಒಂದು ಪ್ರತ್ಯೇಕ ಗ್ರಂಥವಾಗಿ ಮೂಡಿ ಬರುತ್ತಿರುವುದು ಒಂದು ಸಂತೋಷದ ಸಂಗತಿ. ಕನ್ನಡ ಪತ್ರಿಕಾ ಪ್ರಪಂಚದಲ್ಲಿ ತಮ್ಮ ಪತ್ರಿಕೆ ಒಂದು ಮೈಲಿಗಲ್ಲಾಗಿ, ದಾರಿದೀಪವಾಗಿ, ಸ್ಫೂರ್ತಿದಾಯಕವಾಗಿ ಚಿರಕಾಲ ನಿಲ್ಲಲಿ ಎಂಬುದೇ ನನ್ನ ಹಾರೈಕೆ.

ತಮ್ಮ ವಿಶ್ವಾಸಿ

ಬೆಂಗಳೂರು

ಆಗುಂಬೆ ಎಸ್. ನಟರಾಜ್

೩

ಕನ್ನಡಕ್ಕಾಗಿ ದುಡಿದ : ಎಚ್.ಎಸ್.ಪಾಟೀಲ

ಎಸ್.ಆರ್. ಮಳಗಿ

ಹನುಮಂತರಾವ್ ಪಾಟೀಲರು ತೀರಿಕೊಂಡಾಗ ನಾನು ಮತ್ತು ಮಲ್ಲೇಪುರಂ ವೆಂಕಟೇಶ ಸೇರಿ ಪ್ರಜಾಸಾಹಿತ್ಯ ಬಳಗದಿಂದ ರಾಜಾಜಿನಗರದಲ್ಲಿ ಶ್ರದ್ಧಾಂಜಲಿ ಕಾರ್ಯಕ್ರಮ ಏರ್ಪಡಿಸಿದ್ದೆವು. ಕಾರ್ಯಕ್ರಮ ನಡೆಯುವಾಗ ಸಭೆಗೆ ಮಧ್ಯದಲ್ಲಿ ಎಸ್.ಎಲ್. ಭೈರಪ್ಪ ಬಂದು ಕುಳಿತರು. ಯಾರಿಗಾಗಿ, ಯಾಕಾಗಿ ಬಂದಿದ್ದಾರೋ ಎಂದುಕೊಳ್ಳುವಾಗಲೇ, ಅಧ್ಯಕ್ಷತೆ ವಹಿಸಿದ್ದ ರಂ.ಶ್ರೀ. ಮುಗಳಿಯವರು ಅವರನ್ನು ಕೇಳಿನೋಡಿ ಎಂದರು. ಕರೆದ ಕೂಡಲೇ ವೇದಿಕೆಗೆ ಬಂದ ಭೈರಪ್ಪನವರು, ಸುಮಾರು ಒಂದು ಗಂಟೆಗೂ ಮೀರಿ, ತಾವು ಮಾಮಾ ಎಂದು ಕರೆಯುತ್ತಿದ್ದ ಪಾಟೀಲರ ಬಗ್ಗೆ ಮಾತಾಡಿದರು. ಭೈರಪ್ಪ ಬಂದಿದ್ದು, ಪಾಟೀಲರ ಸ್ನೇಹಸಂಬಂಧವಿದ್ದುದು ಎಲ್ಲವೂ ಆಶ್ಚರ್ಯವಾಯಿತು. ಪಾಟೀಲರ ಬಗ್ಗೆ ಇದ್ದ ಗೌರವ ಇಮ್ಮಡಿಸಿತು. ಹೀಗೆ ಎಚ್.ಎಸ್. ಪಾಟೀಲರು ದೊಡ್ಡವರ ದೊಡ್ಡವರು. ಮಕ್ಕಳಿಲ್ಲದಿದ್ದರೂ ನನ್ನಂತಹ ಅನೇಕ ಮಕ್ಕಳನ್ನು ಅಡಿಗಡಿಗೂ ತಿದ್ದಿ, ಬೆಳೆಸಿದವರು. ಅರ್ಥಶಾಸ್ತ್ರಜ್ಞರೂ, ಗ್ರಂಥಪಾಲರೂ, ನಟರೂ, ಲೇಖಕರೂ, ಅನುವಾದಕರೂ, ಕುಟುಂಬವತ್ಸಲರೂ, ಸ್ನೇಹ ಆತಿಥ್ಯ ಶಿಸ್ತುಬದ್ಧ ಜೀವಿಯೂ, ಕನ್ನಡಕ್ಕಾಗಿ ಸರ್ವತ್ಯಾಗಕ್ಕೂ ಸಿದ್ಧರೂ ಆಗಿದ್ದ ಎಚ್.ಎಸ್. ಪಾಟೀಲರ ಬದುಕೆಲ್ಲ ಗಂಧದಂತೆ ಪರರಿಗಾಗಿಯೇ ತೇದುತೇದು ಇಲ್ಲವಾದರು. ಅವರನ್ನು ಹತ್ತಿರದಿಂದ ಬಲ್ಲ ಹಿರಿಯರಾದ ಎಸ್.ಆರ್. ಮಳಗಿ ಅವರು ತಮ್ಮ ನೆನಪಿನ ಮೂಲಕ ನಾಡಿನ ಸಾಂಸ್ಕೃತಿಕ ಎಳೆಗಳೂ ಹೆಣೆದಿದ್ದಾರೆ.

ಸಂಪಾದಕ

ಎಚ್.ಎಸ್.ಪಾಟೀಲ(ಹನುಮಂತರಾವ್ ಪಾಟೀಲ) ರನ್ನು ಕುರಿತ ನನ್ನ ನೆನಪಿನ ಸುರಳಿಯನ್ನು ಬಿಚ್ಚುವಾಗ ನನ್ನ ಮನಸ್ಸು ಸುಮಾರು ಅರವತ್ತು ವರ್ಷಗಳ ಹಿಂದೆ ಹೋಗುತ್ತದೆ. ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ನಾನು ವಿದ್ಯಾರ್ಥಿಯಾಗಿದ್ದ ದಿನಗಳವು. ನನಗಿಂತ ಚಿಕ್ಕವರಾಗಿದ್ದ ಎಚ್.ಎಸ್.ಪಾಟೀಲರು ಕಾಲೇಜಿನ ಆ ಮೊದಲ ಒಂದೆರಡು ವರ್ಷಗಳಲ್ಲಿ ಅಷ್ಟೊಂದು ಪರಿಚಿತರಾಗಿರಲಿಲ್ಲ. ಆದರೆ ನಾನು ಸೀನಿಯರ್ ಬಿ.ಎ. ತರಗತಿಯಲ್ಲಿ ಓದುತ್ತಿದ್ದಾಗ ಅವರ ಪರಿಚಯ ವಿಶೇಷ ರೀತಿಯಲ್ಲಿ ಬೆಳೆಯತೊಡಗಿತು. ಸ್ನೇಹದಲ್ಲಿ ಪರಿಣಮಿಸಿತು.

ಪರಿಚಯವಾಗದ ಮುನ್ನ ಪಾಟೀಲರನ್ನು ನಾನು ಮೊದಲು ಕಂಡುದು ಅವರು ಕಾಲೇಜಿನ ರಂಗಭೂಮಿಯಲ್ಲಿ ಹಾಸ್ಯನಟರಾಗಿ ನಟಿಸುತ್ತಿದ್ದಾಗ. ಕರ್ನಾಟಕ ಕಾಲೇಜಿನ ವಾರ್ಷಿಕ ಗ್ಯಾದರಿಂಗ್ ಸಂದರ್ಭಗಳಲ್ಲಿ ಆಗ ಪ್ರೊ.ಆರ್.ವಿ.ಜಹಗಿರದಾರ್ (–ಆಗ ಅವರಿನ್ನೂ'ಶ್ರೀರಂಗ' ನಾಮಧಾರಿಯಾಗಿರಲಿಲ್ಲ) ಅವರು ರಚಿಸಿ ರಂಗಭೂಮಿಯ ಮೇಲೆ ತರುತ್ತಿದ್ದ ನೂತನ ರೀತಿಯ ಕನ್ನಡ ಸಾಮಾಜಿಕ ನಾಟಕಗಳ ಪ್ರದರ್ಶನಗಳು ಕಾಲೇಜು ವಿದ್ಯಾರ್ಥಿಗಳ ಮನಸ್ಸಿನ ಮೇಲೆ ವಿಶೇಷ ಪ್ರಭಾವ ಬೀರಿದ್ದವು. ಅವರ ನಾಟಕ ತಂಡದಲ್ಲಿ ಸೇರಿದ್ದ ಎಚ್.ಎಸ್.ಪಾಟೀಲರು, ಎಸ್.ಎಸ್.ಕಣಬರ್ಗಿಮಠರು, ಸೂಳೇಭಾವಿಗೆ ಗುರುಭೀಮರು, ಕೆ.ಜಿ.ಹಲಸಗಿಯವರು ಮುಂತಾದವರು ಪ್ರಮುಖನಟರೆನಿಸಿದ್ದರು. ಇವರೆಲ್ಲರೂ ನರಗಾರ ಶ್ರೀರಂಗ ಹೊಸ ಮನ್ವಂತರದ ಸಾಮಾಜಿಕ–ಅದರಲ್ಲೂ ವಿಶೇಷವಾಗಿ ವೈದಿಕಬ್ರಾಹ್ಮಣ ಸಮಾಜದ – ಸ್ಥಿತಿಗತಿಗಳನ್ನೇ ಕಟುಮಧುರ ಟೀಕೆಗೆ ಗುರಿಪಡಿಸಿ, ಗೇಲಿಗೀಡುಮಾಡುತ್ತಿದ್ದ 'ಉದರವೈರಾಗ್ಯ', 'ಹರಿಜನ್ವಾರ','ನರಕದಲ್ಲಿ ನರಸಿಂಹ' ಮುಂತಾದ ದೊಡ್ಡ ನಾಟಕಗಳಲ್ಲದೆ, ಇತರ ಅವರ ಹಾಸ್ಯೋಪಹಾಸ್ಯಾತ್ಮಕ ಏಕಾಂಕ, ಏಕಪಾತ್ರಾಭಿನಯಾದಿ ದೃಶ್ಯ ಪ್ರದರ್ಶನಗಳಲ್ಲಿ ಪಾತ್ರವಹಿಸುತ್ತಿದ್ದರು. ಎಚ್.ಎಸ್.ಪಾಟೀಲರು ಗ್ರಾಮ್ಯ ನಿರಕ್ಷರಿಗಳ

ಪಾತ್ರಗಳನ್ನೇ ವಿಶೇಷವಾಗಿ ಅಭಿನಯಿಸುತ್ತಿದ್ದರು. ಹಳ್ಳಿಗರ ಆಡುಮಾತಿನ ಉಚ್ಚರಣೆ, ವೇಷಭೂಷಣ, ನಡೆ-ನುಡಿ, ಅನುದಿಷ್ಟ ಹಾಸ್ಯೋದ್ದೀಪನ ಇತ್ಯಾದಿ ನಟನಾ ಚಾಕ ಚಕ್ಯತೆಯಲ್ಲಿ ಪಾಟೀಲರ ಸಹಜ ಅಭಿಜಾತ ಅಭಿನಯ ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಾಡಿಸುತ್ತಿತ್ತು. ಶ್ರೀರಂಗರ ವಿವಿಧ ಭಂಗಿಯ ಬೌದ್ಧಿಕ ಚಮತ್ಕೃತಿಯ ಹಾಸ್ಯ-ವಿಡಂಬನಾಲಹರಿಗಳಿಗೆ ತಕ್ಕ ಮಾಧ್ಯಮವಾಗಿದ್ದ ಇವರ ಅಭಿನಯ ಪ್ರದರ್ಶನದಿಂದಾಗಿ ಪ್ರೇಕ್ಷಕವರ್ಗದ್ದಲ್ಲದೆ ಶ್ರೀರಂಗರ ಮೆಚ್ಚಿಕೆಗೂ ಇವರು ಬಹು ಬೇಗನೆ ಪಾತ್ರರಾದರು. ಶ್ರೀರಂಗರ ಈ ಮೆಚ್ಚಿಕೆ ಬರಬರುತ್ತ ಪ್ರೀತಿ-ಸ್ನೇಹಗಳ ರೂಪತಳೆದು ಕಾಲೇಜು ಜೀವನದ ಆನಂತರವೂ ಶ್ರೀರಂಗ-ಪಾಟೀಲರ ಸ್ನೇಹ-ಬಾಂಧವ್ಯ ಇವರೀರ್ವರ ಜೀವನದುದ್ದಕ್ಕೂ ಬೆಳೆಯುತ್ತ ದೃಢಗೊಂಡಿದ್ದನ್ನು ನಾನು ಕಂಡೆ.

ನಾನು ಸೀನಿಯರ್ ಬಿ.ಎ. ತರಗತಿಯಲ್ಲಿದ್ದಾಗ ಎಚ್.ಎಸ್.ಪಾಟೀಲರೊಂದಿಗೆ ನನ್ನ ಪರಿಚಯ ವಿಶೇಷ ರೀತಿಯಲ್ಲಿ ಬೆಳೆದು ಸ್ನೇಹದಲ್ಲಿ ಪರಿಣಮಿಸಿದ್ದನ್ನು ಈ ಮೊದಲೆ ಸೂಚಿಸಿದ್ದೇನಷ್ಟೆ ? ಆ ದಿನಗಳ ಸವಿನೆನಪು ಎಂದಿಗೂ ಮರೆಯದಂಥದು.

ಆಗ ಕರ್ನಾಟಕ ಕಾಲೇಜಿಗೆ ಹೋಗುವ ದಾರಿಯ ಬಲಗಡೆಯಲ್ಲಿ-ಕಾಲೇಜಿನ ಮಹಾದ್ವಾರಕ್ಕೆ ಹತ್ತಿರದಲ್ಲಿದ್ದ 'ಲಿಬರಲ್' (- ಮೊದಲು 'ಲಿಂಗಾಯತ' ಎಂದಿದ್ದ) ಹಾಸ್ಟೆಲ್‌ನಲ್ಲಿ ನಾವು ಅನೇಕ ಗೆಳೆಯರು ಮತ್ತು ಸಹಪಾಠಿಗಳು ವಾಸವಾಗಿದ್ದೆವು. ಎಚ್.ಎಸ್.ಪಾಟೀಲರು ಮತ್ತು ಅವರ ಆಪ್ತಸ್ನೇಹಿತ ರಂಗನಾಥ ನೆಗಳೂರ್ ಇವರಿಬ್ಬರೂ ನಾನು ವಾಸವಾಗಿದ್ದ ಕೋಣೆಯ ಎಡಪಕ್ಕದ ಸಾಲಿನ ಒಂದು ಕೋಣೆಯಲ್ಲಿ ಜೊತೆಯಾಗಿದ್ದರು. ನನ್ನ ಕೋಣೆಯ ಬಲಪಕ್ಕದ ಕೋಣೆಯಲ್ಲಿ ನನ್ನ ಸಹಪಾಠಿಯಾಗಿದ್ದ ವಿ.ಬಿ. ದೇಸಾಯಿಯವರು, ಇದಿರುಸಾಲಿನ ಒಂದು ಕೋಣೆಯಲ್ಲಿ ಕಡಲಬಾಳ ಪ್ರಹ್ಲಾದರು (-ಇವರೀಗ ಹೊಸ ಪೇಟೆಯಲ್ಲಿ ಸುಪ್ರಸಿದ್ಧನ್ಯಾಯವಾದಿಗಳು), ಅವರ ಆಪ್ತಸ್ನೇಹಿತ ರಾಮಚಂದ್ರಹೇಜೀಬರು ಮತ್ತು ವಿ.ವ್ಹಿ.ಜೋಶಿಯವರು (-ಇವರೀಗ ನಿವೃತ್ತ, ಅಸಿಸ್ಟಂಟ್ ಕಮಿಶನರರಾಗಿ ಬೆಂಗಳೂರಲ್ಲಿ ವಾಸವಾಗಿದ್ದಾರೆ) ಮುಂತಾದವರು ಇದ್ದರು. ಪ್ರತಿನಿತ್ಯ ಬೆಳಗಾದ ಕೂಡಲೆ ಚಹಾಪಾನದ ಸಮಯದಲ್ಲಿ ನಾವೆಲ್ಲರೂ ಹೊರಬಂದು ಕೆಲವೊತ್ತು ಹರಟೆ-ಸರಸಸಲ್ಲಾಪಗಳಲ್ಲಿ ತೊಡಗುತ್ತಿದ್ದೆವು. ಪಾಟೀಲ-ನೆಗಳೂರರಿಬ್ಬರೂ ಆಗ ಎಲ್ಲರಂತೆ ಚಹಾಪಾನ ಮಾಡದೆ ಅದೇ ಕರೆದು ತಂದ ನೊರೆ ಹಾಲನ್ನು ಸೇವಿಸುತ್ತಿದ್ದರು. ಬೆಳಗಿನಲ್ಲಿ ನಿತ್ಯ ವ್ಯಾಯಾಮ ಪದ್ಧತಿಯನ್ನಿರಿಸಿಕೊಂಡಿದ್ದ ಅವರು ದೇಹದಾರ್ಢ್ಯ ಕಾಯ್ದುಕೊಳ್ಳುವಲ್ಲಿ ಉತ್ಸುಕರಾಗಿದ್ದು, ಚಹಾಪಾನವನ್ನು ನಿಷೇಧಿಸಿದ್ದರು. ನಿತ್ಯದ ಪತ್ರಿಕಾ ವಾರ್ತೆಗಳ ಚರ್ಚೆಯೊಂದಿಗೆ ವಿವಿಧ ಪ್ರೊಫೆಸರುಗಳ ಉಪನ್ಯಾಸ ವೈಖರಿಗಳನ್ನು, ನಡೆ-ನುಡಿಗಳ ವೈಚಿತ್ರ್ಯಗಳನ್ನು, ನಿತ್ಯದ ವಿದ್ಯಮಾನಗಳನ್ನು ಹರಟುತ್ತಿದ್ದೆವಲ್ಲದೆ ಹಾಸ್ಟೆಲ್ ತಿಂಡಿ-ತಿನಸು-ಭೋಜನಾದಿನಗಳ ವಿಚಾರವೂ ನಮ್ಮ ಹರಟೆಯಲ್ಲಿ ಸಮಾವೇಶವಾಗುತ್ತಿದ್ದವು. ಈ ಎಲ್ಲದರಲ್ಲಿ ಪಾಟೀಲ-ನೆಗಳೂರರ ಪಾತ್ರವೇ ಹೆಚ್ಚಿನ ಪ್ರಮಾಣದಲ್ಲಿರುತ್ತಿತ್ತು. ಇವರಿಬ್ಬರೂ ಉತ್ಸಾಹ-ಹುಮ್ಮಸ್ಸುಗಳ ಬುಗ್ಗೆಗಳಾಗಿದ್ದರು. ಅತಿ-ರೇಕ ವೆನಿಸುವಂತಿದ್ದ ಉಚಿ-ತಾನು ಚಿತ-ಟೀಕೆಗಳ ಸುರಿಮಳೆಗರೆಯುವಲ್ಲಿ, ಖೊಳ್ಳ ಖೊಳ್ಳನೆ ನಗೆ ಹೊಮ್ಮಿಸಿ ನೆಗೆದಾಡುವಲ್ಲಿ ಇವರಿಬ್ಬರನ್ನು ಮೀರಿದವರಾರೂ ನಮ್ಮೊಳಗಿರಲಿಲ್ಲ!

ಕಡಲಬಾಳ-ಹೇಜೀಬರು ಆ ವಿದ್ಯಾರ್ಥಿದೆಸೆಯಲ್ಲೇ ಅಧ್ಯಾತ್ಮಪ್ರವೃತ್ತಿಯವರಾಗಿದ್ದರಿಂದ ವಾರದ ಒಂದು ನಿರ್ದಿಷ್ಟ ದಿನ(-ಗುರುವಾರವೆಂದು ನೆನಪು) ಸಾಯಂಕಾಲ ಭಜನೆಯ ಕಾರ್ಯಕ್ರಮ ನಡೆಸುತ್ತಿದ್ದರು. ಈ ಕಾರ್ಯಕ್ರಮವು ಉಳಿದೆಲ್ಲ ಹಾಸ್ಟೆಲ್‌ವಾಸಿಗಳಿಗೆ ಹಿಡಿಸಲಿಕ್ಕಿಲ್ಲವೆಂದೆನಿಸಿಯೋ ಬೇರೆಯವರಿಗೆ ತೊಂದರೆಯೇಕೆಂದೆನಿಸಿಯೋ ತಮ್ಮ ಕೋಣೆಯ ಬಾಗಿಲು ಹಾಕಿಕೊಂಡು ಭಜನೆಯನ್ನು ಸುಮಾರು ಒಂದು ಗಂಟೆ ಕಾಲ ನಡೆಸುತ್ತಿದ್ದರು. ಕಡಲಬಾಳ ಪ್ರಹ್ಲಾದರು ತತ್ತ್ವಜ್ಞಾನ ವಿಷಯ ತೆಗೆದುಕೊಂಡು ಬಿ.ಎ.ಪರೀಕ್ಷೆಯಲ್ಲಿ ಪ್ರಥಮ ವರ್ಗದ ಯಶಸ್ಸು ಪಡೆದವರಾಗಿ ಅಂದಿನ ಶ್ರೇಷ್ಠ ಬಹುಮಾನವೆನಿಸಿದ್ದ "ದಕ್ಷಿಣಾಫೆಲೊ" ಪ್ರಶಸ್ತಿ ವಿಜೇತರಾಗಿದ್ದರು. ರಾಮಚಂದ್ರ ಹೇಜೀಬರು ಅಂದಿನ ವಿದ್ಯಾರ್ಥಿಕವಿಗಳಲ್ಲಿ ವಿಶೇಷ ಹೆಸರುಗಳಿಸಿದವರು. ಇವರಿಬ್ಬರೂ ಪ್ರತ್ಯೇಕವಾಗಿ ತಮ್ಮಕೋಣೆಯಲ್ಲಿ ಹಾರ್ಮೋನಿಯಮ್ ವಾದ್ಯಸಮೇತ ನಡೆಸುತ್ತಿದ್ದ ಈ ಭಜನೆಯ ಕಾರ್ಯಕ್ರಮಗಳು ನಮೆಲ್ಲರಿಗೂ ಕುತೂಹಲಕಾರಿಯಾಗಿದ್ದವು. ಇವರಿಬ್ಬರ ಬಗ್ಗೆ ನಮ್ಮೆಲ್ಲರಲ್ಲೂ ವಿಶೇಷ ಅಭಿಮಾನ-ಗೌರವಗಳಿದ್ದುದರಿಂದ, ಈ ಭಜನೆಗಳಲ್ಲಿ ನಾವು ಭಾಗವಹಿಸದಿದ್ದರೂ ಈ ಬಗ್ಗೆ ಎಚ್.ಎಸ್.ಪಾಟೀಲ-ನೆಗಳೂರರನ್ನೊಳಗೊಂಡು ನಾವಾರೂ ಯಾವ ಬಗೆಯ ಚಕಾರ-ಟೀಕೆಗೂ ಆಸ್ಪದವೀಯುತ್ತಿರಲಿಲ್ಲ.

ಹಾಸ್ಟೆಲ್‌ಗೆಳೆಯರಾಗಿದ್ದ ನಮ್ಮ ನಮ್ಮೊಳಗೇ ಪಾಟೀಲ-ನೆಗಳೂರರ ನೇತೃತ್ವದಲ್ಲಿ ಆಗಾಗ ಸಂತೋಷಕೂಟಗಳೂ ಏರ್ಪಡುತ್ತಿದ್ದವು. ಒಂದು ದಿನ ಸಾಯಂಕಾಲ ಸಾಧನಕೆರೆಯಲ್ಲಿ "ಮೊಸರವಲಕ್ಕಿಪಿಕ್‌ನಿಕ್" ಒಂದನ್ನು ವ್ಯವಸ್ಥೆಗೊಳಿಸಿ, ಅಲ್ಲಿಗೆ ನಮ್ಮೆಲ್ಲರ ಕಾಲ್ನಡೆಯ ವಿಹಾರ ಹೊರಡಿಸಿದರು. ಸಾಧನಕೆರೆಯ ಒಂದು ನಿರ್ದಿಷ್ಟ ಸ್ಥಳಕ್ಕೆ ನಾವೆಲ್ಲರೂ ಬಂದಾಗ, ಸುಮಾರು ಒಂದಡಿ ಎತ್ತರದ ಹರವಾದ ಕೊಳಗ ತುಂಬಿ ಹೊರಸೂಸುವಂತಿದ್ದ ಕೆನೆ-ಮೊಸರವಲಕ್ಕಿ ನಮ್ಮ ದಾರಿಯನ್ನೆ ಕಾಯುತ್ತಿತ್ತು! ಹತ್ತಾರು ಗಡಿಗೆ ಕೆನೆಮೊಸರನ್ನು ಹತ್ತಿರದ ಹಳ್ಳಿ ಕೆಲಗೆರೆಯಿಂದ ತರಿಸಿ ಇದನ್ನು ಸಿದ್ಧಪಡಿಸಲಾಗಿತ್ತು. ಆಗ ಅದೇ ಸೂರ್ಯಾಸ್ತವಾಗಿ ಮಬ್ಬುಗತ್ತಲೆ ಹರಡತೊಡಗಿತು. ಬರಬರುತ್ತ ಕತ್ತಲೆ ಕವಿಯಿತು. ಅಲ್ಪಸ್ವಲ್ಪಾಗಿದ್ದ ಬೆಳುದಿಂಗಳ ಬೆಳಕು ಸಾಲದಾಗಿತ್ತು. ಆ ಹಸಿರು ಹುಲ್ಲು ಬಯಲಲ್ಲಿ ಒಂದು ಪೆಟ್ರೊಮ್ಯಾಕ್ಸ್ ತಂದಿರಿಸಿದ್ದರು. ಅದರ ಬೆಳಕಿನಲ್ಲಿ ಸುತ್ತುವರಿದು ಕುಳಿತುಕೊಂಡಿದ್ದ ನಾವೆಲ್ಲರೂ ತಟ್ಟೆಗಳಲ್ಲಿ ಮೊಸರವಲಕ್ಕಿಯನ್ನು ಬಡಿಸಿಕೊಡುವರೆಂಬ ಭರವಸೆಯಲ್ಲಿದ್ದೆವು. ಆದರೆ ಪಾಟೀಲ-ನೆಗಳೂರರು "ತಟ್ಟೆಗಳ ಏರ್ಪಾಟಿಲ್ಲ. ಎಲ್ಲರೂ ಕೊಳಗದೊಳಗೇ ಕೈಹಾಕಿ ಭುಂಜಿಸಬೇಕೆಂದು ಸಾರಿ ಬಿಟ್ಟರು! ನಮ್ಮಲ್ಲಿ ಕೆಲವರು ತಟ್ಟೆಗಳಿಲ್ಲದೆ ಅದು ಹೇಗೆ? - ಎಂದು ಗೊಣಗುಡುವಷ್ಟರಲ್ಲಿಯೇ ತೋಳೇರಿಸಿ ನಿಂತಿದ್ದ "ರಂಗ-ಮಂಗರು" (-ನೆಗಳೂರು ರಂಗ-ಪಾಟೀಲ ಹನುಮರ ಅಂದಿನ ಕಾವ್ಯನಾಮ) ಹೂಂ-ಕೈಹಾಕಿರಿ ಎಂದು ಮತ್ತೊಮ್ಮೆ ಸಾರಿದರು. ನಮ್ಮಲ್ಲಿ ತುಸು ಹಿರಿಯರೆನಿಸಿದ್ದ ದೇಸಾಯಿ ಪಾಂಡುರಂಗರಾಯರು(-ಪಿ.ಬಿ.ದೇಸಾಯಿ)-"ಅನುಮಾನವೇಕೆ, ಕೈಹಾಕಿರಿ, ಮತ್ತೇನು ಮಾಡಲು ಸಾಧ್ಯ?" ಎಂದು ತಾವೂ ತೋಳೇರಿಸಿ ಕೊಳಗದಲ್ಲಿ ಕೈಹಾಕಿಯೇ ಬಿಟ್ಟರು! ಎಲ್ಲರ ಬಾಯಲ್ಲಿ ಈಗಾಗಲೆ ನೀರೂರಿತ್ತು. ಉಪಾಯಗಾಣದೆ ನಾವೆಲ್ಲರೂ-ಸುಮಾರು ಆರೆಂಟು ಜನ ಸುತ್ತುವರಿದು ನಿಂತುಕೊಂಡೇ ರುಚಿ ಕಟ್ಟಾದ ಕೆನೆಮೊಸರವಲಕ್ಕಿಯನ್ನು ಸರಭರನೆ ಸುರಿದು, ಸುರಿದು ಕೊಳಗವನ್ನು ಅರೆಗಳಿಗೆಯಲ್ಲಿ ಬರಿದು ಮಾಡಿದೆವು! ನಮ್ಮನಮ್ಮೊಳಗಿನ ಸ್ನೇಹಭರದಲ್ಲಿ 'ಎಂಜಲು' ಎಂಬ ಮಾತೇ ಮರೆತು ಹೋಗಿತ್ತು' 'ರಂಗ-ಮಂಗ'ರು ಏರ್ಪಡಿಸಿದ್ದ "ಮೊಸರವಲಕ್ಕಿ ಪಿಕ್‌ನಿಕ್" ಚಿರಸ್ಮರಣೀಯವಾಗಿ ಉಳಿದಿದೆ! ಈ ಸ್ನೇಹ-ಕೂಟದಲ್ಲಿ ಪಾಲ್ಗೊಂಡಿದ್ದ ಗೆಳೆಯರಲ್ಲಿ ಹಲವರೀಗ ದಿವಂಗತರು. ಇಂದು ಉಳಿದವರೆಂದರೆ ಮಿತ್ರ ಪಿ.ವ್ಹಿ.ಜೋಶಿ ಮತ್ತು ನಾನು ಇಬ್ಬರೇ ಎಂದು ಕಾಣುತ್ತದೆ.

ನಾನು ಕರ್ನಾಟಕ ಕಾಲೇಜಿನಲ್ಲಿ ಪ್ರಾಧ್ಯಾಪಕನಾಗಿದ್ದಾಗ, ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ, ಶ್ರೀರಂಗರ ಪ್ರೇರಣೆಯಿಂದ "ಸಾಹಿತ್ಯಮಂಟಪ" ಎಂಬ ಚಿಕ್ಕ ಸಾಹಿತ್ಯಸಂಘವೊಂದು ಸ್ಥಾಪಿತವಾಗಿತ್ತು. ವಾರಕ್ಕೊಮ್ಮೆ ಸಾಯಂಕಾಲ ಅನೌಪಚಾರಿಕವಾಗಿ ಸಭೆಸೇರಿ ಅಲ್ಲಿ ಪ್ರಚಲಿತ ಸಾಹಿತ್ಯ ಚ-ರ್ಚೆ ಜರುಗಾಗಿ ನಡೆಯುತ್ತಿತ್ತು. ಅದರಲ್ಲಿ ಶ್ರೀರಂಗರು, ಮಾಳವಾಡರು, ರಘುನಾಡಗಿರರು, ಎನ್ಕೆಯವರು, ಹೊಸಕೇರಿ ನಾರಾಯಣರು, ರಾ.ಕು(-ಆರ್.ವಿ.ಕುಲಕರ್ಣಿ) ಅವರು, ನಾಡಗಿರ ಶಿವರಾಯರು, ಕೆ.ಜಿ.ಹಲಸಗಿಯವರು, ವಾಡಪ್ಪಿ-ಗವಗಕರರು ಮುಂತಾದವರೊಂದಿಗೆ ಪಾಟೀಲ-ನೆಗಳೂರರೂ ನಾನೂ ಭಾಗವಹಿಸುತ್ತಿದ್ದೆವು. ಸುಮಾರು ಇದೇ ಸಮಯದಲ್ಲಿ ನೆಗಳೂರು ರಂಗನಾಥರು 'ನೆರಂಗ' ಕಾವ್ಯನಾಮದಿಂದ ಶ್ರೀರಂಗರ ಜೀವನ ಚಿ-ತ್ರವೊಂದನ್ನು ಕೈಪಿಡಿರೂಪದಲ್ಲಿ ಬರೆದು ಪ್ರಕಾಶಪಡಿಸಿದರು. ಪಾಟೀಲರು ಬುರ್ಲಿ ಬಿಂದುಮಾಧವರ "ಮಂಚಿನಬಳ್ಳಿ"ಗಾಗಿ ರಚಿಸಿದ 'ತಕ್ಕಡಿ' ಎಂಬ ಅರ್ಥಶಾಸ್ತ್ರವನ್ನೂ ಕುರಿತ ಪುಸ್ತಕವೂ ಪ್ರಕಟವಾಯ್ತು. ಹೀಗೆ ಸಾಹಿತ್ಯರಂಗದಲ್ಲಿ ಕಾಲಿಟ್ಟ ಹುರುಪಿನಲ್ಲಿ "ರಂಗ-ಮಂಗರು" ಎಂಬ ಅವಳಿ-ಜವಳಿ ನಾಮಧೇಯದ ಸಂಪಾದಕತ್ವದಲ್ಲಿ "ನರಸಿಂಹ" ಎಂಬ ಮಾಸ ಪತ್ರಿಕೆ ಹೊರಡಲಾರಂಭಿಸಿತು. ಅದರಲ್ಲಿ ಶ್ರೀರಂಗರು ಅಂದಿನ ಪ್ರಚಲಿತ ಸಾಹಿತ್ಯವನ್ನು ಕುರಿತು ಮಾಡುತ್ತಿದ್ದ ಟೀಕೆ-ವಿಮರ್ಶೆಗಳಿಗೆ ಪ್ರಾಧಾನ್ಯವಿತ್ತು. "ಸಾಹಿತ್ಯಮಂಟಪ"ದಲ್ಲಿ ಇವುಗಳು ಮತ್ತು ಇತರೆಡೆಗಳಲ್ಲಿಯ ಸಾಹಿತ್ಯ ವಿಷಯಕ ವಿಚಾರ-ವಿಮರ್ಶೆಗಳು ಸ್ವಚ್ಛಂದ ರೀತಿಯಲ್ಲಿ ಚರ್ಚೆಗೊಳಪಡುತ್ತಿದ್ದವು. ನಾಡಗಿರ ರಘು 'ಡಿ.ಡಿ.ಟಿ' ಕಾವ್ಯನಾಮದಿಂದ "ನರಸಿಂಹ" ಪತ್ರಿಕೆಯಲ್ಲಿ ಪ್ರಕಾಶಪಡಿಸುತ್ತಿದ್ದ ಸಾಹಿತ್ಯ-ಟೀಕೆಗಳು "ಸಾಹಿತ್ಯ ಮಂಟಪ"ದ ಸದಸ್ಯರಲ್ಲಿ ಹುಚ್ಚುನಗೆ ಯೆಬ್ಬಿಸುತ್ತಿದ್ದವು. ಕೆಲವರಿಗೆ ಅವು ಸ್ವಾರಸ್ಯಕರವೆನಿಸುತ್ತಿದ್ದರೆ, ಇನ್ನು ಕೆಲವರಿಗೆ ಅತಿಶಯೋಕ್ತಿ ರಂಜಿತ ಕುಚೇಷ್ಟೆಕುಚೇಷ್ಟೆಗಳೆನಿಸುತ್ತಿದ್ದವು. ಡಾ.ರಂ.ಶ್ರೀ.ಮುಗಳಿಯವರ "ಅನ್ನ" ಕಾದಂಬರಿ ಅದೇ ಪ್ರಕಟಗೊಂಡಿತ್ತು. ಅದರಲ್ಲಿ ಬರಗಾಲ ಪೀಡಿತರ ಹೃದಯದ್ರಾವಕ ಚಿತ್ರಣವಿತ್ತು. ಅದನ್ನು "ಡಿ.ಡಿ.ಟಿ" ಕಟುವಾಗಿ ಟೀಕಿಸಿತ್ತು. ಹಲವರನ್ನು ರೇಗಿಸಿತ್ತು, ನೋಯಿಸಿತ್ತು. ಡಾ. ಮುಗಳಿಯವರಿಂದ ಈ ಪುಸ್ತಕ ಟೀಕೆಗೆ ಪ್ರತಿಯಾಗಿ ಉತ್ತರ

ಪ್ರಕಟವಾಗಬಹುದೆಂದು ನಂಬಿದ್ದ 'ಡಿ.ಡಿ.ಟಿ'ಗೆ ಮತ್ತು ಅವರ ಬೆಂಬಲಿಗರಿಗೆ ಅದರಿಂದ ಯಾವ ಪ್ರತಿಕ್ರಿಯೆಯೂ ಬಾರದ್ದರಿಂದ ಈ ಬಗ್ಗೆ ಹರಡಿದ್ದ 'ಡಿ.ಡಿ.ಟಿ' ನಾತ-ಕ್ರಮೇಣ ಮಾಯವಾಯ್ತು. "ನರಸಿಂಹ" ಪತ್ರಿಕೆಯಲ್ಲಿ ಶ್ರೀರಂಗರು "ಸಿಡುಗಿನ ಪ್ರಹಾರಗಳು" ಎಂಬ ಶೀರ್ಷಿಕೆಯಲ್ಲಿ ಅಂದಿನ ಕರ್ನಾಟಕದ ರಾಜಕೀಯ ವ್ಯಕ್ತಿಗಳ ಮೇಲೆ ಟೀಕಾಸ್ತ್ರಗಳನ್ನು ಎಸೆಯುತ್ತಿದ್ದುದೂ ಅಂದಿನ ಪತ್ರಿಕಾರಂಗದಲ್ಲಿ ಒಂದು ಹೊಸ ಅಲೆ ಎಬ್ಬಿಸಿತ್ತೆಂಬುದೂ ನೆನಪು. ಶ್ರೀರಂಗರು " ನರಸಿಂಹ" ಪತ್ರಿಕೆಯಲ್ಲಿ "ಶ್ರೀನಿವಾಸ"ರ ಕಾವ್ಯಶೈಲಿಯ ಸಹಜಸರಳತೆಯನ್ನು ನಗೆಗೀಡು ಮಾಡಿ. - ಇದು ಕಾವ್ಯವೇ? ಎಂದು ಹೀಗಳೆಯುತ್ತಿದ್ದ ಒಂದು ಸಂದರ್ಭ "ಸಾಹಿತ್ಯ ಮಂಟಪ"ದ ಚ-ರ್ಚೆಗೆ ಬಂದುದು ನನ್ನ ನೆನಪಿನಲ್ಲಿ ಇಂದಿಗೂ ಮಾಸದಿದೆ. ಯಾಕಂದರೆ. ಈ ಚರ್ಚೆಯಲ್ಲಿ ನಾನು ಪಾತ್ರವಹಿಸಿ. 'ಶ್ರೀನಿವಾಸ'ರ ಕಾವ್ಯಸೌಂದರ್ಯವನ್ನು ಸಮರ್ಥಿಸಿ ಮಾತನಾಡಿದೆ: "ಪ್ರತಿಯೊಬ್ಬ ಕವಿಗೂ ಅವನದೇ ಆದ ಕಾವ್ಯಶೈಲಿಯಿರುವಂತೆ 'ಶ್ರೀನಿವಾಸ'ರದೂ ಒಂದು ವಿಶಿಷ್ಟ ಮಾದರಿಯ ಶೈಲಿ. ಅದನ್ನು ಹೀಗಳೆಯದೆ ಅದರ ರಸಾಸ್ವಾದ ಮಾಡಬೇಕು. ರಸಾಸ್ವಾದವೆಂದರೇನೆಂಬುದು "ಕಾವ್ಯಪ್ರಕಾಶ"ವನ್ನು ಬಿ.ಎ. ತರಗತಿಯಲ್ಲಿ ನನಗೆ ಪಾಠಕಲಿಸಿದ್ದ ಶ್ರೀರಂಗರಿಗೆ ತಿಳಿಯದ್ದೇನಲ್ಲ ; ಈ ರೀತಿಯ ಟೀಕೆ 'ಶ್ರೀನಿವಾಸ'ರ ಮನನೋಯಿಸುವ ಉದ್ದೇಶವುಳ್ಳದೆಂದು ಭಾಸವಾಗುತ್ತದೆ. ಈ ದಾರಿಯ ವಿಮರ್ಶೆಯನ್ನು ತಾವು ದಯವಿಟ್ಟು ಬಿಟ್ಟುಕೊಟ್ಟು ಶ್ರೇಷ್ಠಸಾಹಿತಿಗಳಲ್ಲಿ ಪರಸ್ಪರ ಸೌಹಾರ್ದ-ಗೌರವ ಭಾವ ಹುಟ್ಟುವಂತೆ ಸನ್ಮಾರ್ಗದರ್ಶೀ ವಿಮರ್ಶೆಗೆ ತೊಡಗಬೇಕು"- ಇತ್ಯಾದಿ ಸುದೀರ್ಘ ಭಾಷಣವಿತ್ತ ನೆನಪು ಇಂದಿಗೂ ಇದೆ. ಶ್ರೀರಂಗರು ನನ್ನ ಬಗ್ಗೆ ಶಿಷ್ಯ ವಾತ್ಸಲ್ಯವುಳ್ಳವರಾದ್ದರಿಂದ ನನ್ನ ಭಾಷಣಕ್ಕೆ ಪ್ರತಿ ನುಡಿಯದೆ ಮೌನಧರಿಸಿದ್ದರು. ಎಂದಿನಂತೆ "ಸಾಹಿತ್ಯಮಂಟಪ"ದ ಸಭೆ "ರಂಗ-ಮಂಗರು" ಏರ್ಪಡಿಸುತ್ತಿದ್ದ ಚೂಡಾ-ಭಜಿ ಮಿಶ್ರಿತ-ಚೂರಮುರಿ (ಕಡ್ಲೆಪುರಿ) 'ಫರಾಳ' ದೊಂದಿಗೆ ಮುಕ್ತಾಯಗೊಂಡಿತು.

"ರಂಗ-ಮಂಗ"ರ "ನರಸಿಂಹ" ಪತ್ರಿಕೆಯೇ ಕೆಲಕಾಲಾನಂತರ "ಕ್ಷೇಮ" ಪತ್ರಿಕೆಯಾಗಿ ಪರಿವರ್ತನಗೊಂಡು ಎಚ್.ಎಸ್. ಪಾಟೀಲ ಸಂಪಾದಕತ್ವದಲ್ಲಿ ಮುಂದುವರಿಯಿತು. ಅದು ಪಾಟೀಲ ಮನೆತನದ ಕ್ಷೇಮಾಭ್ಯುದಯ ವಿದ್ಯಮಾನಗಳನ್ನು ಪ್ರಕಟಿಸುವ ಮಾಧ್ಯಮವಾಗಿದ್ದ ವಿಚಾರವನ್ನು ಪಾಟೀಲರು ಬೆಂಗಳೂರಿಗೆ ಬಂದು ವಾಸವಾಗಿದ್ದಾಗ ನನಗೆ ತಿಳಿಸಿದರು. ಅವರು ಇಲ್ಲಿ ಇರುವವರೆಗೆ ಅದರ ಪ್ರತಿಯೊಂದು ಸಂಚಿಕೆಯನ್ನು ನನಗೆ ನೋಡಲು ಕೊಡುತ್ತಿದ್ದರು.

ಎಚ್.ಎಸ್. ಪಾಟೀಲರು ಬಿ.ಎ. ಪರೀಕ್ಷೆ ಮುಗಿಸಿ ಕೆಲಕಾಲ ಧಾರವಾಡದಲ್ಲಿದ್ದು ಉದ್ಯೋಗಾರ್ಥಿಯಾಗಿ ಮುಂಬೈ ಅನಂತರ ದೆಹಲಿಗೆ ತೆರಳಿದ್ದರು. ಪ್ರಖ್ಯಾತ-ಅರ್ಥಶಾಸ್ತ್ರಜ್ಞ ಡಾ. ಪ್ರೊ. ಕೆ.ಆರ್.ವಿ. ರಾವ್ ಅವರು ಕೆಲಕಾಲ ಕರ್ನಾಟಕ ಕಾಲೇಜಿಗೆ ಪ್ರೊಫೆಸರರಾಗಿ ಬಂದಾಗ ಅವರ ಪಾಂಡಿತ್ಯ-ಪ್ರತಿಭೆಗಳನ್ನರಿತಿದ್ದ ಪಾಟೀಲರು ಮುಂಬೈಯಲ್ಲಿ ಅನಂತರ ದೆಹಲಿಯಲ್ಲಿ ಅವರ "ಸ್ಕೂಲ್ ಆಫ್ ಎಕನಾಮಿಕ್ಸ್" ಸಂಸ್ಥೆಯಲ್ಲಿ ಅವರ ಶಿಷ್ಯತ್ವವಹಿಸಿ ಅಲ್ಲಿಯೇ ಮುಂದೆ ಲೈಬ್ರೇರಿಯನ್ ಎಂದು ನೇಮಕಗೊಂಡು ದಕ್ಷತೆಯಿಂದ ಕಾರ್ಯ ನಿರ್ವಹಿಸುತ್ತಿದ್ದ ವಿಚಾರವನ್ನು ಕೇಳಿ ತಿಳಿದಿದೆ. ಲೈಬ್ರರಿ ಸೈನ್ಸಿಗೆ ಸಂಬಂಧಿಸಿದ ಕೆಲವು ಗ್ರಂಥರಚನಾಕಾರ್ಯವನ್ನು ಕೈಕೊಂಡರು. ಈ ಬಗೆಯ ಒಂದೆರಡು ಸಂಪುಟಗಳನ್ನು ಅವರು ಬೆಂಗಳೂರಲ್ಲಿ ವಾಸವಾಗಿದ್ದಾಗ ನನಗೆ ತೋರಿಸಿದ್ದರು.

ಎಚ್.ಎಸ್.ಪಾಟೀಲರು ಸ್ವಭಾವತಃ ಸ್ನೇಹಶೀಲರು. ಅಂತಃಕರಣಿಗಳು. ಉದಾರಹೃದಯಿಗಳು. ಜೊತೆಗೆ ಶ್ರೀರಂಗರ ಹಾಗೂ 'ನೀರಂಗ'ರ ಸಾನ್ನಿಧ್ಯಸುಖವನ್ನು ವಿಶೇಷವಾಗಿ ಅನುಭವಿಸಿದ್ದ ಕಾರಣದಿಂದ ಅವರ ಸಹಜ ಹಾಸ್ಯಪ್ರವೃತ್ತಿಗೆ ವಿಶೇಷ ಪುಷ್ಟಿ ದೊರೆತು ಉತ್ತಮ ನಗೆಗಾರರಾಗಿದ್ದರು; ಸಂಘಜೀವಿಗಳಾಗಿದ್ದರು. ಅವರ ಗೆಳೆಯರ ಬಳಗ ಅವರು ಹೋದೆಡೆಗಳಲ್ಲೆಲ್ಲ ಸಮೃದ್ಧ ಸಮೃದ್ಧವಾಗಿ ಬೆಳೆದಿತ್ತು. ಪಾಟೀಲರು ಎಲ್ಲಿಯೇ ಇರಲಿ. ಎಂತೇ ಇರಲಿ. ಕನ್ನಡ ಸಾಹಿತ್ಯ ಪ್ರೀತಿಯನ್ನು ಕನ್ನಡ ಭಾಷಾಭಿಮಾನವನ್ನು ಉಳಿಸಿಕೊಂಡಿದ್ದರು. ಮುಂಬೈ-ದೆಹಲಿ ಮಹಾನಗರಗಳಲ್ಲಿ ಅವರಂತೆಯೆ ಕಾರಣಾಂತರಗಳಿಂದ ವಾಸವಾಗಿದ್ದ ಕನ್ನಡಿಗರು ಕನ್ನಡತನವನ್ನು ಉಳಿಸಿಕೊಂಡು ಆಯಾ ಪ್ರಾದೇಶಿಕ ಭಾಷೆಯವರೊಂದಿಗೆ ಸೌಹಾರ್ದಭಾವದಿಂದ ಒಂದಾಗಿ ವ್ಯವಹರಿಸುವ ಯೋಗ್ಯ ನಿಲುವನ್ನು ತಳೆಯುವಂತೆ ಪ್ರೇರಣೆಯಿತ್ತರು. ಆ ಮುಂಚೆ-ಹೇಗೋ ಜೀವಹಿಡಿದಿದ್ದ ಹೊರನಾಡಕನ್ನಡಿಗರ ಸಂಘಗಳಿಗೆ ಹೊಸ ಚೈತನ್ಯ ತುಂಬಿದರು. "ಹೊರನಾಡಕನ್ನಡಿಗರ

ಸಮ್ಮೇಲನ"ಗಳನ್ನು ಯಶಸ್ವಿಯಾಗಿ ನಡೆಸುವಲ್ಲಿ ಶ್ರಮಪಟ್ಟರು. ಅವರು ಗೈದ ಈ ಕನ್ನಡಸೇವೆಯ ಕುರುಹುಗಳಾಗಿ ಈ ಬಗೆಯ ಸಂಘ-ಸಂಸ್ಥೆಗಳಿನ್ನೂ ಅಲ್ಲಿ ಜೀವಂತವಾಗಿ ಉಳಿದಿವೆ, ಕಾರ್ಯನಿರ್ವಹಿಸುತ್ತಲಿವೆ.

ಹೊರನಾಡಕನ್ನಡಿಗರ ಯೋಗಕ್ಷೇಮದ ಹೊಣೆಹೊತ್ತಿದ್ದ ಪಾಟೀಲರ ಸ್ನೇಹಿತರ ಬಳಗ ಬಹುದೊಡ್ಡದು. ಮುಂಬೈ-ದೆಹಲಿಗಳಿಗೆ ಕಾರಣಾಂತರಗಳಿಂದ ಬಂದು ಹೋಗುತ್ತಿದ್ದ ಕನ್ನಡ ಸಾಹಿತಿಗಳ ಆತಿಥ್ಯಕ್ಕಾಗಿ ಅವರು ಸದಾ ಬದ್ಧಕಂಕಣರಾಗಿ ನಿಂತಿರುತ್ತಿದ್ದರು. ಕರ್ನಾಟಕದ ವಿವಿಧ ಭಾಗಗಳಿಂದ ಕನ್ನಡ ಸಾಹಿತಿಗಳಾರೇ ಬಂದರೂ ಅವರ ಬಗ್ಗೆ ಆಸ್ಥೆವಹಿಸಿ, ಅವರನ್ನು ತಮ್ಮ ಮನೆಗೂ ಕರೆದೊಯ್ದು ಆತಿಥ್ಯ ನೀಡಿ ಬೀಳ್ಕೊಡುವಲ್ಲಿ ಅವರು ತೋರುತ್ತಿದ್ದ ಪ್ರೀತಿ, ಆಸಕ್ತಿ, ಅನುಪಮ, ೧೯೫೪ರ ಸುಮಾರಿಗೆ ಕರ್ನಾಟಕ ಕಾಲೇಜಿನ ಪರವಾಗಿ ನಾಟಕ ತಂಡವೊಂದನ್ನು ದೆಹಲಿಯ "ಯುವಜನಮೇಳ" (youth festival) ಕ್ಕೆಂದು ನಾನು ಕರೆದೊಯ್ದಿದ್ದೆ. ಆಗ ಜತೆಗೆ ನನ್ನ ಪತ್ನಿ ಹಾಗೂ ಇಬ್ಬರು ಗಂಡುಮಕ್ಕಳು ಇದ್ದರು. ದೆಹಲಿಯಲ್ಲಿದ್ದ ಮೂರುದಿನಗಳ ಕಾಲ ಮಿತ್ರ ಅ.ಗು. ಜೋಶಿಯವರ ಮನೆಯಲ್ಲಿ ವಾಸವಾಗಿದ್ದಾಗ, ಪಾಟೀಲರು ಅಲ್ಲಿಗೆ ಬಂದು ಒಂದು ದಿನ ತಮ್ಮ ಮನೆಗೆ ನಮ್ಮನ್ನು ಕರೆದೊಯ್ದರು. ಅಂದು ಸಂಜೆಯವರೆಗೆ ಅವರಲ್ಲಿದ್ದು ಪಾಟೀಲ ದಂಪತಿಗಳಿಂದ ಪಡೆದ ಆತಿಥ್ಯ ಮರೆಯುವಂಥದಲ್ಲ.

ಎಚ್.ಎಸ್.ಪಾಟೀಲರು ದೆಹಲಿಯ ತಮ್ಮ ಉದ್ಯೋಗದಿಂದ ನಿವೃತ್ತಿ ಪಡೆದು ಬೆಂಗಳೂರಲ್ಲಿ ತಮ್ಮ ವಿಶ್ರಾಂತಿ ಜೀವನಕ್ಕಾಗಿ ವಾಸ್ತವ್ಯ ಹೂಡಿದರು. ಆಗ ಇಲ್ಲಿ ನೆಲಸಿದ್ದ ಅವರ ಹಿರಿಯ ಹಿತ ಚಿಂತಕರು ಆತ್ಮೀಯರೂ ಆಗಿದ್ದ ಶ್ರೀರಂಗರ ಆಕರ್ಷನೆ ಅವರಿಗಿದ್ದಿರಬೇಕು. ಡಾ.ರಂ.ಶ್ರೀ. ಮುಗಳಿಯವರಿಗೂ ತಾವು ಇಲ್ಲಿಗೆ ಬಂದು ವಾಸಿಸುವ ವಿಷಯವನ್ನು ಮುಂಚಿತವಾಗಿ ತಿಳಿಸಿದ್ದರು. ಇಲ್ಲಿಗೆ ಬಂದು ವಾಸವಾಗಿದ್ದು ಕೆಲಕಾಲಾನಂತರ ಡಾ.ಮುಗಳಿಯವರ ಶಿಫಾರಸಿನ ನೆರವಿನಿಂದ ಕರ್ನಾಟಕ ಸರ್ಕಾರದಿಂದ ಅವರ ಕನ್ನಡ ಸೇವೆಯ ನಿಮಿತ್ತ ಪೆನ್ಶನ್ ಪಡೆದರು. ಇಲ್ಲಿ ಇದ್ದಾಗ "ಇಂದಿರಾಗಾಂಧಿ ಮತ್ತು ಅವರ ಟೀಕಾಕಾರರು" ಎಂಬ ಇಂಗ್ಲಿಷ್ ಗ್ರಂಥದ ಕನ್ನಡಾನುವಾದ ಮಾಡಿದರು. ಮತ್ತು ಅವರ ತಂದೆಯ ಸಹೋದರರೊಬ್ಬರು ಕಂದಪದ್ಯದಲ್ಲಿ ರಚಿಸಿದ್ದ ಕನ್ನಡ ಲಘು ವ್ಯಾಕರಣವನ್ನು ಪ್ರಕಟಿಸಿದರು. ಅದಕ್ಕೆ ನಾನೊಂದು ಮುನ್ನುಡಿ ಬರೆದುಕೊಟ್ಟಿದೆ. ಅದರ ಬಿಡುಗಡೆಯ ಚಿಕ್ಕಸಭೆಯಲ್ಲಿ ಹರಿಹರಪ್ರಿಯ ಹಾಗೂ ನಾನೂ ಪಾಲ್ಗೊಂಡು ಪುಸ್ತಕ ಪರಿಚಯ ಮಾಡಿಕೊಟ್ಟೆವು.

೧೯೮೪ರಲ್ಲಿ ಶ್ರೀರಂಗರ ನಿಧನ ವಾರ್ತೆ ಅಕಸ್ಮಾತ್ತಾಗಿ ಬಂದಾಗ ಅವರ ಶಿಷ್ಯವರ್ಗದ ನಾವಿಬ್ಬರೂ ಅವರ ಅಂತ್ಯಸಂಸ್ಕಾರ ಸಂದರ್ಭದಲ್ಲಿ ಪಾಲ್ಗೊಂಡೆವು. ರಾಜಾಜಿನಗರದಲ್ಲಿ ನಮ್ಮ ಮನೆಯಹತ್ತಿರದಲ್ಲೆ ಮಿತ್ರ ಕಮಲಾಪುರರ ಮನೆಯಲ್ಲಿ ಅವರು ವಾಸವಾಗಿದ್ದರಿಂದ ಪ್ರತಿನಿತ್ಯ ಪರಸ್ಪರ ಭೆಟ್ಟಿಯಾಗುತ್ತಿದ್ದೆವು. ಮೊಳಕಾಲು ನೋವಿನಿಂದ ತುಸು ಆಗಾಗ ಬಳಲುತ್ತಿದ್ದುದನ್ನು ಅವರು ಹೇಳುತ್ತಿದ್ದರು. ಇದರ ಹೊರತಾಗಿ ಬೇರಾವ ಕಾಹಿಲೆಯ ಚಿಹ್ನೆಗಳೂ ಗೋಚರಿಸುತ್ತಿರಲಿಲ್ಲ. ಪುಸ್ತಕ ಬಿಡುಗಡೆಯ ನಂತರದ ಕೆಲಕಾಲದಲ್ಲಿಯೇ ಅವರು ಇಚಲಕರಂಜಿಯಲ್ಲಿಯ ತಮ್ಮ ಆಪ್ತರೊಬ್ಬರ ಮನೆಯ ಮದುವೆಗೆಂದು ಹೋದವರು ಮರಳಿ ಬರಲಿಲ್ಲ. ಆ ಸಂದರ್ಭದಲ್ಲಿ ಅವರಿಗೆ ಪಾರ್ಶ್ವವಾಯು ತಗಲಿ, ಸುಮಾರು ಎರಡು ವರ್ಷಗಳ ಕಾಲ ಬಳಲಿ ಗದಗಿನಲ್ಲಿ ನಿಧನ ಹೊಂದಿದರು. ಅವರ ನಿಧನಕ್ಕೆ ಮೊದಲು ಡಾ.ಮುಗಳಿಯವರು ಕಾರಣಾಂತರದಿಂದ ಗದಗಿಗೆ ಹೋಗಿದ್ದಾಗ ಅವರ ಹೃದಯದ್ರಾವಕ ಯಾತನಾಸ್ಥಿತಿಯನ್ನು ಕಂಡು ಬಂದು ನನಗೆ ತಿಳಿಸಿದರು. ಮನಸ್ಸಿಗೆ ತುಂಬ ವ್ಯಥೆಯಾಯಿತು. ಅವರು ಕಾಹಿಲೆಯಿಂದ ಬಳಲುತ್ತಿದ್ದಾಗ ಅವರ ಹೆಂಡತಿಯ ಅಣ್ಣಂದಿರಿಗೆ ಕಾಗದ ಬರೆದು ಅವರ ಆರೋಗ್ಯದ ಬಗ್ಗೆ ವಿಚಾರಿಸುತ್ತಿದ್ದೆ. ಅಪರಿಂದ ಬಂದ ಉತ್ತರ ನಿರಾಶಾದಾಯಕವೇ ಆಗಿತ್ತು. ಕೆಲಕಾಲದ ನಂತರ ಅವರ ನಿಧನದ ವಾರ್ತೆಯನ್ನೂ ಅವರು ತಿಳಿಸಿದರು. ಜೀವನದುದ್ದಕ್ಕೂ ಚೈತನ್ಯ ಭರಿತರಾಗಿ ಕನ್ನಡಕ್ಕಾಗಿ ದುಡಿದ ಎಚ್.ಎಸ್. ಪಾಟೀಲರು ಅವರ ಅಪಾರ ಸಂಖ್ಯೆಯ ಆಪ್ತಮಿತ್ರರ ಹೃದಯಗಳಲ್ಲಿ ವಿರಾಜಮಾನರಾಗಿದ್ದಾರೆ. ಅವರು ಹೊರನಾಡ ಕನ್ನಡಿಗರಿಗಾಗಿ ಮಾಡಿದ ಸೇವೆಯ ಕುರುಹುಗಳು ಅವರು ಕೈಯಿಟ್ಟ ಕಡೆಗಳಲ್ಲೆಲ್ಲ ಮಾಸದಿವೆ! ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲೆಂದು ಹಾರೈಸುತ್ತ ಈ ಲೇಖನ ಮುಗಿಸುವೆ.

❑

ವಿನಾಯಕ ಕೃಷ್ಣ ಗೋಕಾಕ್ : ಸಾಂಸ್ಕೃತಿಕ ಸಾಧನೆ

ಜಿ.ಬಿ. ಹರೀಶ್

"ಭಾರತೀಯ ಭಾಷೆಗಳಿಂದ ಇಂಗ್ಲಿಷ್‌ನಲ್ಲಿ ಅನೇಕ ಸಾಹಿತ್ಯ ಕೃತಿಗಳು ಅನುವಾದಿತವಾಗಿ ಪ್ರಕಟಿಸಲ್ಪಟ್ಟಿವೆ. ಅಂತಾರಾಷ್ಟ್ರೀಯ ವರ್ಚಸ್ಸಿಲ್ಲದ ಕಂಪೆನಿಗಳು ಇವುಗಳನ್ನು ಪ್ರಸಿದ್ಧಿಪಿದ(ಪ್ರಕಟಿಸಿದ) ಕಾರಣ ಇವು ಪ್ರೆಸ್ಸಿನಿಂದ ಸತ್ತೇ ಹುಟ್ಟುತ್ತವೆ ... ಇನ್ನೊಂದು ಮಾತು, ಆಧುನಿಕ ಪ್ರಪಂಚದಲ್ಲಿ ಆತ್ಮಿಕ ಶೂನ್ಯತೆಯ ವಾತಾವರಣದಲ್ಲಿ ನಾವು ಜೀವಿಸುತ್ತಿರುವ ಬಗೆಗೆ ಸ್ಪೆಂಡರ್ ಮಾತನಾಡಿದ್ದಾರೆ. ಏಶಿಯನ್ ದೇಶದ ಸಾಹಿತ್ಯವಲ್ಲಿ ಪರಿವರ್ತನೆ ಇಲ್ಲದ ಕ್ರಾಂತಿ-ನಡೆದಿದೆಯೆಂದು ಸ್ಪೆಂಡರ್ ಹೇಳಿದರು. ಇಂಗ್ಲಿಷಿನಲ್ಲಿ ಸಹ ಭಾರತೀಯ ದೃಷ್ಟಿಯನ್ನು ಬೀರುವ ಸಾಹಿತ್ಯ ಕೃತಿಗಳು ಪ್ರಕಟವಾಗಿವೆ. ಆದರೆ ಪಡುವಣದ ವಾಚಕರು ಅತ್ತಕಡೆಗೆ ಕಣ್ಣೆತ್ತಿ ನೋಡಿಲ್ಲ. ಅರವಿಂದರ ಸಾವಿತ್ರಿ ಪ್ರಕಟವಾದ ಮೇಲೆ ಅದು ಬರಿ 'nonsence' ಎಂದು ಗಜ ರಗಳೆ ಎಂದರಂತೆ. ಇಂತಹ ಮನೋವೃತ್ತಿಯನ್ನು ನಾನು ವಿರೋಧಿಸುತ್ತೇನೆ. ಮೊದಲು ಪುಸ್ತಕವನ್ನು ಓದುವುದು ಅವಶ್ಯ.... ಓದದೆ, ವಿಚಾರ ಮಾಡದೆ ಮೂಡಣದ ಬಗ್ಗೆ ಇಲ್ಲವೆ ಪಡುವಣದ ಬಗ್ಗೆ ಆಪಾದನೆ ಮಾಡುವುದು ಬೇಡ. ಕಾವ್ಯ ಹೆಪ್ಪುಗಟ್ಟಿದ ಧರ್ಮವಲ್ಲ, ವಾಯು ಇಲ್ಲವೆ ಆಕಾಶ ಧರ್ಮ.... ಕವಿ ತನ್ನ ಸ್ವಂತದ ಧರ್ಮವನ್ನು ನಿರ್ಮಿಸಿಕೊಳ್ಳುತ್ತಾನೆ. ಅದೇ ಅವನ ಆಧ್ಯಾತ್ಮಿಕ ಜೀವನ.. ರೊಮೇರೋಲಾ ಹಾಗೂ ಎ.ಹಕ್ಸ್ಲೇ ಅಂಥವರನ್ನು ಬಿಟ್ಟರೆ ಪಡುವಣದ ವಾಚಕರು ನಮ್ಮನ್ನು ತಿಳಿದುಕೊಂಡಿಲ್ಲ" ಎಂದವರು ವಿ.ಕೃ.ಗೋಕಾಕರು.

ಜಪಾಪಿನಿನಲ್ಲಿ ಇಂಗ್ಲಿಷ್ ಭಾಷೆಯ ಪಶ್ಚಿಮದ ಕವಿ ಸ್ಟೀಫನ್ ಸ್ಪೆಂಡರ್ ಮಾಡಿದ ಭಾಷಣಕ್ಕೆ ಸಭೆಯಲ್ಲೇ ಗೋಕಾಕರು ಕೊಟ್ಟ ಉತ್ತರ ಇದು. ಕಳೆದು ತಿಂಗಳು ಅಲ್ಲಲ್ಲಿ ಗೋಕಾಕರನ್ನು ಓದುತ್ತಿದ್ದೆ. ಒಂದು ಕವನ ಗಮನ ಸೆಳೆಯಿತು. ಅದರ ಹೆಸರು 'ಐವತ್ತರ ಅರಿವು'. ಅರ್ಧ ಶತಮಾನವನ್ನು ಕನಸ್ಸಿನಲ್ಲಿ ಕಳೆದೆ. 'ಇನ್ನೂ ಎಚ್ಚರವಿಲ್ಲ, ಅರ್ಧಮರ್ಧ!' ಎನ್ನುತ್ತಾನೆ ಕವಿ. ಕವಿ ಚಿಂತಿಸಿದ್ದಾನೆ, ಧ್ಯಾನ ಮಾಡಿದ್ದಾಗಿದೆ. ಆದರೆ ಎಲ್ಲವೂ ಹಸಿ ಬಿಸಿ, ಮನಸ್ಸು ಯಾಕೋ ಮಸುಕು. ಅವನಿಗೆ ಒಳಗೊಳಗೇ ಪಿಡಿಮಿಡಿಯಾಗುತ್ತಿದೆ. ಕಳೆದ ಐವತ್ತೆರಡು ವರ್ಷ ಕವಿಗೆ ವಿಚಿತ್ರವೆನಿಸುತ್ತಿದೆ. ಸವಣೂರು, ಧಾರವಾಡದ ಜೀವನ ಕಳೆದಾಗಿದೆ. ಜೇವದೂರು ಮನೆತನದ ಶಾರದಾ ಅವರೊಡನೆ ವಿವಾಹ ಆಗಿದ್ದಾಗಿದೆ. ಅಂದಿನ ಸಾಹಿತ್ಯ ಲೋಕದಲ್ಲಿ ಕಾಲೂರಿದ್ದಾಗಿದೆ. ಗೋಕಾಕರು ಓದಿನಲ್ಲಿ ಸದಾ ಚುರುಕು, ಅಂಕಗಳಿಸುವುದು, ಪದವಿ ಪಡೆಯುವುದು ಮೊದಲಿಂದಲೇ ಒಲಿದಿತ್ತು, ಅಖಿಲ ಕರ್ನಾಟಕ ಲೇಖಕರ ಗೋಷ್ಠಿಯ ಅಧ್ಯಕ್ಷತೆ ವಹಿಸಿಕೊಂಡಿದ್ದ ಅವರು(೧೯೩೪), ಇನ್ನೂ ಓದಲೆಂದು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಕ್ಕೆ ಸೇರಿದ್ದರು. ಚಿಕ್ಕ ಹುಡುಗನಾಗಿದ್ದಾಗಲೇ ಓದಿನ ಗೀಳಿಗೆ ಬಿದ್ದ ಗೋಕಾಕ್ ಇಂಗ್ಲಿಷ್ ಕಾವ್ಯಕ್ಕೆ ಮನಸೋತವರು. ಅದರಾಚೆಗಿನ ಸಾಹಿತ್ಯ ಬಲ್ಲವರು. ಕೊನೆತನಕ ಶಕ್ತಿಯಲ್ಲಿ ಗೋಕಾಕರಿಗೆ ನಂಬಿಕೆಯಿತ್ತು. ಆಧ್ಯಾತ್ಮ, ಪ್ರೇಮ, ಭಾವುಕತೆ, ಕನ್ನಡದ ಬಗ್ಗೆ ಅಪಾರ ಪ್ರೀತಿ ಇವೆಲ್ಲಾ ಸೇರಿದ್ದ ಗೋಕಾಕ್ ವಿಚಿತ್ರ ವ್ಯಕ್ತಿತ್ವದ ಕವಿ. ಒಂದಕ್ಕೊಂದು ಘರ್ಷಣೆ ಆಗುವ ವಿಷಯ ಕುರಿತು ಅವರು ಬರೆದಿದ್ದಾರೆ. ಅದಕ್ಕೆ ಕಾರಣ ಪೂರ್ವ, ಪಶ್ಚಿಮಗಳ ಓದು, ತಿರುಗಾಟ ಅವರಿಗಿದ್ದುದು. 'ಐವತ್ತರ ಅರಿವು'ವಿನಲ್ಲಿ ಒಂದು ಕಡೆ ಹೇಳುತ್ತಾರೆ. "ಆಸೆಯಿಲ್ಲದ ಬಾಳು. ಒಳಗಂಪು ಒಗುಮಿಗಲಿ. ಇದ್ದ ಶಕ್ತಿಯನ್ನೆಲ್ಲ ವಿನಿಯೋಗಿಸು. ವಾಮಮಾರ್ಗವ ತೊರೆದು ರಾಜಮಾರ್ಗವ ತುಳಿದು ಬಂದಿರುವ ಭಾಗ್ಯ-ಭೋಗ್ಯದ ಭೋಗಿಸು".

ಗೋಕಾಕರು ವಿಶ್ವಯುದ್ಧ, ಕಮ್ಯುನಿಸಂನ ಉತ್ತುಂಗ ಸ್ಥಿತಿಕಂಡವರು. ಆ ಕಾಲದಲ್ಲಿ ಬದುಕಿದ್ದ ಕನ್ನಡದ ಅನೇಕ ಸಾಹಿತಿಗಳಿಗೆ ವಿದೇಶ ಓದಿನ ಮಾತು, ಗೋಕಾಕರು ಪಶ್ಚಿಮದೇಶಗಳೊಂದಿಗೆ ಜಪಾನ್ ಕೂಡ ಸುತ್ತಿ ಬಂದವರು. ಅನೇಕ ಸಾಹಿತ್ಯ ಅಲೆಗಳು, ವಾದವಿವಾದಗಳು ಅವರ ಮೂಲಕ ಹಾದು ಹೋಗಿವೆ. 'ಚೈತ್ಯಪುರುಷನಿಗೆ' ಕವನದಲ್ಲಿ ಗೋಕಾಕ್ ಹೇಳುತ್ತಾರೆ.

> ಮದವೇರಿದಾಗ ನೀ ಚಕ್ರವರ್ತಿ.
> ಕಲ್ಪನಾಭ್ಯಂಗವನ್ನೇರಿದ ರಾಜ.

ಭಾವಮದಿರೆಯ ಕುಡಿದು ಮಧ್ಯವರ್ತಿ
ಜೊತೆಯಿರಲು ವರ ಕಾಲಿದಾಸ, ಭೋಜ,
ಲಹರಿ ಬಂದಿರಲಷ್ಟೆ ನೀನು ಶಕಪುರುಷ.

....

ಉಳಿದ ಸಮಯದಿ ನೀನು ಬಟ್ಟ ಬಯಲು
ಕಾಣುತಿದೆ ರಕ್ತಮಯವಾದ ಎರಳೆ;
ಕೇಳುತಿದೆ ಪಂಜರದ ಗಿಳಿಯ ಹುಯಿಲು
ಏಳುತಿದೆ ಫೈಲು ಕಾಗದದ ಸುರುಳಿ;
ಚಂದ್ರಮನ ಹಿಮಗಳಲಿ ಬಿದ್ದ ಮೊಲವು;
ದಿನಕರನ ನುಂಗಿರುವ ರಾಹುಗವ್ವು;

ಕೆಲವು ಲೇಖಕರು ತುಂಬಾ ತೂಕ ಮಾಡಿ ನಾಕೈದು ವರ್ಷಕ್ಕೆ ಒಂದು ಕತೆ, ಕವನವನ್ನೋ ಬರೆಯುತ್ತಾರೆ. ಗೋಕಾಕರ ದಾರಿ ಹಾಗಲ್ಲ. ಆದಷ್ಟೂ ವಿಷಯಗಳ ಬಗ್ಗೆ ಎಷ್ಟು ಸಾಧ್ಯವೋ ಅಷ್ಟನ್ನೂ ಬರೆಯುವುದು. ಉಳಿದದ್ದು ಉಳಿಯಲಿ. ಹೊಸ ಹೊಸ ಪ್ರಯೋಗ ಮಾಡುವುದು ಅವರಿಗೆ ಪ್ರಿಯ. ಕನ್ನಡದ ಓದಿನಲ್ಲಿ ಗೋಕಾಕರು ವಿಮರ್ಶೆಯ ಕ್ರಾಸ್ ಏರಿದ್ದಾರೆ. ಅವರನ್ನು ನವ್ಯಕಾವ್ಯದ ಪ್ರವರ್ತಕ ಹೌದು-ಅಲ್ಲ ಎಂದು ಬಾರಿ ಚರ್ಚೆ ನಡೆದಿದೆ. ಗೋಕಾಕರಿಗೆ ನವ್ಯಕಾವ್ಯ ಪ್ರಯೋಗ ಶೀಲತೆಯ ಒಂದು ಹಂತ. ಅದನ್ನು ಅವರು ಮಾಡಿದ್ದೂ ಇದೆ. ಮೀರಿದ್ದೂ ಇದೆ. ಒಳ್ಳೆಯ ಕವಿ ಪಂಥಗಳನ್ನು ಮೀರಿ, ಬೇರೊಂದು ತಲೆಮಾರಿಗೂ ಫ್ರೆಶ್ ಆದ ಅಚ್ಚರಿ ಹುಟ್ಟಿಸುವವನಾಗಿರುತ್ತಾನೆ. ಗೋಕಾಕರ ಕವಿತೆಯಲ್ಲಿ ಆ ಗುಣ ಕಮ್ಮಿ. ಇದಕ್ಕೆ ಅವರಲ್ಲಿ ವಿಸ್ತಾರವಿರುವಂತೆ, ಓದುಗನನ್ನು ಆವರಿಸುವ ಸಾಂದ್ರತೆ, ಕಿಕ್ಕಿರತ ಕಮ್ಮಿ. ಆದರೆ ಅಡಿಗರ ಸಂಪ್ರದಾಯದ ವೀರನವ್ಯತೆಯನ್ನೇ ಹಿಡಿದು ಗೋಕಾಕರು ಕವಿಯೇ ಅಲ್ಲ ಎಂಬುದು ಧಾರ್ಷ್ಟ್ಯ ಅಷ್ಟೇ.

ಗಮನಿಸಿ, ಒಂದೇ ಕಾಲಕ್ಕೆ ಒಂದೇ ಊರು, ರಾಜ್ಯ ಭಾಷೆಯಲ್ಲಿ ಹಲವು ರೀತಿಯ ಬರಹಗಾರರಿರುತ್ತಾರೆ. ಬಿಗಿಯಾದ ಗದ್ಯ, ಉಕ್ಕಿನಂತೆ ಪೆಡಸಾದ ಗದ್ಯ, ಲವಲವಿಕೆಯಿದ್ದರೂ ಏನನ್ನೂ ಹೇಳದ ಗದ್ಯ, ಶಬ್ದಾಡಂಬರದ ಗದ್ಯಗಳು ನಮ್ಮ ಕತೆ, ಕಾದಂಬರಿ, ಅಂಕಣ ಬರೆಹಗಳಲ್ಲಿ ಈಗ(೨೦೦೭) ಇಲ್ಲವೆ? ಅದೇ ರೀತಿ ಹಳಗನ್ನಡ ಹೋಲುವ ಶೈಲಿ, ಪ್ರಾಸಪ್ರಿಯತೆಗೆ ಅಂಟಿಕೊಂಡ ಶೈಲಿ, ನವ್ಯವನ್ನು ಸಾಧಿಸಬೇಕೆಂಬ ಶೈಲಿ, ಸಿಟ್ಟು-ಸೆಡಲಿಗೆ ದಲಿತ-ಬಂಡಾಯದ ಧಾಟಿಯೇ ಧಾಟಿ ಎಂಬ ಶೈಲಿ ಸುತ್ತುಮುತ್ತು ಈಗಲೂ ಇದ್ದೇ ಇದೆ. ಕನ್ನಡ ಕಾವ್ಯವಾಗಲಿ, ಸಾಹಿತ್ಯವಾಗಲಿ ವಿರುದ್ಧದಿಕ್ಕಿನ ವಾದ ವಿವಾದಗಳಲ್ಲಿ ಹೇಗೆ ಸದಾ ಕಾಲ ಸಿಕ್ಕುರುತ್ತದೆಯೋ ಹಾಗೆಯೇ ವಿವಿಧ ಬಗೆಯ ಪ್ರಯೋಗದಲ್ಲಿ ತೊಡಗಿಸಿಕೊಂಡೇ ಇದೆ. ಪ್ರಯೋಗವೆಲ್ಲ ಸಾಧನೆಯಾಗುವುದಿಲ್ಲ ಅದು ಬೇರೆ ಮಾತು.

ಗೋಕಾಕರು ಸಾಹಿತ್ಯ ಜೀವನ ಎರಡನ್ನೂ ಸೀರಿಯಸ್ ಆಗಿ ಸ್ವೀಕರಿಸಿದವರು. ಅವರು ಏನನ್ನೇ ಮಾಡಿದ್ದರೂ ಶ್ರಮದಿಂದಲೇ ಮಾಡುತ್ತಿದ್ದರು. 'ಭಾರತ ಸಿಂಧು ರಶ್ಮಿ' ಯಂಥ ಕಾವ್ಯ ದೀರ್ಘಕಾಲದ ಓದು, ಮನನ ಬೇಡುವಂಥದ್ದು. ಕವಿಯಾಗಿ ಗೋಕಾಕ್‌ಗಿಂತ ಒಟ್ಟಾರೆ ಕನ್ನಡದ ಸಾಂಸ್ಕೃತಿಕ ವ್ಯಕ್ತಿತ್ವವಾಗಿ ಗೋಕಾಕ್ ದೊಡ್ಡವರೆಂಬುದರಲ್ಲಿ ಯಾವ ಅನುಮಾನಗಳೂ ಇಲ್ಲ. ಬೇಂದ್ರೆ, ಲಂಕೇಶ್, ಕುವೆಂಪು, ಅಡಿಗ, ನರಸಿಂಹಸ್ವಾಮಿ ಈ ಕವಿಗಳನ್ನು ಓದುವ ಕನ್ನಡ ಕಾವ್ಯ ಪ್ರೇಮಿಗಳಿಗೆ ಗೋಕಾಕರು ಕಾವ್ಯದಲ್ಲಿ ಅಷ್ಟು ಕಸುವಿದೆ ಎನಿಸುವುದಿಲ್ಲ. ಆದರೆ ಈ ದೇಶ ಆ ದೇಶ ಪರದೇಶವೆನ್ನದೆ ಎಲ್ಲ ಕಡೆಯಲ್ಲೂ ಕನ್ನಡವನ್ನೇ ಮಂತ್ರವನ್ನಾಗಿಸಿಕೊಂಡಿದ್ದ ಗೋಕಾಕರು, ಗೋಕಾಕರೇ ದೂಡಬಹುದಾದ ಅನೇಕ ಕೆಲಸಗಳನ್ನು ಮಾಡಿದ್ದಾರೆ.

'ಸಮನ್ವಯ' ಪತ್ರಿಕೆ ನಡೆಸಿದ ಅವರಿಗೆ ಸರ್ವೋದಯ-ನವ್ಯವೇ ಇರಲಿ, ಅದರಿಂದ-ಸಾಯಿಬಾಬಾ ಭಕ್ತಿಯೇ ಇರಲಿ, ಸಮನ್ವಯದ ದೃಷ್ಟಿಯೇ ಮುಖ್ಯ. ಅತಿರೇಕಗಳು ಅವರಿಗೆ ಹೊರತು.

ಹಲವಾರು ಅಕಡೆಮಿಗಳ ಸದಸ್ಯತ್ವ, ಅಧ್ಯಕ್ಷತೆ ವಹಿಸಲು ಬೇಕಾದ ತಾಕತ್ತು ಅವರಿಗಿತ್ತು. ಕನ್ನಡಿಗರಿಗೆ ಭಾರತದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಸಿಗಬೇಕಾದ ಗೌರವವೆಲ್ಲ ಸಿಕ್ಕಿದ್ದು ಸರಿಯಾದ ಕಾಲಕ್ಕೆ ಸರಿಯಾದ ಸ್ಥಾನದಲ್ಲಿ ಗೋಕಾಕರು ಇದ್ದು, ತಮ್ಮ ಮಾತುಗಾರಿಕೆ ಪ್ರಭಾವವನ್ನು ಸಮರ್ಥವಾಗಿ ಬಳಸಿದ್ದರಿಂದಲೇ.

ಮೊದಲೇ ಹೇಳಿದಂತೆ ಪಾಂಡಿಚೇರಿಯ ಮದರ್(ಶ್ರೀಮಾತೆ) ಇರಲಿ. ಭಾರತ ಸಿಂಧು ರಶ್ಮಿಯಲ್ಲಿ ಬರು ಅದಿತಿ (Aditi = ದೇವತೆಗಳ ತಾಯಿ) ಇರಲಿ. ಗೋಕಾಕ್‌ರಿಗೆ ಭಕ್ತಿ. ಶಕ್ತಿಯ ಉಪಾಸಕರಾಗಿದ್ದ ಗೋಕಾಕರು ತಮ್ಮ ಬುದ್ಧಿಶಕ್ತಿಯನ್ನು ಸದಾ ಕನ್ನಡದ ಒಳಿತಿಗೆ ಬಳಸಿದ್ದಾರೆ. ಕುವೆಂಪು. ಬೇಂದ್ರೆ. ಕಾರಂತ. ಮಾಸ್ತಿ ಅವರಿಗೆ ಜ್ಞಾನಪೀಠ ಪ್ರಶಸ್ತಿ ದೊರೆಯುವುದರಲ್ಲಿ ಗೋಕಾಕ್‌ರ ಪಾತ್ರ ದೊಡ್ಡದು. ದೊಡ್ಡದನ್ನು. ದೊಡ್ಡವರನ್ನು ಮೆಚ್ಚುವುದರಲ್ಲಿ. ಸಾರ್ವಜನಿಕವಾಗಿ ಅದನ್ನು ಆಡಿ-ಮಾಡಿ ತೋರಿಸುವುದರಲ್ಲಿ ಅವರೆ ಅವರಿಗು ಹೆಚ್ಚು ಅವರಿಗಿಂತ.

ಜಯತೀರ್ಥ ರಾಜಪುರೋಹಿತರು ಗೋಕಾಕರು ಕನ್ನಡ ನಾಡು. ಸಮಾಜಕ್ಕೆ ಮಾಡಿದ ಕೆಲಸವನ್ನು "ಆಂಗ್ಲ ಸಾಹಿತ್ಯ ಕ್ಷೇತ್ರದ ಮಹಾಪುರುಷ ಎಜ್ರಾಪೌಂಡನ ಕಾರ್ಯಕ್ಕೆ ಹೋಲಿಸಬಹುದು" ಎಂದು ಹೋಲಿಸಿದ್ದಾರೆ('ಹೈದರಾಬಾದಿನಲ್ಲಿ ಜಿಜ್ಞಾಸ ಕೂಟ').

ಮರೆಯಬಾರದ ಮಾತು ಗೋಕಾಕರು ಹಲವು ನದಿಗಳ ನೀರು ಕುಡಿದ್ದಾರೆ. ನದಿಯ ಹರಿಯುವಿಕೆ ಚಲನಶೀಲತೆ ಅವರಿಗೆ ಬಂದಿದೆ. ವಿಚಾರಗಳನ್ನು ಸ್ಪಷ್ಟವಾಗಿ ಹೇಳಿದಂತೆ ಮತ್ತೊಂದು ಕಾಲಕ್ಕೆ ಅದನ್ನು ಬದಲಾಯಿಸಿಕೊಳ್ಳುವ ನೇರವಂತಿಕೆ ಅವರಲ್ಲಿದೆ. ಎಳೆವಯಸ್ಸಿನಲ್ಲಿ ಕುವೆಂಪು ಕಾವ್ಯ ಕುರಿತು ಕಟುವಾಗಿ ಬರೆದ ಗೋಕಾಕರು ತಮ್ಮ ನಿಲುವನ್ನು ಪ್ರೌಢವಯಸ್ಸಿನಲ್ಲಿ ಬದಲಾಯಿಸಿಕೊಂಡರು. 'ದೇವರು ಬಿಟ್ಟರೆ ಅತಿ ದೊಡ್ಡ ಸೃಷ್ಟಿಕರ್ತ-ಶೇಕ್ಸ್‌ಪಿಯರ್ ' ಎನ್ನುತ್ತಿದ್ದ ಅವರೇ ನಮ್ಮ ಶಿಕ್ಷಣದ ಶೇಕ್ಸ್‌ಪಿಯರ್ ಕಲಿಕೆ ಅತಿಯಾಯಿತು ಎನ್ನುತ್ತಿದ್ದರು ನಂತರ.

ಇನ್ನೊಂದು ಮಾತೆಂದರೆ ಗೋಕಾಕರು ಸಮುದ್ರ ಪ್ರಯಾಣ ಮಾಡಿದ್ದರು. ಉಪ್ಪುನೀರಿನ ಪ್ರಯಾಣಗಳಿಂದ ಕನ್ನಡಕ್ಕೆ ಪ್ರವಾಸ ಸಾಹಿತ್ಯದ ಮೂಲಕ ಹೊಸ ಭಾಷೆ. ಹೊಸ ವಿಚಾರಗಳನ್ನು ತಂದವರು. ಸಮುದ್ರ ನಿಂತಲ್ಲೇ ಚಲಿಸುವಂಥದ್ದು. ಗೋಕಾಕರು ವೈಚಾರಿಕವಾಗಿ ಮಾರ್ಕ್ಸ್‌ವಾದದಿಂದ ಅರವಿಂದ ಯೋಗಕ್ಕೆ ಚಲಿಸಿದವರು. ಕನ್ನಡದ ಪ್ರೀತಿ. ಇಂಗ್ಲಿಷ್ ಬೋಧನೆ ಎರಡನ್ನೂ ಒಟ್ಟಿಗೆ ಇರಿಸಿಕೊಂಡವರು. ಉತ್ತರ ಕರ್ನಾಟಕದ ಅಂದಿನ ತಲೆಮಾರಿನ ಲೇಖಕರ ಸಾಂಸ್ಕೃತಿಕ ಪರಿಸರದಲ್ಲಿ ಒಂದು ವಿಶೇಷತೆಯಿತ್ತು. ಅದು ಮೈಸೂರು-ಬೆಂಗಳೂರು ಲೇಖಕರಿಗೆ ಅರ್ಥವಾಗುವುದು ಕಷ್ಟ. ಪಾರಂಪರಿಕ ಸಾಧುಗಳ ಸಂಪರ್ಕ. ಕನ್ನಡ-ಮರಾಠಿ ಸೀಮೆಯಲ್ಲಿ ಬಂದ ಗೋಕಾಕರ ತಂದೆ ತತ್ವಜ್ಞಾನಿ ರಾನಡೆಯವರಲ್ಲಿ ನಂಜಿಕೆಯಿಟ್ಟರು. ಗೋಕಾಕರು ನದಿ-ಸಮುದ್ರ ಎರಡರ ಗುಣ ಇದ್ದವರಾದ್ದರಿಂದ ಮೂಲದಲ್ಲಿ ಅರವಿಂದರೊಡನೆ ತಿಕ್ಕಾಟವಿದ್ದ ಗುರುದೇವ ರಾನಡೆಯವರ ತತ್ವಜ್ಞಾನ ಗೋಕಾಕರು ನಿರ್ಮಿಸಿಕೊಂಡ ಅರವಿಂದ ಸಮುದ್ರದಲ್ಲಿ ಸೇರಿಕೊಂಡಿತು.

ವೈಯಕ್ತಿಕವಾಗಿ ಗೋಕಾಕರ ನಿಲುವುಗಳು. ಅವರ ಸಾಯಿಬಾಬಾ ಸಂಪರ್ಕ ಇವು ಸಾಕಷ್ಟು ವಾದವಿವಾದಕ್ಕೆ ಕಾರಣವಾಗಿದ್ದವು. ಆದರೆ ಭಾರತೀಯತೆ. ಕನ್ನಡತನ ಎರಡನ್ನೂ ದೃಢವಾಗಿ ಮೈಗೂಡಿಸಿಕೊಂಡಿದ್ದ ಗೋಕಾಕರು ತಮ್ಮ ಸಾಹಿತ್ಯಕ್ಕಿಂತ ಒಟ್ಟು ಭಾರತೀಯ. ಕನ್ನಡ ಸಾಹಿತ್ಯಕ್ಕೆ ಕೊಟ್ಟ ಕೊಡುಗೆ ವಿವಾದತೀತ.

ಲಂಕೇಶ್ ಗೋಕಾಕರ ಕಡುವಿರೋಧಿ. ತಾವು ಸಂಪಾದಿಸಿದ 'ಅಕ್ಷರ ಹೊಸ ಕಾವ್ಯ'ದಲ್ಲಿ ಗೋಕಾಕರ ಬದಲು - ಅವರ ಗುಣವಿರುವ - ಎಂದು ಕಾರಣಕೊಟ್ಟು ಚಿತ್ತಾಲ. ಮೊಕಾಶಿ ಕವನಗಳನ್ನು ಸೇರಿಸಿಕೊಂಡಿದ್ದರು. ಅದೇ ಲಂಕೇಶ್ ಗೋಕಾಕರನ್ನು ಕುರಿತು ಹೇಳಿರುವ ಮಾತು ಗಮನಿಸಿ :

"ಕನ್ನಡಕ್ಕೆ ನಾಲ್ಕು ಸಲ ಜ್ಞಾನಪೀಠ ಪ್ರಶಸ್ತಿ ದೊರೆಯುವಲ್ಲಿ ಗೋಕಾಕರ ವರ್ಚಸ್ಸು ಕೆಲಸ ಮಾಡಿದೆ: ಕನ್ನಡದ ಕಂಪನ್ನು ಎಲ್ಲೆಡೆಗೆ ಹರಡಿದವರಲ್ಲಿ ಗೋಕಾಕ್ ಪ್ರಮುಖರು. ಶ್ರೇಷ್ಠ ಅಧ್ಯಾಪಕರಾಗಿ ಸಾವಿರಾರು ಜನಕ್ಕೆ ಸಾಹಿತ್ಯ ಕಲಿಸಿದ ಗೋಕಾಕ್ ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ಕೆಲಸ ಮಾಡಿದರು. ಕನ್ನಡ ನವ್ಯ ಕಾವ್ಯದ ಹೆಸರನ್ನು ಕೂಡ ಕೇಳದೆ ಇದ್ದಾಗ ನವ್ಯ ನುಡಿಗಟ್ಟು ಅನುಭವದ ಬಗ್ಗೆ ಬರೆದವರು ಅವರು. ಸಾಹಿತ್ಯ ಸೇವೆಯನ್ನು ಏಕಾಗ್ರಚಿತ್ತದಿಂದ. ಶುದ್ಧ ಅಂತಃಕರಣದಿಂದ ಮಾಡಿದ ಜನಾಂಗಕ್ಕೆ ಸೇರಿದವರು ಗೋಕಾಕ್. ಇವರ ಒಟ್ಟಾರೆ ಸಾಧನೆ ವ್ಯಕ್ತಿತ್ವ ನೆನೆದು ಅವರ ಈ ಸಂತೋಷದ ಗಳಿಗೆಯಲ್ಲಿ ಹೃತ್ಪೂರ್ವಕವಾಗಿ ಅಭಿನಂದಿಸಲೇಬೇಕಾದದ್ದು ಕನ್ನಡಿಗರ ಕರ್ತವ್ಯ".

ಜೊತೆಗೆ ಸ್ಟೀಫನ್ ಸ್ಪೆಂಡರ್‌ಗೆ ಗೋಕಾಕರು ಕೊಟ್ಟ ಉತ್ತರದ ಪ್ರಸ್ತುತೆಯನ್ನು ನಾವು ಈಗ ಚರ್ಚಿಸಬೇಕಿದೆ.

ಜಿ.ಪಿ. ರಾಜರತ್ನಂ : ಧೀಮಂತ ವ್ಯಕ್ತಿತ್ವದ ಒಂದು ನೆನಪು

ಗುಬ್ಬಿ ರೇವಣಾರಾಧ್ಯ

೧೯೬೯ರ ಏಪ್ರಿಲ್ಲೋ, ಮೇನೋ ಇರಬೇಕು. ಬಿಸಿಲು ಬಹಳ ಜೋರಾಗಿತ್ತು. ಆಗ ನಾನು ವಿದ್ಯುತ್ ಮಂಡಳಿಯ ಮಲ್ಲೇಶ್ವರ ಉಪ-ವಿಭಾಗದ ತಾಂತ್ರಿಕ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೆ. ಕೆಲಸದ ಹೊರೆ ಜಾಸ್ತಿ ಇದ್ದುದರಿಂದ, ಬೆಳಿಗ್ಗೆ ೯ಕ್ಕೆ ಆಫೀಸಿಗೆ ಹೋಗಿ ಕೆಲಸ ಮಾಡಬೇಕಾಗಿತ್ತು. ೧೧-೩೦ಕ್ಕೆ ಸ್ನೇಹಿತರೊಂದಿಗೆ ಕಾಫಿ ಕುಡಿದು ಸಿಗರೆಟ್ ಸೇದುವ ಅಭ್ಯಾಸ. ಸೆಕೆ ಜಾಸ್ತಿ ಇದ್ದುದರಿಂದ ತಣ್ಣಗೆ ಏನಾದರೂ ಕುಡಿಯೋಣವೆಂದು, ಸ್ನೇಹಿತರೊಡನೆ ಹೊರಬಂದೆ. ವಿದ್ಯುತ್ ಬಿಲ್ಲು ತುಂಬಲು ಉದ್ದನೆಯ ಕ್ಯೂ ಇತ್ತು. ಕ್ಯೂನ ಕೊನೆಯಲ್ಲಿ ಶ್ರೀ ರಾಜರತ್ನಂ, ಉತ್ತರೀಯದಿಂದ, ಬೆವರನ್ನು ಒರೆಸಿಕೊಳ್ಳುತ್ತಾ, ಕೈಯ್ಯಲ್ಲಿ ವಿದ್ಯುತ್ ಬಿಲ್ಲನ್ನೂ, ಹಣವನ್ನೂ ಹಿಡಿದುಕೊಂಡು ನಿಂತಿದ್ದರು. "ನಮಸ್ಕಾರ ಸಾರ್" ಎಂದೆ. "ನಮಸ್ಕಾರ - ಚೆನ್ನಾಗಿದ್ದೀರ" ಎಂದರು. "ನೋಡಿ ಸಾರ್ ಇಷ್ಟರಮಟ್ಟಗಿದ್ದೀನಿ" ಎನ್ನುತ್ತಾ ಅವರ ಕೈಯ್ಯಲ್ಲಿದ್ದ ಬಿಲ್ಲನ್ನೂ, ಹಣವನ್ನೂ, "ಇಲ್ಲಿ ಕೊಡಿ ಸಾರ್" ಎನ್ನುತ್ತಾ ತೆಗೆದುಕೊಂಡು, ನನ್ನ ಸ್ನೇಹಿತರನ್ನೂ, ಶ್ರೀ ರಾಜರತ್ನಂರವರನ್ನೂ, ಅಲ್ಲೇ ಬಿಟ್ಟು, ನೆಟ್ಟಗೆ ಆಫೀಸಿನ ಒಳಗಡೆಯಿಂದ ಕ್ಯಾಷಿಯರ್ ಹತ್ತಿರ ಹೋದೆ. ಬಿಲ್ಲನ್ನೂ, ಹಣವನ್ನೂ ಕೊಟ್ಟು ರಸೀತಿ ಹಾಕಿಸಿ ತಂದು, ಅವರ ಕೈಗೆ ಚಿಲ್ಲರೆಯನ್ನೂ, ರಸೀತಿಯನ್ನೂ ಕೊಡುತ್ತಾ "ಬನ್ನಿ ಸಾರ್- ಕಾಫಿ ಕುಡಿಯೋಣ" ಎಂದು ಆಹ್ವಾನಿಸಿದೆ. "ಒಳ್ಳೇದು ನಡೀರಿ ಕುಡಿಯೋಣ - ಹಾಗೇ ನಿಮಗೊಂದು ಮಾತು ಹೇಳಬೇಕು" ಎನ್ನುತ್ತಾ ಹೊರಟರು. ಜೊತೆಯಲ್ಲಿ ನಾವೂ ಹೊರಟೆವು. ಕುತೂಹಲ ತಡೆಯಲಾರದೆ ಕೇಳಿದೆ - "ಏನೋ ಒಂದು ಮಾತು ಹೇಳಬೇಕು ಅಂದ್ರಲ್ಲಾ ಸಾರ್". ನನ್ನ ಕಡೆ ತಿರುಗಿ ಹೇಳಿದರು - "ಅಷ್ಟೊಂದು ಜನ ಕ್ಯೂನಲ್ಲಿ ನಿಂತಿರೋವಾಗ ನನ್ನ ಬಿಲ್ ತೆಗೆದುಕೊಂಡು ಹೋಗಿ, ನೀವು ರಸೀತಿ ಹಾಕಿಸಿದ್ದು ಸರಿಯಲ್ಲ" ಎಂದರು. "ಇರಲಿ ಬಿಡಿ ಸಾರ್ ಪರವಾಗಿಲ್ಲ. ಅವರೆಲ್ಲಾ ನಿಮಗಿಂತ ಚಿಕ್ಕವರು. ವಯಸ್ಸಾದವರಲ್ಲ" ಎಂದೆ. "ವಯಸ್ಸಿನ ಪ್ರಶ್ನೆ ಅಲ್ಲ. ಕ್ಯೂನಲ್ಲಿ ಹೆಂಗಸರೂ ಚಿಕ್ಕಮಕ್ಕಳೂ ಇದ್ದಾರೆ. ಈ ಬಿಸಿಲಿನ ತಾಪದಿಂದ ಅವರಿಗೆ ನನಗಿಂತ ಹೆಚ್ಚಾಗಿ ಕಷ್ಟ ಆಗುತ್ತಾ ಇದೆ. ಅಂಥಾದ್ದರಲ್ಲಿ ನೀವು ಕೌಂಟರಿನೊಳಗಡೆಯಿಂದ ನನ್ನ ಬಿಲ್ಲು ತುಂಬಿದ್ದು ಸರಿಯಲ್ಲ. ಇದರಿಂದ ಅವರೆಲ್ಲಾ ಇನ್ನೂ ೨ ನಿಮಿಷ ಬಿಸಿಲಿನಲ್ಲಿ ನಿಲ್ಲುವ ಹಾಗಾಯಿತು. ನಾನು ಮಾತನಾಡುವಷ್ಟರಲ್ಲಿ, ನೀವು ಬಿಲ್ಲು, ಹಣ ತೆಗೆದುಕೊಂಡು ಹೊರಟೇ ಹೋದಿರಿ. ನಿಮ್ಮ ಉದ್ದೇಶ ಮೊದಲೇ ನನಗೆ ಗೊತ್ತಾಗಿದ್ದರೆ, ನಾನು ಹೀಗಾಗಲು ಬಿಡುತ್ತಿರಲಿಲ್ಲ. ನಿಮ್ಮನ್ನು ತಡೆಯುತ್ತಿದ್ದೆ" ಎಂದರು. ಅವರ ಧ್ವನಿಯಲ್ಲಿ ಏನೋ ಮಾಡಬಾರದ ಕೆಲಸ ಮಾಡಿ, ಪಶ್ಚಾತ್ತಾಪ ಪಡುವ ಭಾವ ತೋರುತ್ತಿತ್ತು. ಅದು ಮುಖದಲ್ಲೂ ಕಾಣುತ್ತಿತ್ತು. ನನಗೆ ನಿಜವಾಗಿಯೂ ಇರಿಸು ಮುರಿಸಾಯಿತು. ಒಬ್ಬ ದೊಡ್ಡ ಕವಿ, ಸಾಹಿತಿಯ ವಿದ್ಯುತ್ ಬಿಲ್ಲನ್ನು, ಖುದ್ದು ತುಂಬಿ, ಅಷ್ಟರಮಟ್ಟಿಗೆ ಬೀಗುತ್ತಿದ್ದ ನಾನು, ಸೂಜಿ ಚುಚ್ಚಿದ ಬೆಲೂನಿನಂತಾದೆ. ಗಂಟಲ ಪಸೆ ಆರಿಹೋಯಿತು. ಇದ್ದಕ್ಕಿದ್ದಂತೆ ಅವರೆದುರಿಗೆ ತುಂಬಾ ಸಣ್ಣವನಾದಂತೆನಿಸಿತು. ಕ್ಯೂನಲ್ಲಿ ನಿಂತ ಪರಿಚಯದವರ ಬಿಲ್ಲನ್ನು, ನಾವೇ ತೆಗೆದುಕೊಂಡು ಹೋಗಿ, ಒಳಗಿನಿಂದ ತುಂಬಿ, ರಸೀತಿ ತಂದು ಕೊಡುವುದು ನಮಗೆ ಸಾಮಾನ್ಯ ವಿಷಯವಾಗಿತ್ತು. ಅಂತಹ ಸಂದರ್ಭಗಳಲ್ಲಿ, ಹೆಂಗಸರೂ, ಮಕ್ಕಳೂ ನಮ್ಮ ಗಮನಕ್ಕೇ ಬರುತ್ತಿರಲಿಲ್ಲ. ಅದು ತಪ್ಪೆಂದೂ ನಮಗೆ ಅನಿಸುತ್ತಿರಲಿಲ್ಲ. ಆದರೆ ಇಂದು ಶ್ರೀ ರಾಜರತ್ನಂ ನನ್ನ ಕಣ್ಣು ತೆರೆಸಿದರು. "ಎಂಥಾ ದೊಡ್ಡ ಮನುಷ್ಯರಪ್ಪಾ" ಎಂದುಕೊಂಡು, "ದಯವಿಟ್ಟು ಕ್ಷಮಿಸಿ ಸಾರ್" ಎಂದೆ - ಅದೂ ಬಹಳ ಕಷ್ಟದಿಂದ. "ಕ್ಷಮಿಸುವುದಕ್ಕೆ ಏನಾಗಿದೆ? ಏನೂ ಆಗಿಲ್ಲ. ಆದರೆ ಇನ್ನು ಮೇಲೆ ಹೀಗೆ ಮಾಡಬೇಡಿ. ಬನ್ನಿ ಕಾಫಿ ಕುಡಿಯೋಣ" ಎನ್ನುತ್ತಾ ಭುಜದ ಮೇಲೆ ಕೈಹಾಕಿ ಕರೆದೊಯ್ದರು. ಅಷ್ಟರಲ್ಲಿ ಹೋಟೆಲಿನ ಹತ್ತಿರಕ್ಕೆ ಬಂದಿದ್ದೆವು. ಹೋಟೆಲಿನ ಮಾಲೀಕರು ಎದ್ದು ನಿಂತು ಶ್ರೀ ರಾಜರತ್ನಂರವರಿಗೆ ನಮಸ್ಕರಿಸಿದರು. ಆ-ಈ ಮಾತಾಡುತ್ತಾ ಕಾಫಿ ಕುಡಿದೆವು. ಬಿಲ್ ಬಂತು. ನಮ್ಮನ್ನು ಬಿಡದೆ ಅವರೇ ಮುನ್ನುಗ್ಗಿ ಬಿಲ್ ಕೊಟ್ಟರು. "ಎಲೆಕ್ಟ್ರಿಕ್ ಬಿಲ್ ನೀವು ಕಟ್ಟಿದಿರಿ. ಕಾಫಿ ಬಿಲ್ ನಾನು ಕಟ್ಟಿದೆ" ಎಂದು ನಮ್ಮನ್ನು ನಗಿಸಿದರು. ನಗುತ್ತಾ ಮೆಟ್ಟಲಿಳಿದೆವು. "ನಾನು ಹಾಗೆ ಹೇಳಿದ್ದಕ್ಕೆ ಬೇಜಾರು ಮಾಡ್ಕೊಬೇಡಿ" ಎಂದರು. "ಬೇಜಾರು ಖಂಡಿತ ಇಲ್ಲ ಸಾರ್" ಎಂದೆ. "ಬರ್ತೀನಿ ನಮಸ್ಕಾರ" ಎಂದು ಹೊರಟರು.

"ನಮಸ್ಕಾರ ಸಾರ್" ಎಂದು ನಾವೂ ಹೊರಟೆವು. ಅವರಿಗಿಂತ ನಮಗೆ ಅರ್ಜೆಂಟ್. ಕಾರಣ-ಸಿಗರೇಟು. ಅವರೆದುರಿಗೆ ಸೇದಲು ನಾಚಿಕೆ.

೧೯೭೯ರ ಮಾರ್ಚ್ - ೧೩ - ಮಂಗಳವಾರ. ಸಂಜೆ ೫-೪೫. ಆಫೀಸಿನಿಂದ ಸುಸ್ತಾಗಿ ಮನೆಗೆ ಬಂದೆ. ಸುಸ್ತು ಆಫೀಸಿನಲ್ಲಿ ದುಡಿದು ಬಂದಿದ್ದಕ್ಕಲ್ಲ. ಕಳೆದ ಆರು ತಿಂಗಳುಗಳಿಂದ, ಬಹಳ ಕಷ್ಟಪಟ್ಟು ಒಂದು ಮನೆ ಅಂತ ಕಟ್ಟಿಕೊಂಡೆ. ಅದಕ್ಕೋಸ್ಕರ ಪಡಬಾರದ ಕಷ್ಟಕೋಟಲೆಗಳನ್ನೆಲ್ಲ ಅನುಭವಿಸಿ, ಬಿಸಿಲಿನಲ್ಲಿ ಒಣಗಿ, ಮಳೆಯಲ್ಲಿ ನೆನೆದು, ಚಳಿಯಲ್ಲಿ ನಡುಗಿ, ಸರಿಯಾಗಿ ನಿದ್ರೆ ಇಲ್ಲದೆ, ಸಮಯಕ್ಕೆ ಸರಿಯಾಗಿ ಊಟವೂ ಇಲ್ಲದೆ, ಹಣದ ಅಡಚಣೆ, ಸಿಮೆಂಟಿನ ಪರದಾಟ-ಎಲ್ಲಾ ಅನುಭವಿಸಿ ಅಂತೂ ಒಂದು ಮನೆ ಅಂತ ಕಟ್ಟಿ ಮುಗಿಸಿದೆ. ಅದಕ್ಕೆ ಸುಸ್ತಾಗಿತ್ತು. ಮುಖ ತೊಳೆದು, ಕಾಫಿ ಕುಡಿಯುತ್ತಾ, ಯಾವುದೋ ಪುಸ್ತಕ ತಿರುವಿ ಹಾಕುತ್ತಾ ಕುಳಿತಿದ್ದೆ. ಪ್ರದೇಶ ಸಮಾಚಾರ ಕೇಳೋಣವೆಂದು ರೇಡಿಯೊ ಸ್ವಿಚ್ ಹಾಕಿದೆ. ರೇಡಿಯೊ ಬಿತ್ತರಿಸಿತು - ಕೆಟ್ಟ ಸುದ್ದಿಯನ್ನು - "ಶ್ರೀ ರಾಜರತ್ನಂರವರು ಇಂದು ಮಧ್ಯಾಹ್ನ ಹೃದಯಾಘಾತದಿಂದ ನಿಧನ ಹೊಂದಿದರು" ಎಂದು. ಆಘಾತವಾದಂತಾಯಿತು. ನಂಬುವುದೇ ಕಷ್ಟವಾಯಿತು. ನನ್ನ ಹೆಂಡತಿಯನ್ನು ಕರೆದೆ. ಕರೆದು ಹೇಳಿದೆ - "ನೆನ್ನೆ ತಾನೇ ಧರ್ಮಸ್ಥಳದಿಂದ ಸಾಹಿತ್ಯ ಸಮ್ಮೇಳನ ಮುಗಿಸಿಕೊಂಡು ಬಂದರು. ಮೊನ್ನೆ ಅವರ ಭಾಷಣ ಪತ್ರಿಕೆಯಲ್ಲಿ ಓದಿದೆವು. ಈಗ ನೋಡು. ಅವರು ತೀರಿಕೊಂಡರಂತೆ. ನಂಬುವುದಕ್ಕೇ ಆಗುವುದಿಲ್ಲ" ಎಂದು. ಅವಳಿಗೂ ಆಘಾತ. ಹೋಗಿ ನೋಡಿಕೊಂಡು ಬರುತ್ತೇನೆಂದು ತಿಳಿಸಿ ಹೊರಟೆ. ಕೆಳಗಡೆ ಮನೆಯ ಗೆಳೆಯರೊಬ್ಬರು ಜೊತೆ ಗೂಡಿದರು. ನಾವು "ವಿದೇಹ" ತಲುಪಿದಾಗ ೭-೧೫ ಆಗಿತ್ತು. ನಿಶ್ಚಿಂತೆಯಿಂದ ನಿದ್ರಿಸುವಂತೆ ಮಲಗಿದ್ದರು ಶ್ರೀ ರಾಜರತ್ನಂ. ಪಕ್ಕದಲ್ಲಿ ಹೋಗಿ ಸುಮ್ಮನೆ ನಿಂತುಕೊಂಡೆ. ದೀಪ ಉರಿಯುತ್ತಿತ್ತು. ಒಂದು ಹೆಣ್ಣು ಮಗು ಬಿಕ್ಕಳಿಸಿ ಅಳುತ್ತಿತ್ತು. ನೋಡಲು ಬಂದ ಜನಗಳ ಗುಂಪು ಜಾಸ್ತಿ ಆಗುತ್ತಿತ್ತು. ಅಡಿಗರು, ಹಂಪನಾ, ಹೆಚ್.ಕೆ. ರಂಗನಾಥ್, ಹರಿಹರಪ್ರಿಯ, ಪ್ರಸನ್ನ, ಬಾಲು, ವೆಂಕಟೇಶಮೂರ್ತಿ, ಇನ್ನೂ ಯಾರ್‍ಯಾರೋ ಬಂದರು. ಅಂತಿಮ ಗೌರವ ಸಲ್ಲಿಸಿ ಹೋದರು. ನನ್ನ ನೆನಪು ೬೯ಕ್ಕೆ ಹೋಯಿತು. ವಿದ್ಯುತ್ ಬಿಲ್ಲಿನ ಆ ಘಟನೆಯನ್ನು ನೆನಸಿಕೊಂಡೆ. ಮಲ್ಲೇಶ್ವರದ ಆಫೀಸಿನಿಂದ ನನಗೆ ವರ್ಗವಾದ ಮೇಲೆ ಅವರ ದರ್ಶನ ಬಹಳ ಅಪರೂಪವಾಗಿತ್ತು. ಆದರೆ ತಪ್ಪದೆ "ಸುಧಾ"ದಲ್ಲಿ ಮತ್ತು ಆಗಾಗ್ಗೆ ರೇಡಿಯೊದಲ್ಲಿ ಅವರನ್ನು ಓದುತ್ತಿದ್ದೆ-ಕೇಳುತ್ತಿದ್ದೆ. "ರತ್ನನ ಪದಗಳು" ನೆನಪಿಗೆ ಬಂತು. ಅದರ ಕೆಲವು-ನನಗೆ ಇಷ್ಟವಾದ ಸಾಲುಗಳು-ನೆನಪಿಗೆ ಬಂದವು.

"ಸಾವರ್ ಜನಕೆ ಸಾವರ್ ದೇವ್ರು !
ಬಡವೊನ್ ದೇವ್ರು ವೊಟ್ಟೆ !
ದುಡ್ಡಿನ್ ಡಬ್ಬಿ ! ಯೋಳಾದ್ ಕ್ಯೋಳು !
ಸತ್ಕಕ್ ನಾ ಬಾಯ್‌ಕೊಟ್ಟೆ !

* * *

"ಲೋಕಕ್ ಸಾಂತಿ - ಬಡವನ್ ದೇವ್ರು
ಮಲಗಿರೋ ವರಗೂನೆ !
ಬಡವೊನ್ ದೇವ್ರು ಎದ್ ನಿಂತಾಂದ್ರೆ
ಪ್ರಳಯ ಅದಕೇ ತಾನೆ !

* * *

"ನರಕಕ್ಕ್ ಇಳ್ಸಿ ನಾಲ್ಗೆ ಸೀಳ್ಸಿ
ಬಾಯ್ ಒಲಿಸಾಕಿದ್ರೂನೆ -
ಮೂಗ್ನಲ್ ಕನ್ನಡ್ ಪದವಾಡ್ತೀನಿ !
ನನ್ ಮನಸನ್ನ್ ನೀ ಕಾಣೆ !

* * *

ದುಃಖದಿಂದ ಉಸಿರು ದೀರ್ಘವಾಯಿತು. ಕಣ್ಣಲ್ಲಿ ನೀರು ಬರಲಿಲ್ಲ. ಆದರೆ ಹೃದಯ ಅಳುತ್ತಿತ್ತು. ಸಮಯ ೭-೪೫ ಆಗಿತ್ತು. ಕೊನೆಯ ದರ್ಶನಕ್ಕೆ ಬಂದ ಜನರ ಗುಂಪು ಜಾತ್ರೆಯಂತಿತ್ತು. ಇನ್ನೊಮ್ಮೆ ಕಣ್ತುಂಬ ನೋಡಿ, ಭಾರವಾದ ಹೃದಯದಿಂದ ಕಾಲುಗಳನ್ನೆಳೆಯುತ್ತಾ ಹೊರ ಬಂದೆ.

"ಕ್ಷಮಿಸೋಕೆ ಏನಾಗಿದೆ? ಏನೂ ಆಗಿಲ್ಲ. ಬನ್ನಿ ಕಾಫಿ ಕುಡಿಯೋಣ" - "ಎಲೆಕ್ಟ್ರಿಕ್ ಬಿಲ್ ನೀವು ಕಟ್ಟಿದಿರಿ. ಕಾಫಿ ಬಿಲ್ ನಾನು ಕಟ್ಟಿದೆ" - "ನಾನು ಹಾಗೆ ಹೇಳಿದ್ದಕ್ಕೆ ಬೇಜಾರು ಮಾಡ್ಕೋಬೇಡಿ" - ಈ ಮಾತುಗಳು ಆಗ ತಾನೇ ನನ್ನ ಕಿವಿಯಲ್ಲಿ ಹೇಳಿದ ಹಾಗಿತ್ತು. ಆ ಧೀಮಂತ ವ್ಯಕ್ತಿತ್ವಕ್ಕೆ ನಮೋ ಎಂದೆ.

ಅವರು ಕಣ್ಮರೆಯಾಗಿ, ಎಷ್ಟು ವರ್ಷ ಆಗಿದೆ ! ಆದರೆ ಶ್ರೀ ರಾಜರತ್ನಂರವರ ನೆನಪು ಮಾತ್ರ ಸದಾ ಹಸಿರಾಗಿದೆ. ❑

ಶಂಕರ ಮೊಕಾಶಿ - ಪುಣೇಕರ : ಸ್ವೋಪಜ್ಞತೆಗೆ ಸಾಕ್ಷಿ

ಎಸ್.ಜಿ. ಜೈನಾಪೂರ್

ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಕೆಲವೇ ವಿರಳ ಮತ್ತು ಸಂಪನ್ನತೆಯ ವ್ಯಕ್ತಿತ್ವ ಹೊಂದಿರುವ ಹಿರಿಯ ವಿದ್ವಾಂಸ ಸಾಹಿತಿಗಳಲ್ಲಿ ಡಾ॥ ಶಂಕರ ಮೊಕಾಶಿ-ಪುಣೇಕರರು ಪ್ರಮುಖರು. ಅವರ ಸಾಹಿತ್ಯಕ ವ್ಯಕ್ತಿತ್ವ, ಸೃಜನಶೀಲತೆ ಎಂಥವರನ್ನೂ ಮರುಳುಗೊಳಿಸುವಂತಹದು. ಅವರ ಓದಿನ ವಿಸ್ತಾರ, ಆಳ ಮತ್ತು ವೈವಿಧ್ಯತೆ ತುಂಬ ಘನವಾದುದು. ಅವರು ಬಹುಭಾಷಾ ಪರಿಣತರು. ಅವರ ಸಾಹಿತ್ಯಕ ಚಿಂತನ-ಶೀಲತೆಯು ತೀರ ವೈಶಿಷ್ಟಪೂರ್ಣವಾದುದು. ಅವರ ಪ್ರತಿ ಕೃತಿಯಲ್ಲಿಯೂ ಹೊಸತನವನ್ನು, ಪ್ರಯೋಗಶೀಲತೆ ಮತ್ತು ಸ್ವೋಪಜ್ಞತೆಯನ್ನು ನಾವು ಕಾಣುತ್ತೇವೆ. ಅವರ ಕೃತಿಗಳನ್ನು ಆಮೂಲಾಗ್ರವಾಗಿ ಓದಿದ ಪ್ರತಿಯೊಬ್ಬನಿಗೂ ಅವರ ದೈತ್ಯ ಪ್ರತಿಭೆಯ ಅನುಭವವಾಗದೇ ಇರದು. ನಾಡಿನ ಶ್ರೇಷ್ಠ ವಿಮರ್ಶಕರಲ್ಲಿ ಒಬ್ಬರಾದ ಅವರ ಸೃಜನಶೀಲತೆ ವಿಮರ್ಶೆಗೆ ಮಾತ್ರ ಪರಿಮಿತವಾಗದೇ ಕಾವ್ಯ, ಕಾದಂಬರಿ, ಸಂಶೋಧನೆ ಹೀಗೆ ಹಲವು - ಹತ್ತು ಸಾಹಿತ್ಯ ಪ್ರಕಾರಗಳಲ್ಲಿ ಕೆಲಸ ಮಾಡಿದೆ. 'ಗಂಗವ್ವ-ಗಂಗಾಮಾಯಿ' ಬಹು ಶ್ರುತ ಕೃತಿ. ಕಾದಂಬರಿ ಪ್ರಪಂಚದಲ್ಲಿ ಒಂದು ಮೈಲಿಗಲ್ಲು. 'ಮಾಯಿಯ ಮೂರು ಮುಖಗಳು' ಕವನ ಸಂಕಲನ ಅವರ ಕಾವ್ಯ ಸ್ವೋಪಜ್ಞತೆಗ ಸಾಕ್ಷಿ. ಆದರೆ ಈ ಕಿರು ಟಿಪ್ಪಣಿಯು ಅವರ ಇಂಗ್ಲೀಷ-ಕಾವ್ಯಕ್ಕೆ ಮಾತ್ರ ಸೀಮಿತವಾಗಿದೆ. ಕನ್ನಡ ಕೃತಿಗಳನ್ನು ಪರಿಶೀಲಿಸಿಲ್ಲ.

ಅವರ ಇಂಗ್ಲೀಷ್ ಕಾವ್ಯದ ಅಭ್ಯಾಸಿಗಳು ಭಾಷೆಯ ಮೇಲಿನ ಅವರ ಪ್ರಭುತ್ವ ಕಂಡು ಅವರ ಪಾಂಡಿತ್ಯ ಮತ್ತು ಸೃಜನಶೀಲತೆಯಿಂದ ಅತ್ಯಂತ ಪ್ರಭಾವಿತರಾಗುತ್ತಾರೆ. ಸ್ವಾತಂತ್ರ್ಯೋತ್ತರದ ಭಾರತೀಯ ಇಂಗ್ಲೀಷ್ ಕಾವ್ಯ ಮತ್ತು ವಿಮರ್ಶಾರಂಗಗಳಲ್ಲಿ ಕರ್ನಾಟಕದ ದ್ವಿಭಾಷಾ ಸಾಹಿತಿಗಳಲ್ಲಿ ಅವರಿಗೆ ಬಹು ವಿಶಿಷ್ಟವಾದ ಸ್ಥಾನವಿದೆ. ಮನ್ನಣೆ ಇದೆ. ಕನ್ನಡ-ಸಂಸ್ಕೃತ ಭಾಷಾ ವಿಶಾರದರಾದ ಅವರಿಗೆ ಅವು ಇಂಗ್ಲೀಷ್ ಕಾವ್ಯ ನಿರ್ಮಿತಿ ಮತ್ತು ವಿಮರ್ಶೆಗೆ ಬಹಳೇ ಸಿರಿವಂತವಾದ ಹಿನ್ನೆಲೆಯನ್ನು ಒದಗಿಸುತ್ತದೆ. ಅವರ ವಿಮರ್ಶಾ ಪಾಂಡಿತ್ಯ, ಸೂತ್ರಗಳು, ಕೌಶಲ್ಯತೆ ಅವರಿಗೆ ಕನ್ನಡ ವಿಮರ್ಶೆಯ ಕ್ಷೇತ್ರದಲ್ಲಿ ಬಹು ಘನವಾದ ಸ್ಥಾನವನ್ನು ಕಲ್ಪಿಸಿವೆ. ಅವರ ನಿರ್ಭೀತ ಮತ್ತು ಆಳದೃಷ್ಟಿಯ ವಿಮರ್ಶಾ ಪದ್ಧತಿ ಹೊಸ ದಾಖಲೆಗಳನ್ನು ಸೃಷ್ಟಿಸಿದೆ. ಹೊಸ ವೈಚಾರಿಕ ಅಲೆಗಳಿಗೆ ಕಾರಣೀಭೂತವಾಗಿದೆ. ಕಾವ್ಯ-ಭಾಷೆ ಮತ್ತು ಸೃಜನಶೀಲತೆಯ ಬಗೆಗೆ ತಮ್ಮದೇ ಆದ ತಾತ್ವಿಕ ನಿಲುವುಗಳನ್ನು ಅವರು ಪ್ರತಿಪಾದಿಸಿದ್ದಾರೆ. ಸ್ವಾತಂತ್ರ್ಯೋತ್ತರದ ನಂತರ ಇಂಗ್ಲೀಷ್‌ನಲ್ಲಿ ಬರೆಯುವ ಲೇಖಕರು ತಮ್ಮ ಸಾಂಸ್ಕೃತಿಕ ಮತ್ತು ಪ್ರಾದೇಶಿಕ ಸಂಸ್ಕೃತಿಯನ್ನು (Regional Literary Culture) ಮೂಲದ್ರವ್ಯವನ್ನಾಗಿ ಇಟ್ಟುಕೊಂಡೇ ಭಾಷೆಯನ್ನು ಪ್ರಯೋಗಾತ್ಮಕವಾಗಿ ಬೆಳೆಸುತ್ತ ಹೋಗುವುದರಲ್ಲಿಯೇ ನೈಜ ಪ್ರಯೋಗಶೀಲತೆ ಇದೆ ಎಂದು ಗಟ್ಟಿಯಾಗಿ ನಂಬಿ, ನಿರ್ಭೀತಿಯಿಂದ ಪ್ರತಿಪಾದಿಸಿ, ಪರಂಪರಾಗತ ಮೌಲ್ಯಗಳ ಸಾಹಿತಿ-ವಿಮರ್ಶಕರನ್ನು ಎದುರು ಹಾಕಿಕೊಂಡದ್ದೂ ಉಂಟು. ಆದರೆ ತಮ್ಮ ಪ್ರಯೋಗಗಳಲ್ಲಿ ಯಶಸ್ಸು ಆದವರಲ್ಲಿ ಅವರು ಪ್ರಮುಖರು. ಆ ಸಾಹಿತ್ಯಕ-ವಿದ್ವಾನ್ ಎದೆಗಾರಿಕೆ ಪಡೆದವರು ಶ್ರೀಯುತರು ಎಂದು ನಿಸ್ಸಂದೇಹವಾಗಿ ಹೇಳಬಹುದು.

An Epistle to Professor David MeCutchion (1970) ಅವರ ಬಹು ವಿರಳ ಮತ್ತು ವಿಶಿಷ್ಟ ಕೃತಿ. ಸರ್ ಹರ್ಬರ್ಟ್ ರೀಡ್ ಅಂತಹ ಮೇಧಾವೀ ವಿಮರ್ಶಕರ ಮೆಚ್ಚುಗೆಯ ಮುನ್ನುಡಿ ಅವರ ಮೊದಲ ಕೃತಿ The captive (1965)ಗೆ ಇದೆ ಎಂದರೆ ಅವರ ಮನ್ನಣೆಯ ಜಗತ್ತು ಎಷ್ಟು ವಿಶಾಲವಾಗಿದೆ ಎಂಬುದರ ಅರಿವು ಬರುತ್ತದೆ. ಅವರಿಗೆ ತಮ್ಮ ಕವನಗಳ ಇತಿ-ಮಿತಿಗಳ ಸಂಪೂರ್ಣ ಅರಿವು ಇದೆ. ಆದರೆ ಅವು ತಮ್ಮ ಸೃಷ್ಟಿ ಎಂಬ ಅಭಿಮಾನವೂ ಇದೆ. 'My Poems' ಎಂಬ ಕವನದಲ್ಲಿ ತಮ್ಮ ಸೃಜನಶೀಲತೆಯನ್ನು ಕುರಿತು ಅವರು ಉಲ್ಲೇಖಿಸುತ್ತಾರೆ. ಓದುಗನನ್ನು ಕುರಿತು :

How could I send you on the open world
without at least a family name ?

Even the sun who to cold space huried
His splinters, keeps them in the ken of his shame.

ಎಂದು ಕೇಳುತ್ತಾರೆ. ಕವನವೆಂದರೆ ಕಲ್ಪಕತೆ, ಅನುಭವ ಮತ್ತು ಅಭಿವ್ಯಕ್ತಿಯ ಸಮತೂಕದ ಮುಪ್ಪುರಿಗೊಂಡ ಸೃಜನಶೀಲತೆಯ ಪ್ರತೀಕವೆಂದು ಅವರು ನಂಬುತ್ತಾರೆ. ಸಾಹಿತ್ಯಕ ಸಂವೇದನಾಶೀಲ ವ್ಯಕ್ತಿತ್ವದ ವ್ಯಕ್ತಿಗಳಿಗೆ ಸೃಜನಶೀಲತೆ ಅವರಿಗೆ ಇರುವ ಸ್ವಾಭಾವಿಕ ಗುಣಗಳಲ್ಲಿ ಒಂದಾಗಿರುತ್ತದೆ ಎಂದು ಅವರು ಹೇಳುತ್ತಾರೆ. ಕಾವ್ಯ ಸೃಷ್ಟಿಯ ರಹಸ್ಯ ಅವರ 'Birth of a Poem' ಎಂಬ ಕವನದಲ್ಲಿ ಸುಂದರವಾಗಿ ಬಂದಿದೆ. ಕಾವ್ಯ ಸೃಷ್ಟಿ ಕ್ರಿಯೆಯಲ್ಲಿ ಬುದ್ಧಿಯ ಮಹತ್ವದ ಪಾತ್ರವನ್ನು ಗುರುತಿಸುತ್ತಾರೆ.

A mind befogged by images
Must face world of fact,
Though riddled in verbal cages
Keep down its meaning tucked.

ಜೀವನವು ಕಾವ್ಯಕ್ಕೆ ಸದಾ ವಸ್ತುವನ್ನು ಒದಗಿಸಬಲ್ಲ ನಿರಂತರ ತತ್ವ. ಕೆಲಸಲ ಕವಿ ಜೀವನಕ್ಕೆ ಸ್ಪಂದಿಸುತ್ತಾನೆ. ಕೆಲಸಲ ಮೌನವಾಗಿರುತ್ತಾನೆ. (No more to be said) ಕಾವ್ಯ ಸೃಷ್ಟಿಯ ಬಾಹ್ಯ ನಿಯಮಗಳನ್ನು ಮತ್ತು ವಿಮರ್ಶಕರನ್ನು ಕವಿ ಅಲ್ಲಗಳೆಯುತ್ತಾನೆ.

The song is born in heaven before you midwife it
wash and dress in the fashio of your clime
Take care to listen to its heartbeats
heave and sign, un influenced by the street smiths hammer strokes
which it is hard to keep out in this
iron mongering age *(poem)*

ವಿಮರ್ಶಕರು ತನ್ನ ಕಾವ್ಯವನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲ ಎಂಬ ನೋವು, ಕೊರಗು ಕವಿಗೆ ಇದೆ. ವಿಮರ್ಶಕರು ಒಸ್ನೆಲೆ ಅರ್ಥ ಮಾಡಿಕೊಂಡಿಲ್ಲ ("Forget antecedents / And charge me with the guilt soley / And I hang my head in full agreement") (How it comes About) ಕವಿಗೆ ತನ್ನ ಸೃಷ್ಟಿಯ ಸತ್ವದಲ್ಲಿ ಅಪಾರ ನಂಬಿಕೆ ಇರಬೇಕು. ಬಾಹ್ಯ ಮನ್ನಣೆ ಅಥವಾ ಪ್ರತಿಕ್ರಿಯೆಗೆ ತಲೆ ಕೆಡಿಸಿಕೊಳ್ಳಬಾರದು. ಮುದೊಂದು ದಿನ ನಿಶ್ಚಿತವಾಗಿ ಅವನ ಕೃತಿಗೆ ಮನ್ನಣೆ ದೊರತೇ ದೊರೆಯುತ್ತದೆ ಎನ್ನುತ್ತಾನೆ :

But some day
Some future solid man
who dared the ocean, survived
And returned to Illusion with sanctified consent of experience.
May chance to see our ware *(The Regected Race)*

The Pretender (1968) ಕವನ ಸಂಕಲನ ಹೆಚ್ಚು ಪಕ್ವ ಕೃತಿ. ತಮ್ಮ ಕಾವ್ಯದ ಉದ್ದೇಶವನ್ನು ಇಲ್ಲಿ ಹೆಚ್ಚು ಸ್ಪಷ್ಟವಾಗಿ ಉತ್ತರಿಸುತ್ತಾರೆ :

My blood be on my head, critic !
Stab me, if you would, but spill not the gory
Blood on his wise, sad and hoary
Head, already swathed in Beauty's glory.

ಆತ್ಮ ವಿಶ್ಲೇಷಣೆ ಮೊಕಾಶಿಯವರ ಇಂಗ್ಲೀಷ್ ಕಾವ್ಯದ ಇನ್ನೊಂದು ಮುಖ್ಯ ಅಂಶ. ನಡೆದು ಬಂದ ದಾರಿ ಸಾಕಷ್ಟು ದೀರ್ಘವಾಗಿದೆ. ದಣಿವಾಗಿದೆ. ತನ್ನಲ್ಲಿ ಸತ್ಯ ನಿಷ್ಠೆ ಇದೆ. ಆದರೆ ಬೇಕಾದ ವ್ಯವಹಾರ ಕುಶಲತೆ ತನ್ನ ಕೊರತೆಯಾಗಿದೆ. ಹೀಗಾಗಿ 'ಪಂದ್ಯದಲ್ಲಿ ತಡವಾಗಿ ಬಂದಿದ್ದಾರೆ' ಎಂದು ಪರಿಗಣಿಸಲಾಗುತ್ತದೆ. ಇತ್ಯಾದಿಯಾಗಿ 'Ten miles and after' ಎಂಬ ಕವನದಲ್ಲಿ ಅವರು ಬರೆಯುತ್ತಾರೆ. ಅವರು ದೃಢ ತಾತ್ವಿಕ ಸಿದ್ಧಾಂತಕ್ಕೆ ಅಂಟಿದವರು. ತಮ್ಮ ಗಟ್ಟಿಯಾದ ನಂಬಿಕೆಯೇ ಅವರ ಹೆಗ್ಗಳಿಕೆ. ತಮ್ಮ ಸೃಷ್ಟಿಯಿಂದ

ಉಂಟಾಗುವ ವಿಜಯಾನಂದದಲ್ಲಿ ಬೇರೆ ಯಾರೂ ಪಾಲುಗಾರರಾಗದಿದ್ದರೂ ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ತನ್ನ ಏಕಾಂತ ತನಗೆ ಅಪಾರ ಆನಂದವನ್ನು ತರುತ್ತದೆ :

I am creator, let salesmen crowd the cobbles
I must retire to my lonely cell
And seek a lonely triumpu
in my lonely hell *(on a Smile in a shaving class)*

ಅವರು ಕೇವಲ ಬಾಳಿನ ವಿಶ್ಲೇಷಕನಾಗಿ ಗಂಭೀರ ಚಿಂತಕನಾಗಿ ಅಷ್ಟೇ ಕಾಣಿಸಿಕೊಳ್ಳುವುದಿಲ್ಲ. ಅವರ ಹಾಸ್ಯ ಪ್ರಜ್ಞೆಯೂ ಅಷ್ಟೇ ಜಾಗೃತವಾಗಿದೆ. 'ಪೆರಿಮೇಸನ್ ಆಂಡ್ ದೀಪಕ ಫರ್ನಾಂಡೀಸ್' ಎಂಬ ಪ್ರಾಯೋಗಿಕ ಕವನ ಇದಕ್ಕೆ ಸಾಕ್ಷಿ. ವಸ್ತು ಮತ್ತು ರೂಪಗಳನ್ನು ಹದವಾಗಿ ಮೇಳವಿಸಿ ಕಾವ್ಯ ದೃಷ್ಟಿಯನ್ನು ಅಭಿವ್ಯಕ್ತಿಗೊಳಿಸುವ ಯಶಸ್ವೀ ಕವನವಿದು.

An epistle to professor David MeCutchion (1990) ಬಹು ವಿಶಿಷ್ಟ ಮಾದರಿಯ ಕೃತಿ. ಇಂಗ್ಲೀಷ್ ವಿಮರ್ಶಕರೊಬ್ಬರು ತಮ್ಮ ಕಾವ್ಯ ಸೃಷ್ಟಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳದೇ ವಿಮರ್ಶಾದಾಳಿ ನಡೆಸಿದಾಗ ತಮ್ಮನ್ನು ಸಂಪೂರ್ಣವಾಗಿ ಚಾತುರ್ಯದಿಂದ ಸಮರ್ಥಿಸಿಕೊಂಡದ್ದು ಇಲ್ಲಿ ಕಾವ್ಯ ವಸ್ತು. ಆದರೆ ಕಾವ್ಯ ಶೈಲಿ ಅದ್ಭುತವಾಗಿದೆ. ಕವಿಯ ಅಣಕು ವಿನಯ ಗಮನ ಸೆಳೆಯುತ್ತದೆ.

Your spirited essay; so nourshing; so rich in vitamin - concentrates; whole some; Duly peppered with irony and humour.

ಅಲೆಕ್ಸಾಂಡರ್ ಪೋಪ ಕವಿಯ ದ್ವಿಪದಿ ಶೈಲಿಯನ್ನು ಅವರು ಇಲ್ಲಿ ಬಳಸುತ್ತಾರೆ. ಇಂಗ್ಲಿಷ್ ಭಾಷೆ ತಾನು ಜನಿಸಿದ ನಾಡಿನಲ್ಲಿಯೇ ಅವನತಿಯ ದಾರಿಯಲ್ಲಿರುವುದನ್ನು ಸಾಕಷ್ಟು ಉದಾಹರಣೆಗಳಿಂದ ಎತ್ತಿ ತೋರಿಸುತ್ತಾರೆ. ಕಲೆ ಮತ್ತು ವಿಮರ್ಶೆಯ ಬಗೆಗಿನ ತಮ್ಮ ನಿಲುವುಗಳನ್ನು, ವಿಚಾರಗಳನ್ನು ವ್ಯಕ್ತಪಡಿಸುತ್ತಾರೆ. ಶಬ್ದಗಳಿಗಿಂತ ಗಹನವಾದ ಅರ್ಥವ್ಯಾಪ್ತಿಯ ಜೊತೆಗಿರುವ ತಮ್ಮ ನಿಲುವುಗಳನ್ನು ಸ್ವೀಕರಿಸುತ್ತಾರೆ. ಷೇಕ್ಸ್‌ಪಿಯರ್, ಮಿಲ್ಟನ್, ಬ್ರೌನಿಂಗ್ ಮತ್ತು ಕಾರ್ಲಾಯಿಲ್ ಹೇಗೆ ವಾಕ್ಯ ರಚನೆಯ ನಿಯಮದ ಬಗೆಗೆ ಅಷ್ಟು ಕಾಳಜೀ ವಹಿಸುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ಈ ಕೃತಿ ಮೊಕಾಶಿಯವರ ಕಾವ್ಯ ಕಲೆಯ ಕಲ್ಪನೆ ಮತ್ತು ಪ್ರಯೋಗಗಳನ್ನು ಅರಿಯಲು ಸಹಾಯಮಾಡುತ್ತದೆ.

ಮೊಕಾಶಿಯವರು ಶ್ರೇಷ್ಠ ಅನುವಾದಕರಲ್ಲೊಬ್ಬರು. ಭಾರತೀಯ-ಇಂಗ್ಲೀಷ್ ಲೇಖಕರಲ್ಲಿ ಸಹಜವಾಗಿ ಬಂದ ಕಲಾಗುಣ ಅನುವಾದ ಕಲೆ. ಇದಕ್ಕೆ ಶ್ರೀಯುತರು ಹೊರತಾಗಿಲ್ಲ. ಆದರೆ ಅವರು ಮೊದಲು ಆಯ್ಕೆ ಮಾಡಿದ ಕೃತಿ ಕವಿ ಕಾಳಿದಾಸನ ಋತುಸಂಹಾರ. The cycle of seasons (1966) ಎಂಬ ಹೆಸರಿನಲ್ಲಿ ಡಾ॥ ಕೆ.ಎಂ. ಮುನಶಿಯವರ ಮುನ್ನುಡಿಯೊಂದಿಗೆ ಪ್ರಕಟವಾಯ್ತು. ಭಾರತೀಯ ಸಂಸ್ಕೃತಿಯ ಶ್ರೇಷ್ಠ ಪ್ರತಿಪಾದಕರೂ, ವಿದ್ವಾಂಸರೂ ಆದ ಡಾ॥ ಮುನಶಿಯಂತಹವರ ಮುನ್ನುಡಿ ಇದೆ ಎಂದ ಮೇಲೆ ಕೃತಿಯ ಎತ್ತರ ತಾನೇ ಅರ್ಥವಾಗುತ್ತದೆ. ಪ್ರಾರಂಭದಲ್ಲಿಯ ಮೊಕಾಶಿಯವರ ವಿಚಾರಪೂರಿತ, ಪಾಂಡಿತ್ಯಪೂರ್ಣ, ಪರಿಚಯಾತ್ಮಕ ವಿಮರ್ಶಾತ್ಮಕ ಲೇಖನ ಅವರ ವಿಶಿಷ್ಟ ವಿಚಾರಧಾರೆಯನ್ನು ಬಿಂಬಿಸುತ್ತದೆ.

ಇಂಗ್ಲೀಷ್ ಭಾಷೆಯ ಸೂಕ್ಷ್ಮ-ವ್ಯತ್ಯಾಸಗಳಿಗೆ ಸಮರ್ಥವಾಗಿ ಹೊಂದಾಣಿಕೆಯಾಗುವ ಕಾವ್ಯಭಾಷೆಯನ್ನು ಬಳಸಲು ಅವರ ಕವಿ ವ್ಯಕ್ತಿತ್ವದ ಸಿರಿವಂತ, ಪ್ರಗಲ್ಭ ಕಲ್ಪನಾ ವಿನ್ಯಾಸ ಮತ್ತು ಇತರ ಕಾವ್ಯ ಗುಣಗಳು ಅವರಿಗೆ ಪ್ರಯೋಜನಕ್ಕೆ ಬರುತ್ತವೆ. ಉದಾಹರಣೆಗಾಗಿ ಒಂದು ಪದ್ಯ ನೋಡೋಣ :

Nights are cold by the frosts' incessant fall
And colder sill by moonlight's cheerless pall
pale stars divide the sky in patterns weir'd; By night no mind is cheered.

(4, can to V, The winter)

ಕೆಲಸಲ ಹೊಸ ಪದ-ರಚನೆ ಹೆಚ್ಚು ಅರ್ಥಪೂರ್ಣ ಅನುವಾದ ಕೊಡುತ್ತದೆ. ಒಮ್ಮೊಮ್ಮೆ ಅನುವಾದ ಹೊಸ ಸೃಷ್ಟಿ ಎನ್ನುವಷ್ಟು ತೃಪ್ತಿ ಕೊಡುತ್ತದೆ. ಬಹು ಕ್ಲಿಷ್ಟವಾದ, ಸವಾಲೆಸಗುವ ಪದಗಳನ್ನು, ಸಾಲುಗಳನ್ನು, ಸಮರ್ಥವಾಗಿ ಸ್ವೋಪಜ್ಞತೆಯಿಂದ ರೂಪಿಸಿದ್ದಾರೆ. ಅವರ ಕನ್ನಡ ಕಾವ್ಯದ ಬಗೆಗೆ ಇಲ್ಲಿ ಹೆಚ್ಚು ಉಲ್ಲೇಖಿಸಿಲ್ಲ. ಆದರೆ ಅವರ ಕನ್ನಡ ಕವನಗಳು ಅವರ ಆಧುನಿಕತೆ ಮತ್ತು ನಿಯೋ-ಕ್ಲಾಸಿಕಲ್‌ಗಳ ಒಂದು ಸುಂದರ

ಮಿಶ್ರಣ ಎಂದು ಮಾತ್ರ ಹೇಳಲಿಷ್ಟಪಡುತ್ತೇನೆ. ಅವುಗಳಲ್ಲಿ ಕೆಲಕಡೆ ಗ್ರಾಮ್ಯ ಪರಿಸರವೂ ಉಂಟು. ಆದರೆ ಇಂಗ್ಲೀಷ್ ಕಾವ್ಯಕ್ಕೆ ನಗರೀಕರಣದ ಛಾಯೆ ಇದೆ. ಟಾಗೂರ್, ಅರಬಿಂದೋ ಕ್ಲಾಸಿಕಲ್ ಇಂಗ್ಲೀಷ್‌ನಲ್ಲಿ ಕಾವ್ಯ ಸೃಷ್ಟಿಸಿದರು. ಆದರೆ ಶ್ರೀ ಮೊಕಾಶಿ ಅದಕ್ಕಿಂತ ಹೆಚ್ಚು ಶ್ರೇಷ್ಠವಾದ ಕಾರ್ಯವೆಸಗುತ್ತಿದ್ದಾರೆ. "ಅವರು ಇಂಗ್ಲೀಷ್ ಕವನಗಳನ್ನು ಸಮಕಾಲೀನ ಭಾಷಾರೂಪದಲ್ಲಿ ಅದೂ ಪಿಟ್ಸ್ ಮತ್ತು ಎಲಿಯಟ್‌ರಂತೆ ಬಳಸಿದಂತೆ ಬಳಸಿ ರಚಿಸುತ್ತಿದ್ದಾರೆ..... ಶ್ರೀ ಮೊಕಾಶಿಯವರ ಈ ಕೆಲಸ ಇಂಗ್ಲೀಷ್ ಬಳಕೆಯ ವಿಶ್ವದ ಎಲ್ಲ ನಾಡುಗಳಲ್ಲಿಯೂ ಮುಂದೆ ಒಂದು ದಿನ ಗಮನಕ್ಕೆ ಬಂದೇ ಬರುತ್ತದೆ" ಎಂದು ಪ್ರಸಿದ್ಧ ವಿಮರ್ಶಕರಾದ ಹರ್ಬಟ್ ರೀಡ್ ಅವರ ಮಾತುಗಳು ಮೊಕಾಶಿಯವರ ಇಂಗ್ಲೀಷ್ ಸೃಜನಶೀಲತೆಯ ಬಗೆಗಿನ ಶ್ರೇಷ್ಠತೆಗೆ ಸಾಕ್ಷಿಯಾಗಿವೆ. ಒಟ್ಟಿನಲ್ಲಿ ಕನ್ನಡ ಮತ್ತು ಭಾರತೀಯ ಸಂಸ್ಕೃತಿಗಳ ಸಾರವನ್ನು ಸಮೃದ್ಧಿಯಾಗಿ ಹೊಂದಿರುವ ಅವರ ಕಾವ್ಯ, ವಿಮರ್ಶೆ, ಒಟ್ಟು ಸಾಹಿತ್ಯ ಬಹುಕಾಲ ನಿಲ್ಲಬಲ್ಲ ಸತ್ವವನ್ನು ಹೊಂದಿದೆ. ಸ್ವೋಪಜ್ಞತೆ ಅವುಗಳ ಸತ್ವವಾಗಿದೆ ಎಂಬುದು ಅವರ ಸೃಜನಶೀಲತೆಯ ವೈಶಿಷ್ಟ್ಯವಾಗಿದೆ ಎಂದು ಪುನರುಚ್ಚರಿಸಬಯಸುತ್ತೇನೆ.

ವ್ಯಕ್ತಿಯಾಗಿ ಡಾ॥ ಮೊಕಾಶಿ-ಪುಣೇಕರ ಬಹು ಸರಳ-ನೇರ-ಮೃದು ಹೃದಯದ, ಸಂವೇದನಾಶೀಲ ವ್ಯಕ್ತಿತ್ವದವರು, ಸ್ನೇಹಶೀಲರು ಗುಣಗ್ರಾಹಕರು. ಒಂದು ಸಮುದಾಯ, ರಾಜ್ಯ, ರಾಷ್ಟ್ರ ಹೆಮ್ಮೆ ಪಡುವಂತಹ ಧೀಮಂತರು. ಅವರು ಇನ್ನು ಎಷ್ಟೋ ಪ್ರಶಸ್ತಿ-ಗೌರವಗಳಿಗೆ ಭಾಜನ. ಅವರ ಸಾಹಿತ್ಯ ಸೇವೆ ಸ್ಮರಣೀಯ.

❑

ಪ್ರಿಯ ಸೋದರ

ನೀನು (ಆತ್ಮೀಯತೆಯಿಂದ ನಾಪಿಬ್ಬರೂ ಹಿಂದಿನಿಂದ ಸಂಬೋಧಿಸಿಕೊಂಡು ಬಂದಿರುವಂತೆ) ಕಳುಹಿಸುತ್ತಿರುವ 'ಪ್ರಜಾಸಾಹಿತ್ಯ' (ಪುಸ್ತಕಮನೆ) ಆಗಲೇ ಕಾಲಕಾಲಕ್ಕೆ ತಲುಪುತ್ತಿದೆ. ಧನ್ಯವಾದಗಳು.

ಪ್ರೋಜನ್ ಶೋಲ್ಡರ್, ಸ್ಯಾಂಡಿಲೈಟಸ್ ಮೊದಲಾದ ತೊಂದರೆಗಳಿಂದ ಹೆಚ್ಚು ಕುಳಿತು ಬರೆಯಲು, ಓದಲು ಆಗುತ್ತಿಲ್ಲವಾದ್ದರಿಂದ - ನಿನ್ನ ಚಟುವಟಿಕೆಗಳನ್ನು ಗಮನಿಸುತ್ತಿದ್ದರೂ, ಬರೆಯುವ ಮನಸ್ಸಿದ್ದರೂ, ಸ್ವಲ್ಪ ಔದಾಸಿನ್ಯ ಮತ್ತು ಅನಾರೋಗ್ಯಗಳಿಂದ ಬರೆಯಲಿಲ್ಲ. ಕ್ಷಮಿಸು.

'ಪುಸ್ತಕಮನೆ'ಯ ಮೊದಲ ೨-೩ ಸಂಚಿಕೆಗಳನ್ನು ನಾನು ಬೆಂಗಳೂರಿಗೆ 'ಸುರಾನಾ' ಕಾಲೇಜಿನ ಕಾರ್ಯಕ್ರಮವೊಂದಕ್ಕೆ ಬಂದಾಗ ಪ್ರೀತಿಯಿಂದ ನೀನು ಕೊಟ್ಟಿದ್ದೆ. ಚಂದಾದಾರನಾಗಲೂ ಸೂಚಿಸಿದ್ದೆ. ಆಗಬೇಕೆಂದು ಇದ್ದುದು ಹಿಂದೆ ಸರಿಯುತ್ತಲೇ ಹೋಯಿತು. ನಿನ್ನ ೧೩ನೇ ಸಂಚಿಕೆ ಬಂದಾಗ ತತ್‌ಕ್ಷಣ ಚಂದಾ ಕಳುಹಿಸಿದೆ. ಆಗಿಹೋಗಿದ್ದ ತಪ್ಪನ್ನು ತಿದ್ದಿಕೊಂಡೆ.

'ಪುಸ್ತಕಮನೆ' ನಿನ್ನ ವ್ಯಕ್ತಿತ್ವದ ಪ್ರತಿಬಿಂಬ. ನಿರ್ಭಿಡೆಯ ವ್ಯಕ್ತಿತ್ವ ನಿನ್ನದು; ವಜ್ರದೇಹಿ ಎಂದ ಹಾಗೆ ಎಂಥ ಕಷ್ಟಗಳನ್ನು ಎದುರಿಸಿ ನಿಲ್ಲುವ ಛಾತಿ ಛಲ ಧೈರ್ಯ ನಿನ್ನೊಂದಿಗೆ ಹುಟ್ಟಿಕೊಂಡಿದೆ. ಗಟ್ಟಿಗ ಎನ್ನುವುದಕ್ಕೆ ಪರ್ಯಾಯ ಪದ ನೀನೇ. ಪ್ರಾಯ ನಿನ್ನಷ್ಟು ಸಾಹಸಗಳನ್ನು ಮಾಡಿದ, ತಲೆ ಎತ್ತಿ ನಿಂತ 'ಪ್ರಜಾಸಾಹಿತಿ' (ನಾನ್ ಎಕಡಮಿಕ್ ಸಾಹಿತಿ ಎಂಬ ಅರ್ಥದಲ್ಲಿ) ಈಗ ನಮ್ಮ ಮುಂದೆ ಯಾರೂ ಇಲ್ಲ! ನಿನ್ನ ಓದಿನ ಬೀಸು, ತೀಕ್ಷದಷ್ಟೇ ಸೂಕ್ಷ್ಮವಾದ ದೃಷ್ಟಿ, ಅದರೊಳಗೆ ಇರುವ ಒಳನೋಟ ಮತ್ತು ಅಂತಃಕರಣ ಎಲ್ಲ ನಿನಗೆ ನೀವೇ ಸಾಟಿ ಎನ್ನುವಷ್ಟು ! ಈ ಕಾರಣಕ್ಕೇ ಅನೇಕರ ಕೋಪಕ್ಕೆ ನೀನು ಒಳಗಾಗಿದ್ದರೂ ನಿನ್ನ ಕಾಳಜಿಯನ್ನು ಅರ್ಥಮಾಡಿಕೊಂಡರೆ ಯಾರೂ ನಿನ್ನನ್ನು ಅಪಾರ್ಥ ಮಾಡಿಕೊಳ್ಳಲಾರರು.

ಇರಲಿ. ಹೊಗಳಿದೆ ಅಂತ ತಿಳಿದಿಕೋ ಬೇಡ. ನಾನು ನಿನ್ನನ್ನು ಅರ್ಥಮಾಡಿಕೊಂಡ ಪರಿಯನ್ನು ಹೇಳಿದೆ; ಅಷ್ಟೆ. 'ಮನೆಯಂಗಳದಲ್ಲಿ ಮಾತುಕತೆ'ಗೆ ನೀನು ಆಹ್ವಾನಿಸಲ್ಪಟ್ಟದ್ದು ಮತ್ತು ಅದರ ವರದಿ 'ಪ್ರಜಾವಾಣಿ'ಯಲ್ಲಿ ನೋಡಿದೆ. ಹಾಗೇ ಈಟೀವಿಯಲ್ಲೂ ಅದು ಬಂದಿತ್ತು. 'ಪುಸ್ತಕಮನೆ'ಯಲ್ಲಿ ಸಂಪಾದಕೀಯವೂ ಅಲ್ಲದೆ ನೀನೇ ತಿಂಗಳಿಗೊಂದು ಪುಸ್ತಕವನ್ನು 'ನಿನ್ನ ನೆಲೆಯಲ್ಲಿ ನೋಡುವ' ಅಂಕಣವೊಂದನ್ನು ಯಾಕೆ ಪ್ರಾರಂಭಿಸಬಾರದು? ಹಿಂದೆ 'ಪ್ರಜಾಪ್ರಭುತ್ವ' ವಾರಪತ್ರಿಕೆಯಲ್ಲಿ ನೀನು ಅಂಕಣಕಾರನಾಗಿದ್ದಾಗ, ಅಂಥ ಕೆಲಸ ಮಾಡಿದ್ದ ನೆನಪು.

ಹ್ಞ, ಹೇಳಲು ಮರೆತೆ. ನಿನ್ನ 'ಜಾಬಾಲಿ' ನಾಟಕವು ಶ್ರೇಷ್ಠ ನಾಟಕ ರಚನೆ ಎಂದು ಮನ್ನಣೆ ಪಡೆದಿದೆ - ಎಂಬ ಸುದ್ದಿಯೇ ಈ ಪತ್ರ ಬರೆಯಲು ಪ್ರೇರಣೆ. ಅದನ್ನು ಮೊದಲೇ ಹೇಳಿ ಅಭಿನಂದಿಸಬೇಕಿತ್ತು. ಆದರೆ ಕೊನೆಗೆ ಹೇಳುತ್ತಿದ್ದೇನೆ - ಅಭಿನಂದನೆಗಳು, ಅಭಿವಂದನೆಗಳು.

ಪ್ರೀತಿಯಿಂದ,

ನಾ. ಮೊಗಸಾಲೆ

ಕಾಂತಾವರ, ಉಡುಪಿ

ಎಂ.ಎಸ್. ಲಠ್ಠೆ : ಕಾಯಕಯೋಗಿ

ರಾಮಚಂದ್ರ ಗಣಾಪೂರ

ಕಾಯಕ ನಿರತರಾಗಿರುವಾಗಲೇ ಕಣ್ಮರೆಯಾದ ಮಲ್ಲಿಕಾರ್ಜುನ ಲಠ್ಠೆಯವರನ್ನು ಒಮ್ಮೆ ನೋಡಿದ ನೆನಪು. 'ಪುಸ್ತಕಮನೆ' ಹೆಸರು ಕೇಳೀನ್ರೀ. ನನ್ನವು ಅದಾವೇನ್ರಿ ಎಂದರು. ಒಂದೆರಡು ಇವೆ. ಅದರಲ್ಲೂ 'ಮಹಾದೇವಿಯಕ್ಕ ಮತ್ತು ಕಾರಿಕಾಲಮ್ಮೆ' ಎಂಬ ಮಹಾಪ್ರಬಂಧ ಇದೆ. ಒಂದೆರಡು ಬಾರಿ ಓದಿಯೂ ಇದ್ದೇನೆ – ಎಂದೆ.

ಕೊನೀಗೂ ಒಬ್ಬ ಲೇಖಕ ಉಳಿಯೋದು ಒಂದೊ ಎರಡೊ ಬರಹದಿಂದಲೆ ಅಲ್ಲೇನ್ರಿ ಅಂದರು. ಉತ್ತರ ಕರ್ನಾಟಕದ – ಒಡಪುಗಳು, ಒಗಟುಗಳು, ಗಾದೆಗಳು; ಮುಖ್ಯವಾಗಿ – ಹಂತಿಯ ಹಾಡುಗಳನ್ನು ಕನ್ನಡ ಜಾನಪದ ಸಾಹಿತ್ಯ ಲೋಕಕ್ಕೆ ತಂದುಕೊಟ್ಟು, ಗಣನೀಯ ಸೇವೆ ಸಲ್ಲಿದವರು ಲಠ್ಠೆಯವರು. ಮೂಲತಃ ಬೆಳಗಾವಿ ಜಿಲ್ಲೆಯವರಾದರೂ, ಗುಲಬರ್ಗಾವನ್ನೇ ಕಾರ್ಯಕ್ಷೇತ್ರ, ಸಾಧನ ಕ್ಷೇತ್ರ – ವಾಗಿಸಿಕೊಂಡು ದುಡಿದವರು. ಉತ್ತರಕರ್ನಾಟಕದ ಜನಪದ ಕವಿ ಚರಿತೆ – ಲಠ್ಠೆಯವರ ಮಹತ್ವಾಕಾಂಕ್ಷೆಯ ಕೃತಿ. ಮೂರು ಏಕಾಂಕ ನಾಟಕಗಳಂತಹ ಸ್ವತಂತ್ರ ಕೃತಿಗಳಲ್ಲದೆ, ಶರಣರ ಸಾಹಿತ್ಯ ಕುರಿತು ಕೃಷಿ ಮಾಡಿದ್ದರೂ ಹೈದರಾಬಾದ್ ಕರ್ನಾಟಕದಲ್ಲಿ ಕನ್ನಡದ ಹಿರಿಮೆಗಾಗಿ, ಅದರಲ್ಲೂ ಜಾನಪದ ಸಾಹಿತ್ಯದ ಗರಿಮೆಗಾಗಿ ಅಹರ್ನಿಶಿ ದುಡಿದ ವಿದ್ವಾಂಸರು ಲಠ್ಠೆಯವರು. ಅವರ ನೆನಪು ಹೊಸ ಜನಾಂಗಕ್ಕೆ ದಾರಿದೀಪವಾಗಲಿ.

ಸಂಪಾದಕ

ಕನ್ನಡ ಸಾಹಿತ್ಯದ ಗಣಿಗೆ ತಮ್ಮ ಅಮೂಲ್ಯ ಕೃತಿಗಳನ್ನು ಧಾರೆಯೆರೆಯುವ ಮೂಲಕ ಹಾಗೂ ಕನ್ನಡ ಅಧ್ಯಯನ ಸಂಸ್ಥೆಯನ್ನು ಕಟ್ಟುವಲ್ಲಿ ತಮ್ಮದೆ ಆದಂತಹ ಅಚ್ಚಳಿಯದ ಛಾಪು ಮೂಡಿಸಿ, ಕೆಲವೇ ದಿನಗಳ ಹಿಂದೆ ಮರೆಯಾದಂತಹ ಸಾಂಸ್ಕೃತಿಕ ರಾಯಭಾರಿ ಡಾ. ಎಂ.ಎಸ್. ಲಠ್ಠೆಯವರು. ತಮ್ಮ ಬದುಕು ಹಾಗೂ ಬರಹದ ಮೂಲಕ ಸೌಜನ್ಯ ಮತ್ತು ಕಾಯಕನಿಷ್ಠೆಗಳೆರಡೂ ಮೇಳೈಸಿಕೊಂಡ ಶರಣ ತತ್ವದ ಸರಳ ಜೀವಿಗಳು ಡಾ. ಲಠ್ಠೆಯವರು. ಮನುಷ್ಯ ಬರುವದು ಇರುವದು ಮತ್ತು ಹೋಗುವದರ ಮೂರು ದಿನದ ಸಂತೆಯಲ್ಲಿನ ಜೀವನ ವ್ಯಾಪಾರದಲ್ಲಿ ತಮ್ಮ ನಡೆ-ನುಡಿಗಳ ಆದರ್ಶದ ಅಸ್ತಿತ್ವದ ಮೂಲಕ ಜನಮಾನಸದಲ್ಲಿ ನೆಲೆಯೂರುವವರು ಅತಿ ವಿರಳ. ಸರಳ ಜೀವನದ ಉದಾತ್ತ ಚಿಂತನೆಯ ಮೂಲಕ ಡಾ. ಎಂ.ಎಸ್. ಲಠ್ಠೆಯವರು ಅಪಾರ ಜನಪ್ರಿಯತೆಯನ್ನು ಪಡೆದವರು.

ಡಾ. ಎಂ.ಎಸ್. ಲಠ್ಠೆಯವರು ತಮ್ಮ ಜಾನಪದ ಕೃತಿಗಳ ಮೂಲಕ ನನ್ನಂತಹ ಅನೇಕ ಹಳ್ಳಿ ಹುಡುಗರನ್ನು ಅಯಸ್ಕಾಂತದಂತೆ ತಮ್ಮೆಡೆ ಸೆಳೆದವರು. ನಾನು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಎಂ.ಎ. ತರಗತಿಗೆ ಪ್ರವೇಶ ಪಡೆದಾಗ ಡಾ. ಲಠ್ಠೆಯವರು ಸೇವೆಯಿಂದ ನಿವೃತ್ತರಾಗಿ ವಿಶ್ರಾಂತ ಜೀವನದಲ್ಲಿದ್ದರು. ಆದರೆ ಅವರ ಮೇರು ವ್ಯಕ್ತಿತ್ವ ದೂರದಿಂದಲೇ ಕಂಡು ಅವರ ಭಾಷಣಗಳಿಂದ ಪುಲುಕಿತರಾದಂತಹ ಸಂದರ್ಭಗಳುಂಟು. ಅವರ ಜಾನಪದ ಸಂಗ್ರಹದ ಒಗಟು, ಒಡಪು, ಗಾದೆಗಳು ಹಾಗೂ ಜನಪದ ಕಥೆಗಳು ಹಾಗೂ ಸಣ್ಣಾಟಗಳು ಅವಿಸ್ಮರಣೀಯ ಆನಂದ ನೀಡುತ್ತಿದ್ದವು. ಗುಲಬರ್ಗಾ ವಿಶ್ವವಿದ್ಯಾಲಯದ ಹರಿಹರ ಸಭಾಂಗಣದಲ್ಲಿ ಹಾಗೂ ನಗರದಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಡಾ. ಲಠ್ಠೆಯವರ ಪ್ರಶಾಂತಭಾವದ ಮಾತುಗಳನ್ನು ಕೇಳುವ ಅವಕಾಶ ದೊರೆಯಿತು. ಒಬ್ಬ ವ್ಯಕ್ತಿಯ ಬದುಕು ಹಾಗೂ ಬರಹಗಳು ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಅದಕ್ಕಾಗಿಯೇ ಶರಣರು ಮೊದಲು ನಡೆದರು. ನಂತರ ನುಡಿದರು. ಹೀಗಾಗಿ ನಡೆದು ನುಡಿದ ಮಾತು ವಚನವಾಯಿತು. ಶರಣರ ಆತ್ಮಸಾಕ್ಷಿಯ ಭಾವವಂತೆ ಡಾ. ಲಠ್ಠೆಯವರ ನಡೆ-ನಿಲುವು ಸಾತ್ವಿಕ ಸ್ವಭಾವದ ಅಜಾತಶತ್ರುವಾಗಿ ಸದಾ ಕಂಗೊಳಿಸುತ್ತಿದ್ದರು.

ಡಾ. ಲಠ್ಠೆಯವರು ಒಬ್ಬ ಸಂಸ್ಕೃತಿ ಚಿಂತಕ, ಜಾನಪದ ತಜ್ಞ, ವಚನ ಸಾಹಿತಿ, ಸಂಪಾದಕ ಹಾಗೂ

ಸಂಶೋಧಕರೆಂಬ ಒಂದು ಅಕೆಡೆಮಿಕ್ ಮುಖ ಪರಿಚಯಕ್ಕಿಂತಲೂ ಅವರ ಇನ್ನೊಂದು ಸರಳ ಸಜ್ಜನಿಕೆಯ ನಿರಾಡಂಬರವಾದ ಅಪರೂಪದ ವ್ಯಕ್ತಿತ್ವ. ಅವರ ಶಿಸ್ತು, ಸಹನೆ ಹಾಗೂ ಸಮಯ ಪಾಲನೆಯ ಕಾಳಜಿ ಅವರಲ್ಲಿ ಕಾಣುತ್ತಿತ್ತು. ನಮ್ಮಂತಹ ಯುವಕರು ಯಾವುದಾದರೊಂದು ಕಾರ್ಯಕ್ರಮಕ್ಕೆ ಅವರನ್ನು ಆಹ್ವಾನಿಸಿದರೆ ಯಾವುದೇ ಪ್ರತಿಷ್ಠೆಗೆ ಒಳಗಾಗದೆ ಸಂತೋಷದಿಂದ ಒಪ್ಪಿಕೊಳ್ಳುತ್ತಿದ್ದರು. ಕಾರ್ಯಕ್ರಮದ ಸಮಯಕ್ಕೆ ಸರಿಯಾಗಿ ತಾವಾಗಿಯೇ ಆಟೋದಲ್ಲಿ ಬಂದು ಹಾಜರಾದಂತಹ ಉದಾಹರಣೆಗಳನ್ನು ನೋಡಿದ್ದೇವೆ. ಇಂತಹ ಧೀಮಂತ ನಡಾವಳಿಕೆಯ ಶ್ರೀಮಂತ ಮನಸ್ಸು ಅಪರೂಪದ ಕೆಲವರಲ್ಲಿ ಮಾತ್ರ ನೆಲೆಸಿರುತ್ತದೆ.

ಒಬ್ಬ ರೈತನ ಮಗನಾಗಿ ಹೊಲದಲ್ಲಿ ಗಳೇವು ಹೊಡೆಯುವಾಗಿನಿಂದ ಆರಂಭವಾಗಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗುವವರೆಗಿನ ಜೀವನಯಾತ್ರೆಯ ಪ್ರತಿ ಹೆಜ್ಜೆಯನ್ನು, ಹತ್ತಿದ ಸವಾಲಿನ ಮೆಟ್ಟಿಲುಗಳನ್ನು ಪರಿಶುದ್ಧ ಮನಸ್ಸಿನಿಂದ ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ. ಬಾಲ್ಯದಿಂದ ಇಳಿವಯಸ್ಸಿನವರೆಗಿನ ತಮ್ಮ ಒಡನಾಡಿಗಳನ್ನು, ಗುರುಹಿರಿಯರನ್ನು, ಹಳ್ಳಿಯ ಕಲಾವಿದರನ್ನು ತುಂಬಾ ಗೌರವಿಸಿರುವುದು ಕಂಡುಬರುತ್ತದೆ. ಡಾ. ಲಠ್ಠೆಯವರಲ್ಲಿನ ಮನುಷ್ಯ ಪ್ರೀತಿ ಮೆಚ್ಚುವಂತಹದ್ದು. ತಮ್ಮ ನೆರೆಹೊರೆಯ ಜನ, ಬಂಧು-ಆಪ್ತೇಷ್ಟರು, ಹಿತೈಷಿ ಕುಟುಂಬಗಳು ಹೀಗೆ ಅವರ ಹೆಸರುಗಳ ಸಮೇತ ಅವರ ಅಭಿನಂದನಾ ಗ್ರಂಥ 'ಸಂತುಷ್ಟಿ'ಯಲ್ಲಿ ದಾಖಲಿಸಿದನ್ನು ನೋಡಿದಾಗ ಅವರ ಸೌಜನ್ಯಕ್ಕೆ ಬೆಲೆಕಟ್ಟಲು ಸಾಧ್ಯವಾಗದಷ್ಟು ಎತ್ತರದಲ್ಲಿ ನಿಲ್ಲುತ್ತಾರೆ.

ವ್ಯಕ್ತಿ ವಯಸ್ಸಾದಂತೆ ಮಾಗಬೇಕು. ಅಂತಹ ನಡೆನುಡಿಗಳಿಂದ ಸೆಳೆಯುವ ಆದರ್ಶ ವ್ಯಕ್ತಿತ್ವ ಎಂಬುದಕ್ಕೆ ಅವರ ಜನಪ್ರಿಯತೆ ಹಾಗೂ ಡಾ. ಲಠ್ಠೆಯವರಿಗೆ ಹುಡುಕಿಕೊಂಡು ಬಂದಂತಹ ಸ್ಥಾನಮಾನ, ಪ್ರಶಸ್ತಿ ಸನ್ಮಾನಗಳೇ ಜೀವಂತ ಸಾಕ್ಷಿಗಳಾಗಿವೆ.

ಡಾ. ಎಂ.ಎಸ್. ಲಠ್ಠೆಯವರದು ಅಪ್ಪಟ ಜಾನಪದ ಪ್ರತಿಭೆ. ಅದಕ್ಕೆ ಅವರ ಸಂಗ್ರಹ, ಸಂಪಾದನೆ ಕೃತಿಗಳ ದೀರ್ಘವಾದ ಹತ್ತಾರು ಕೃತಿಗಳ ಪಟ್ಟಿಯೇ ಕಣ್ಮುಂದೆ ನಿಲ್ಲುತ್ತದೆ. ಜಾನಪದವಲ್ಲದೆ ವಚನಸಾಹಿತ್ಯ, ತತ್ವಪದ ಸಾಹಿತ್ಯ, ನಾಟಕ, ವ್ಯಕ್ತಿಚಿತ್ರಣ, ಸಂಶೋಧನೆಯಂತಹ ಅಮೂಲ್ಯ ಕೃತಿಗಳನ್ನು ನೀಡುವುದರ ಮುಖಾಂತರ ಸಾಹಿತ್ಯದ ಗಣಿಯನ್ನು ಶ್ರೀಮಂತಗೊಳಿಸಿದ್ದಾರೆ.

ಅಂತಿಮವಾಗಿ 'ಶರಣರ ಜೀವನವು ಮರಣದಲಿ ನೋಡು' ಎಂಬಂತೆ ಕಾಯಕನಿಷ್ಠೆಯನ್ನು ತಮ್ಮ ಜೀವನದಾದ್ಯಂತ ರೂಢಿಸಿಕೊಂಡು ಬಂದಂತಹವರು ಡಾ. ಲಠ್ಠೆಯವರು. ಕನ್ನಡ ಅಧ್ಯಯನ ಸಂಸ್ಥೆಯ ಹರಿಹರ ಸಭಾಂಗಣದಲ್ಲಿ ದಿನಾಂಕ ೧೯-೧೧-೦೭ರಂದು ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ವತಿಯಿಂದ ಹಮ್ಮಿಕೊಂಡ 'ಗೊಂದಲಿಗರು ಮತ್ತು ಜಾಗತೀಕರಣ' ಎಂಬ ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು. ತಾವು ಉಸಿರಾಡಿದ ಜಾನಪದದ ವಿಚಾರ ಸಂಕಿರಣದ ಉದ್ಘಾಟನಾ ಸಮಾರಂಭದಲ್ಲಿ ಸಂತೋಷದಿಂದ ಪಾಲ್ಗೊಂಡು ನಂತರ ಗೋಷ್ಠಿಯ ಅಧ್ಯಕ್ಷ ಸ್ಥಾನದಲ್ಲಿರುವಾಗಲೇ ಅವರು ಅಸ್ತಂಗತರಾದರು. ಅವರು ಸೇವೆ ಸಲ್ಲಿಸಿದ ಸಂಸ್ಥೆಯಲ್ಲಿಯೇ ತಮ್ಮ ಕೊನೆಯ ಕ್ಷಣಗಳನ್ನು ಕಳೆದದ್ದು ಕಾಯಕನಿಷ್ಠೆಗೆ ಸಾಕ್ಷಿಯಿದ್ದಂತೆ ಕಾಣುತ್ತಿತ್ತು. ಇಂತಹ ಕಾಯಕಯೋಗಿಯ ಅಚ್ಚಳಿಯದ ಹೆಜ್ಜೆಗಳು, ಅವರ ಸಾಧನೆಗಳು ಕಂಡಾಗಲೆಲ್ಲ ಡಾ. ಮಲ್ಲಿಕಾರ್ಜುನ ಶಿವಪ್ಪ ಲಠ್ಠೆಯವರ ಸಾತ್ವಿಕ ರೂಪದರ್ಶನ ನೀಡುತ್ತದೆ. ವ್ಯಕ್ತಿ ನೆಪ ಮಾತ್ರ, ಅವರ ನೆನಪು ಶಾಶ್ವತ. □

ತಮ್ಮ ಸಂಪಾದಕತ್ವದ 'ಪ್ರಜಾಸಾಹಿತ್ಯ' (ಪುಸ್ತಕಮನೆ) ಪುಸ್ತಿಕೆ (ಸೆಪ್ಟಂಬರ್ ೨೦೦೭)ಯ ಪ್ರತಿಯೊಂದನ್ನು ಗೆಳೆಯರಾದ ಡಾ. ರಾಮಚಂದ್ರ ದೇವ ಇವರು ನನಗೆ ಕೆಲವು ದಿನಗಳ ಹಿಂದೆ ಕಳಿಸಿಕೊಟ್ಟಿದ್ದರು. ಸತತ ತಿರುಗಾಟವಿತ್ತು. ನಿನ್ನೆಯಷ್ಟೆ ಅದನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಯಿತು. ತುಂಬಾ ಇಷ್ಟವಾಯಿತು.

ಹಿಂದೆ ಪ್ರಕಟಗೊಂಡ ಎಲ್ಲಾ ಪುಸ್ತಿಕೆಗಳ ಒಂದೊಂದು ಪ್ರತಿಯನ್ನೂ ಮುಂದಿನ ಹನ್ನೊಂದು ತಿಂಗಳಲ್ಲಿ ಪ್ರಕಟಗೊಳ್ಳುವ ಪುಸ್ತಿಕೆಗಳ ಪ್ರತಿಯನ್ನೂ ಮೇಲಿನ ನನ್ನ ವಿಳಾಸಕ್ಕೆ ಕಳಿಸಿಕೊಡಬೇಕೆಂದು ಕೋರುತ್ತೇನೆ. ಈ ಪತ್ರದೊಂದಿಗೆ ರೂ. ೫೦೦/-ರ ಬ್ಯಾಂಕ್ ಡಿ.ಡಿ.ಯನ್ನು ಇರಿಸಿದ್ದೇನೆ.

ಶುಭ ಹಾರೈಕೆಗಳೊಂದಿಗೆ

ವಿಜಯನಾಥ ಶೆಣೈ

ಮಣಿಪಾಲ

೮

ಅಕ್ಷರ ಪ್ರಕಾಶನ, ನೀನಾಸಂ ಮತ್ತು ಕೆ.ವಿ. ಸುಬ್ಬಣ್ಣ

ಎಲ್.ಸಿ. ಸುಮಿತ್ರಾ

ಅಕ್ಷರ ಪ್ರಕಾಶನ, ನೀನಾಸಂ ಮತ್ತು ಕೆ.ವಿ. ಸುಬ್ಬಣ್ಣ ಒಟ್ಟಿಗೇ ನೆನಪಾಗುವ ಹೆಸರುಗಳು. ಕೆ.ವಿ. ಸುಬ್ಬಣ್ಣನವರು ೧೯೫೬ ರಲ್ಲಿ ಪ್ರಾರಂಭಿಸಿ ಬೆಳೆಸಿದ ಅಕ್ಷರ ಪ್ರಕಾಶನಕ್ಕೀಗ ೫೦ ವರ್ಷ. ನೀನಾಸಂನ್ನು ಕಟ್ಟಿ ಬೆಳೆಸಿದ ಸುಬ್ಬಣ್ಣನವರು ಅಕ್ಷರ ಪ್ರಕಾಶನ ಮತ್ತು ನೀನಾಸಂಗಳನ್ನು ಪರಸ್ಪರ ಪೂರಕ ಸಂಸ್ಥೆಗಳಾಗಿ ಬೆಳೆಸಿದರು. ಅಕ್ಷರ ಪ್ರಕಾಶನ ತನ್ನ ಪುಸ್ತಕಗಳ ವಿಶಿಷ್ಟತೆಗಾಗಿ, ತಾನು ಪ್ರತಿಪಾದಿಸುವ ಮೌಲ್ಯಗಳಿಗಾಗಿ ಕನ್ನಡ ಪ್ರಕಾಶನ ಕ್ಷೇತ್ರದಲ್ಲಿ ಗಮನಾರ್ಹ ಹೆಸರಾಗಿದೆ. ಅಕ್ಷರ ಪ್ರಕಾಶನ ಕನ್ನಡ ಪುಸ್ತಕ ಪ್ರಕಟಣೆಯಲ್ಲಿ ಮಹತ್ತರ ಬದಲಾವಣೆ ತಂದಿತು. ಅಭಿರುಚಿಯನ್ನು ಬೆಳೆಸುವುದರ ಜೊತೆಗೆ ಹೊಸ ಚಿಂತನ ಮಾರ್ಗವನ್ನು ಹುಟ್ಟುಹಾಕಿತು. ಅಕ್ಷರ ಪ್ರಕಾಶನ ಪ್ರಾರಂಭಿಸುವ ಮೊದಲೇ ಮೈಸೂರಿನಲ್ಲಿ ಓದುತ್ತಿರುವಾಗಲೇ ಸುಬ್ಬಣ್ಣ ಹಾಮಾನಾ ಜೊತೆ ಎಸ್.ವಿ. ರಂಗಣ್ಣ ಅಭಿನಂದನ ಗ್ರಂಥ 'ಬಾಗಿನ' ಸಂಪಾದಿಸಿ ಪ್ರಕಟಿಸಿ ತಮ್ಮ ಆಸಕ್ತಿಯ ಕ್ಷೇತ್ರವನ್ನು ಗುರುತಿಸಿಕೊಂಡಿದ್ದರು. ನೀನಾಸಂ, ರೂಪುಗೊಂಡಾಗ ನಾಟಕ ಪ್ರಯೋಗದ ಅಗತ್ಯಕ್ಕೆ ಅನುಗುಣವಾಗಿ 'ಕೈಲಾಸಂದರ್ಶನ' ಪ್ರಕಟಿಸಿದರು. ಗಾಂಧೀಜಿಯವರ ವಿಚಾರಗಳನ್ನು ಕುರಿತ 'ಗಾಂಧಿಸ್ತವನ' ಪ್ರಕಟವಾಯಿತು. ಮುಂದೆ ತಮ್ಮ ಪುಸ್ತಕಗಳನ್ನು ಪ್ರಕಟಿಸಲು ಅಕ್ಷರ ಪ್ರಕಾಶನ ಪ್ರಾರಂಭಿಸಿದರು. ತಮ್ಮ ಸ್ನೇಹಿತರ ಪುಸ್ತಕಗಳನ್ನೂ ಪ್ರಕಟಿಸಿದರು. ಸುಬ್ಬಣ್ಣ 'ಪುಸ್ತಕ ಪ್ರಕಟಣೆ' ತಮ್ಮ ಸಾಮಾಜಿಕ ಸಂಬಂಧಗಳ ವಿಸ್ತರಣೆ ಎಂದು ಹೇಳುತ್ತಿದ್ದರು.

ಸುಬ್ಬಣ್ಣ ದೊಡ್ಡ ವಿದ್ವಾಂಸರೂ ಆದುದರಿಂದ 'ದಶರೂಪಕ'ದ ಕನ್ನಡ ಅನುವಾದ, 'ರಂಗದಲ್ಲಿ ಅಂತರಂಗ' ಇತ್ಯಾದಿ ಬೃಹತ್ ಕೃತಿಗಳನ್ನು ತಾವೇ ಪ್ರಕಟಿಸುವ ಅನಿವಾರ್ಯತೆಯಿತ್ತು. ಶ್ರೇಷ್ಠತೆಯ ವ್ಯಸನವಿಲ್ಲದ ಸುಬ್ಬಣ್ಣ ಅಕ್ಷರ ಪ್ರಕಾಶನದಲ್ಲಿ ಪ್ರಕಟಿಸುವ ಪುಸ್ತಕಗಳನ್ನು ಆಯ್ಕೆ ಮಾಡಲು ಸಲಹಾ ಮಂಡಳಿಯನ್ನು ಇಟ್ಟುಕೊಳ್ಳಲಿಲ್ಲ. ಆದರೆ ಒಂದು ಸಂಸ್ಥೆಯಂತೆ ಅಕ್ಷರ ಪ್ರಕಾಶನ ವ್ಯವಸ್ಥಿತವಾಗಿ ಕಳೆದ ಐವತ್ತು ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ಓದುಗರ ಅಭಿರುಚಿಯನ್ನು ಬೆಳೆಸುವ ಪ್ರಜ್ಞೆಯನ್ನು ಮೊನಚುಗೊಳಿಸುವ ಕೆಲಸ ಮಾಡುತ್ತಿದೆ. ವಿಶ್ವಾತ್ಮಕತೆಯನ್ನೂ ಸ್ಥಳೀಯತೆಯನ್ನೂ ಏಕತ್ರಗೊಳಿಸುವ ಕೆಲಸವನ್ನು ಅಕ್ಷರ ಪ್ರಕಾಶನ ಮಾಡಿದೆ. ಗೋಪಾಲಕೃಷ್ಣ ಅಡಿಗರ ಸಂಪಾದಕತ್ವದಲ್ಲಿ ಹೊಸ ಸಂವೇದನೆಯನ್ನುಳ್ಳ 'ಸಾಕ್ಷಿ' ಎಂಬ ಪತ್ರಿಕೆ ಅಕ್ಷರ ಪ್ರಕಾಶನದಿಂದ ಪ್ರಕಟವಾಗುತ್ತಿತ್ತು.

ಸುಬ್ಬಣ್ಣನವರು 'ಅಕ್ಷರ' ಎಂದು ತಮ್ಮ ಪ್ರಕಾಶನಕ್ಕೆ ಹೆಸರಿಟ್ಟಿರುವುದೇ ಅವರ ಸೃಜನಶೀಲತೆ, ಚಿಂತನಶೀಲ ಮನಸ್ಸಿನ ನಿದರ್ಶನ. ಅಕ್ಷರ ಪ್ರಕಾಶನದ ಪುಸ್ತಕಗಳು ಹೆಗ್ಗೋಡಿನಲ್ಲಿದ್ದ 'ಅಚ್ಚುಮೆಚ್ಚು' ಹೆಸರಿನ ಮುದ್ರಣಾಲಯದಲ್ಲಿ ಪ್ರಕಟವಾಗುತ್ತಿದ್ದವು. ನೀನಾಸಂ ರೆಪರ್ಟರಿಯನ್ನು 'ತಿರುಗಾಟ' ಎಂದು ಕರೆದರು. ನೀನಾಸಂನಿಂದ ಪ್ರಕಟವಾಗುವ ತ್ರೈಮಾಸಿಕ ಪತ್ರಿಕೆ 'ಮಾತುಕತೆ'. ವಿಶ್ವಾತ್ಮಕತೆ ಮತ್ತು ಸ್ಥಳೀಯತೆಗಳನ್ನು ಏಕತ್ರಗೊಳಿಸುವಲ್ಲಿನ ಸುಬ್ಬಣ್ಣನವರ ಆಸಕ್ತಿ ಹೆಗ್ಗೋಡಿನಂತಹ ಪುಟ್ಟ ಹಳ್ಳಿಯಲ್ಲಿ, ಅಕ್ಷರ ಪ್ರಕಾಶನದಂತಹ ಸಂಸ್ಥೆ ಸ್ಥಾಪಿತವಾಗಲು ಕಾರಣವಾಯಿತು.

ಈಗ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅಬ್ಬರದಿಂದ ನಡೆಯುತ್ತಿರುವ 'ಸಂಸ್ಕೃತಿ ಚಿಂತನೆ' ಯನ್ನು ಸುಬ್ಬಣ್ಣನವರು ಮೂರು ದಶಕಗಳ ಹಿಂದೆಯೇ ತಮ್ಮ ಅಕ್ಷರ ಪ್ರಕಾಶನದ ಪುಸ್ತಕಗಳ ಮೂಲಕ ಪ್ರಾರಂಭಿಸಿದರು.

ಸುಬ್ಬಣ್ಣನವರ ಗೆಳೆಯರ ಬಳಗದಲ್ಲಿ ನವ್ಯ ಸಾಹಿತ್ಯ ಚಳುವಳಿಯಲ್ಲಿ ಸಕ್ರಿಯರಾಗಿದ್ದುದರಿಂದ ನವ್ಯದ ಮುಖ್ಯ ಕೃತಿಗಳು ಅಕ್ಷರ ಪ್ರಕಾಶನದಿಂದ ಪ್ರಕಟವಾದವು.

ಮೊದಲ ಹಂತದಲ್ಲಿ ಪಿ. ಲಂಕೇಶ್, ಯು.ಆರ್. ಅನಂತಮೂರ್ತಿ, ಗಿರೀಶ್ ಕಾರ್ನಾಡ್, ಗೋಪಾಲಕೃಷ್ಣ

ಅಡಿಗ ಮೊದಲಾದವರ ಕೃತಿಗಳು ಪ್ರಕಟವಾದವು. ಹೊಸ ಚಿಂತನೆ ಹರಿದು ಬಂದಿತು. ಚಂದ್ರಶೇಖರ ಕಂಬಾರರ ಎಲ್ಲ ಕೃತಿಗಳು ಅಕ್ಷರದಿಂದ ಬೆಳಕು ಕಂಡವು.

ಲಂಕೇಶ್ ಅವರು ಸಂಪಾದಿಸಿದ 'ಅಕ್ಷರ ಹೊಸ ಕಾವ್ಯ' ವನ್ನು ಪ್ರಕಟಿಸಿದ ಅಕ್ಷರ ಪ್ರಕಾಶನ ದೊಡ್ಡ ಪ್ರಮಾಣದಲ್ಲಿ ನವ್ಯ ಚಳುವಳಿಯಲ್ಲಿ ಭಾಗವಹಿಸಿತು. ಆದರೆ ಸ್ವತಃ ಸುಬ್ಬಣ್ಣ ನವ್ಯದ ಧಾಟಿಯಲ್ಲಿ ಬರೆಯಲಿಲ್ಲ.

'ಫಿಲ್ಮ್ ಅಪ್ರೀಸಿಯೇಶನ್ ಕೋರ್ಸ್' ಚಲನಚಿತ್ರ ರಸಗ್ರಹಣ ಶಿಬಿರವನ್ನು ೧೯೮೦ ರಲ್ಲಿ ಹೆಗ್ಗೋಡಿನಲ್ಲಿ ಪ್ರಾರಂಭಿಸಿದ ನಂತರ ಅದಕ್ಕೆ ಅಗತ್ಯವಾದ ಸಿನೆಮಾಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಪ್ರಕಟಿಸಿದರು. ಅವುಗಳೆಂದರೆ 'ಅಭಿವೃದ್ಧಿಗಾಗಿ ಸಿನೆಮಾ', 'ನಾಟಕ ಮತ್ತು ಸಿನೆಮಾ', 'ನನ್ನ ಪ್ರೀತಿಯ ಹಿರೋಷಿಮಾ', 'ರಶೋಮನ್ ಅವಲೋಕನ', 'ಸಿನೆಮಾದ ದೂರಚಿತ್ರ ಸಮೀಪಚಿತ್ರ' ಮುಂತಾದ ಅಪರೂಪದ ಪುಸ್ತಕಗಳು.

ನೀನಾಸಂ ರಂಗಶಿಕ್ಷಣ ಪ್ರಾರಂಭವಾದಾಗ ನಾಟಕ ಮತ್ತು ರಂಗಭೂಮಿ ಕುರಿತ ಪುಸ್ತಕಗಳು ಪ್ರಕಟವಾದವು

ಗ್ರೊಟೋವ್ಸ್ಕಿಯವರ ಪುಸ್ತಕದ ಅನುವಾದ – ರಿಕ್ತ ರಂಗಭೂಮಿ, ಶ್ರೀರಂಗರು ಅನುವಾದಿಸಿದ ಭರತನ 'ನಾಟ್ಯಶಾಸ್ತ್ರ' ಮತ್ತು ಸುಬ್ಬಣ್ಣ ಅನುವಾದಿಸಿದ 'ರಂಗದಲ್ಲಿ ಅಂತರಂಗ' ಮತ್ತು ಗಿರಡ್ಡಿಯವರ 'ನಾಟಕ ರಂಗಭೂಮಿ' ಮುಂತಾದವು ಆ ಮಾಲಿಕೆಯಲ್ಲಿ ಸೇರಿವೆ.

ಪರಿಸರ ಚಳುವಳಿಗೆ ಸಂಬಂಧಿಸಿದಂತೆಯೂ ಅಕ್ಷರ ಪ್ರಕಾಶನ ಹಲವು ಪುಸ್ತಕಗಳನ್ನು ಪ್ರಕಟಿಸಿದೆ.

೧) ಶಿವರಾಮ ಕಾರಂತರ ಭಾರತ ಪರಿಸರ ಸಮೀಕ್ಷೆ

೨) ನಾಗೇಶ ಹೆಗಡೆಯವರ – ನಮ್ಮ ಪರಿಸರ

೩) ರಾಮಚಂದ್ರಗುಹಾ ಅವರ – ಜಾಗತಿಕ ಪರಿಸರದ ಚರಿತ್ರೆ

ಹೀಗೆ ಕೆಲವು ವಿಶ್ವಮಟ್ಟದ ಪರಿಸರ ಚಿಂತನೆಯುಳ್ಳ ಪುಸ್ತಕಗಳನ್ನು ಅಕ್ಷರ ಪ್ರಕಾಶನ ಕನ್ನಡದಲ್ಲಿ ಮೊದಲ ಬಾರಿಗೆ ಪ್ರಕಟಿಸಿದೆ.

೯೦ರ ದಶಕದಿಂದ 'ಸಂಸ್ಕೃತಿ ಶಿಬಿರ' ದ ಹೆಸರಿನಲ್ಲಿ ಕಲೆ, ಸಂಗೀತ, ಸಾಹಿತ್ಯ, ನಾಟಕ, ಸಿನೆಮಾ ಕುರಿತ ಪ್ರದರ್ಶನ, ಗೋಷ್ಠಿ, ಚರ್ಚೆಗಳು ನಡೆಯಲು ಪ್ರಾರಂಭವಾದ ಮೇಲೆ ಅಕ್ಷರ ಚಿಂತನ ಮಾಲಿಕೆಯಲ್ಲಿ, ವಿಸ್ಮೃತಿಗೆ ಒಳಗಾದ ಸಂಗತಿಗಳ ಕುರಿತು ಗಂಭೀರ ಚಿಂತನೆಯುಳ್ಳ ಪುಸ್ತಕಗಳು ಪ್ರಕಟವಾದವು. ಅವುಗಳು – ಶೆಲ್ಡನ್ ಪೊಲಾಕ್‌ರ ಕೃತಿಯ ಅನುವಾದ ವಿಶ್ವಾತ್ಮಕ ದೇಶಭಾಷೆ, (ಅನು ಕೆ.ವಿ. ಅಕ್ಷರ), ಅಭಿನವ ಗುಪ್ತ, ದಾವ್‌ದ ಜಿಂಗ್, ಆನಂದ ಕುಮಾರ ಸ್ವಾಮಿ, ಭರ್ತೃಹರಿಯ ವಾಕ್ಯಪದೀಯ ಕೃತಿಯ ಅನುವಾದ, ಆಶೀಶ್ ನಂದಿ ವಿಚಾರ, ರಾಮಚಂದ್ರಗುಹಾರ ಜಾಗತಿಕ ಪರಿಸರ ಚರಿತ್ರೆ ಹೀಗೆ ಗಂಭೀರ ಚಿಂತನೆಯ ಪುಸ್ತಕಗಳನ್ನು ಪ್ರಕಟಿಸುವುದರ ಜೊತೆಗೆ ಹೊಸ ಲೇಖಕರ ಪುಸ್ತಕಗಳನ್ನೂ ಅಕ್ಷರ ಪ್ರಕಾಶನ ಉತ್ಸಾಹದಿಂದ ಪ್ರಕಟಿಸಿದೆ. ಹಾಗೆಯೇ ಲೇಖಕರ ಮೊದಲ ಪುಸ್ತಕಗಳು, ಕವನ ಸಂಕಲನಗಳು ಬೇರೆ ಪ್ರಕಾಶಕರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕಟಿಸಿದೆ. ಇವುಗಳಲ್ಲಿ ವಿಮರ್ಶೆಯ ಪುಸ್ತಕಗಳ ಸಂಖ್ಯೆ ಜಾಸ್ತಿ.

ನವ್ಯೋತ್ತರ ಸಾಹಿತ್ಯ ಚಿಂತನೆಗೂ ಅಕ್ಷರ ಪ್ರಕಾಶನ ಪ್ರೇರಣೆ ನೀಡಿತು. ಬಹುತ್ವ ಮತ್ತು ಬಹುಸ್ತರದ ಚಿಂತನೆಯುಳ್ಳ ಪುಸ್ತಕಗಳನ್ನು ಪ್ರಕಟಿಸಿತು.

ಸುಬ್ಬಣ್ಣನವರು ಅನುವಾದಕರೂ ಆಗಿ ಲೋಹಿಯಾ, ಗಾಂಧಿ, ರೆಘನ್ ವಿಚಾರಗಳನ್ನು ಕನ್ನಡಕ್ಕೆ ತಂದಿದ್ದಾರೆ.

ಭಾಸ್ಕರ ಚಂದಾವರ್ಕರ್ ಅವರ 'ಸಂಗೀತ ಸಂವಾದ' ಅಪರೂಪದ ಪುಸ್ತಕಗಳಲ್ಲಿ ಒಂದು. ಸಂಗೀತವನ್ನು ಆಸ್ವಾದಿಸುವ, ರಸಗ್ರಹಣ ಮಾಡುವ ಸಂಗೀತ ಮೀಮಾಂಸೆಯ ಪುಸ್ತಕ ಇದು. ಭಾಸ್ಕರ ಚಂದಾವರ್ಕರ್ ಪ್ರಕಾರ ಭಾರತದ ಭಾಷೆಗಳಲ್ಲಿ, ಸಂಗೀತ ರಸಗ್ರಹಣ ಕುರಿತ ಇಷ್ಟು ವಿಸ್ತಾರವಾದ ಬರವಣಿಗೆ ಇದೇ ಮೊದಲನೆಯದು.

ಅಕ್ಷರ ಪ್ರಕಾಶನಕ್ಕೆ ೫೦ ವರ್ಷವಾದ ಸಂದರ್ಭದಲ್ಲಿ ಕೆ.ವಿ. ಸುಬ್ಬಣ್ಣ ನೆನಪಿನ 'ಹೊಸಾ ಓದು' ಪುಸ್ತಕ ಮಾಲೆಯಲ್ಲಿ ೨೫ ಪುಸ್ತಕಗಳು ೨೦೦೭ ರಲ್ಲಿ ಪ್ರಕಟವಾಗಿವೆ.

ಕನ್ನಡ ಸಾಹಿತ್ಯವನ್ನು ಪ್ರವೇಶಿಸಬಯಸುವ ಹೊಸ ಓದುಗರಿಗೆ ಕನ್ನಡದ ಪ್ರಮುಖ ಲೇಖಕರ ಆಯ್ದ ಬರಹಗಳು ಈ ಮಾಲಿಕೆಯಲ್ಲಿ ಪಂಪನಿಂದ ಕುವೆಂಪುವರೆಗೆ. ಇಲ್ಲಿ ಪಿ. ಲಂಕೇಶ್. ಅನಂತಮೂರ್ತಿ. ವೈದೇಹಿ. ತೇಜಸ್ವಿ ಅವರ ಆಯ್ದ ಕಥೆಗಳು ಅಡಿಗ. ರಾಮಾನುಜನ್‌ರ ಕವಿತೆಗಳು ಹೀಗೆ ಸದಭಿರುಚಿಯ ಓದಿಗೆ ನಿಲುಕುವ ಪುಸ್ತಕಗಳಿವೆ.

ಒಂದು ರೀತಿಯಲ್ಲಿ ಇದು ಪಂಪನಿಂದ – ದೇವನೂರುವರೆಗಿನ ಒಂದು ಸಾವಿರ ವರ್ಷದ ಕನ್ನಡ ಸಾಹಿತ್ಯ ಚರಿತ್ರೆಯನ್ನು ೨೫೦೦ ಪುಟಗಳಲ್ಲಿ ಕಟ್ಟಿಕೊಡುವ ಪ್ರಯತ್ನವಾಗಿದೆ.

ಗ್ರಾಮೀಣ ರಂಗ ಚಟುವಟಿಕೆ. ನೀನಾಸಂ. ಅಕ್ಷರ ಪ್ರಕಾಶನ ಒಂದಕ್ಕೊಂದು ಪೂರಕವಾಗಿ ಸುಬ್ಬಣ್ಣನವರ ವ್ಯಕ್ತಿತ್ವದ ಭಾಗಗಳಾಗಿ ಬೆಳೆದಿವೆ. ಮನೋಹರ ಗ್ರಂಥ ಮಾಲೆಯ ಸ್ಥಾಪಕ ಜಿ.ಬಿ. ಜೋಷಿಯವರು ಸುಬ್ಬಣ್ಣನವರಿಗೆ ಪ್ರೇರಣೆ ನೀಡಿದವರಲ್ಲಿ ಒಬ್ಬರು.

ಸುಬ್ಬಣ್ಣನವರು ಯಾವತ್ತೂ ಅಕ್ಷರ ಪ್ರಕಾಶನವನ್ನು 'ಉದ್ಯಮ' ಎಂದು ಭಾವಿಸಲಿಲ್ಲ. ಒಂದು ಪುಸ್ತಕವನ್ನು ಹತ್ತು ಜನ ಓದಿದರೂ ಅದರಿಂದ ಪ್ರಯೋಜನ ಇದೆ ಎಂದು ಭಾವಿಸಿದರು.

ಲೇಖಕರಿಗೆ ಗೌರವಧನ ಕೊಡುವ ವಿಚಾರದಲ್ಲೂ ಅಕ್ಷರ ಪ್ರಕಾಶನ ಮಾದರಿಯಾಗಿದೆ. ಪುಸ್ತಕದ ಅಂಗಡಿಗಳಿಗೆ ಮೂವತ್ತರಿಂದ ನಲವತ್ತು ಪರ್ಸೆಂಟ್ ರಿಯಾಯಿತಿಯಲ್ಲಿ ಕೊಡುವಾಗ ಲೇಖಕರಿಗೆ ಕೊಡುವ ಹತ್ತು ಪರ್ಸೆಂಟ್ ಹಣಕ್ಕೆ ಚೌಕಾಶಿ ಮಾಡಬಾರದು ಎಂಬುದು ಸುಬ್ಬಣ್ಣನವರ ನಿಲುವಾಗಿತ್ತು.

ನವ್ಯ ಸಾಹಿತ್ಯದ ಪ್ರಖರ ದಿನಗಳಲ್ಲಿ ಅನಂತಮೂರ್ತಿ. ಅಡಿಗ. ಲಂಕೇಶ್ ಅವರ ಪುಸ್ತಕಗಳನ್ನು ಪ್ರಕಟಿಸುವ ಮೂಲಕ ಕನ್ನಡ ಸಾಹಿತ್ಯಕ್ಕೆ ಹೊಸ ವಿಚಾರದ ಅಲೆ ಬರಲು ಪ್ರಕಾಶನ ಕಾರಣವಾಯಿತು. ಸಾಗರದಲ್ಲಿ. ಅಕ್ಷರ ಪ್ರಕಾಶನದ ಹೊಸ ಪುಸ್ತಕ ಬಂದ ಕೂಡಲೇ ಓದುವ ಹಂಬಲದಿಂದ ಪ್ರಕಾಶನದಲ್ಲಿ 'ಅಕೌಂಟ್' ಇಟ್ಟವರಿದ್ದರು.

ಗೋಪಾಲಗೌಡರ ಪ್ರಭಾವದಿಂದ ಸಮಾಜವಾದಿ ಚಿಂತನೆಯಲ್ಲಿ ತೊಡಗಿದ ಸುಬ್ಬಣ್ಣ ಸಮಾಜವಾದಿ ಒಲವಿನ ಪುಸ್ತಕಗಳನ್ನು ಪ್ರಕಟಿಸಿದರು. ಹೀಗೆ ಸಮಾಜವಾದಿ ಚಳುವಳಿ. ನವ್ಯ ಸಾಹಿತ್ಯದ ಚಿಂತನೆ. ಪರಿಸರ ಚಿಂತನೆ. ಸ್ತ್ರೀವಾದಿ ಸಾಹಿತ್ಯ ಚಿಂತನೆ. ಆಧುನಿಕೋತ್ತರ ಚಿಂತನೆಗಳ ಕುರಿತು ಪುಸ್ತಕಗಳನ್ನು ಪ್ರಕಟಿಸಿರುವ 'ಅಕ್ಷರ' ಪ್ರಕಾಶನಕ್ಕೆ ಒಂದು ಸಾಮಾಜಿಕ ಬದ್ಧತೆ ಇತ್ತು. ಇದೆ. ಖಚಿತವಾದ ವಿಚಾರಧಾರೆ ಇದೆ. ಕೆ.ವಿ. ಸುಬ್ಬಣ್ಣನವರು "ಆಧುನಿಕ ಕನ್ನಡ ಸಾಹಿತ್ಯಕ್ಕೆ ಹೀಗೆ ಬನ್ನಿ" ಎಂಬ ತಮ್ಮ ಲೇಖನದಲ್ಲಿ ಸಾಹಿತ್ಯ ಕಲೆಗಳನ್ನು ಕುರಿತ ತಮ್ಮ ದೃಷ್ಟಿಕೋನವನ್ನು ಹೀಗೆ ವ್ಯಕ್ತಪಡಿಸಿದ್ದಾರೆ. " ಒಟ್ಟಿನಲ್ಲಿ. ನಿತ್ಯ ಹಗಲು ನಾವು ನಡೆದ ಆಡುವ ಬೀದಿಯನ್ನೂ ಬದುಕನ್ನೂ ಮರೆತು ಸಾಹಿತ್ಯವೊಂದೇ ಜಗತ್ತು ಅನ್ನುವ ಹಾಗೆ. ಸೆಮಿನಾರ್ ಕೋಣೆಯ ನಿರ್ವಾತ ವಿಸ್ಮೃತಿಯಲ್ಲಿ – ನಿದ್ದೆ ನಡೆದಾಟದ ಥರಾ – ನಡೆವ ಚರ್ಚೆಗಳು ನನ್ನಲ್ಲಿ ವಿಚಿತ್ರ ಭಯ ಹುಟ್ಟಿಸುತ್ತವೆ.

ಸಾಹಿತ್ಯ ಕಲೆ. ವಿಮರ್ಶೆಗಳು ನನಗೆ ಬೇಕು. ಹಳ್ಳಿಯ ಮೂಲೆಯಲ್ಲಿ ಅಡಿಕೆ ಬೆಳೆದುಕೊಂಡಿರುವ ನನ್ನನ್ನೂ ಎಲ್ಲೋ ಪರಿಗಣಿಸಬಲ್ಲಂಥ ಹೇಗೋ ಒಳಗೊಳಿಸಿಕೊಳ್ಳಬಲ್ಲಂಥ ಸಾಹಿತ್ಯ. ಕಲೆ. ವಿಮರ್ಶೆ ಬೇಕು". (ಕೆ.ವಿ.ಸುಬ್ಬಣ್ಣ ಅವರ ಆಯ್ದ ಬರಹಗಳು ಪುಟ ೨೨೬.)

ವಿಭಿನ್ನ ಚಿಂತನ ಕ್ರಮದ ಸಮಕಾಲೀನ ಲೇಖಕರ. ಹಳಬರ. ಹಿರಿಯರ ಎಲ್ಲ ಬಗೆಯ ಪುಸ್ತಕಗಳೂ ಪ್ರಕಟವಾಗಿವೆ. ರಂಗನಾಥ ಶರ್ಮಾ. ಜಿ.ಎನ್. ಚಕ್ರವರ್ತಿಯವರ ಶಾಸ್ತ್ರ ಗ್ರಂಥಗಳು. ಜೀವನ ಮತ್ತು ಸಂಸ್ಕೃತಿ ಕುರಿತ ಬೇರೆ ಬೇರೆ ದೃಷ್ಟಿಕೋನದ ಪುಸ್ತಕಗಳೂ ಪ್ರಕಟವಾಗಿವೆ.

ವಿಶ್ವಾತ್ಮಕ ದೃಷ್ಟಿಕೋನವನ್ನು ಸ್ಥಳೀಯತೆಯೊಂದಿಗೆ ಬೆಸೆಯುವ ಕೆಲಸವನ್ನು ಸುಬ್ಬಣ್ಣ ಮಾಡಿದ್ದಾರೆ. ಗೋಪಾಲಗೌಡರ ಚಿಂತನೆ ತಮಗೆ ರಾಷ್ಟ್ರೀಯ ನಾಯಕರ ಚಿಂತನೆಗಿಂತ ಮುಖ್ಯ ಎಂದು ಹೇಳುತ್ತಾ ಸುಬ್ಬಣ್ಣ "ಒಬ್ಬ ಜಗತ್‌ಶ್ರೇಷ್ಠ ಸಾಹಿತಿ ಇಲ್ಲಿ ಉದ್ಭವಿಸುವುದಕ್ಕಿಂತ ಇಲ್ಲಿನ ಜನರಲ್ಲಿ ನೂರಕ್ಕೆ ನೂರು ಸಾಮಾನ್ಯ ಅಕ್ಷರಸ್ಥರಾಗುವುದು ನನಗೆ ಮುಖ್ಯ" ಎಂದು ಹೇಳುತ್ತಾರೆ 'ಶ್ರೇಷ್ಠತೆಯ ವ್ಯಸನ' ಎಂಬ ತಮ್ಮ ಲೇಖನದಲ್ಲಿ.

ನೀನಾಸಂ ಪ್ರತಿಷ್ಠಾನದ ಮೂಲಕ ಯುವ ಸಮೂಹದಲ್ಲಿ ವಿದ್ಯಾರ್ಥಿಗಳಲ್ಲಿ ಸಾಹಿತ್ಯ ಸಂಸ್ಕೃತಿಯ ಕುರಿತ ಅರಿವು, ಕಾಳಜಿ ಮೂಡಿಸಲು ಕರ್ನಾಟಕದಾದ್ಯಂತ ನೂರಾರು ಸಾಹಿತ್ಯ ಅಧ್ಯಯನ ಶಿಬಿರಗಳನ್ನು ನಡೆಸಲಾಗಿದೆ. ಈ ಶಿಬಿರಗಳಲ್ಲಿ ವಿದ್ಯಾರ್ಥಿಗಳು ಓದಬಹುದಾದ, ಓದಲೇಬೇಕಾದ ಪುಸ್ತಕಗಳನ್ನು ನೀಡಲು ೫ ಲಕ್ಷ ರೂ. ಗಿಂತಲೂ ಹೆಚ್ಚಿನ ಬೆಲೆಯ ಪುಸ್ತಕಗಳನ್ನು ನೀಡಲಾಗಿದೆ. ಇದರಲ್ಲಿ ಅರ್ಧಕ್ಕಿಂತ ಹೆಚ್ಚು ಅಕ್ಷರ ಪ್ರಕಾಶನದ ಪುಸ್ತಕಗಳು. ಮ್ಯಾಗ್ಸೆಸೆ ಪ್ರಶಸ್ತಿಯ ಹಣವನ್ನು ಇದಕ್ಕಾಗಿ ವಿನಿಯೋಗಿಸಿದ್ದಾರೆ. (ನೀನಾಸಂ ಪ್ರತಿಷ್ಠಾನದ ಮೂಲಕ)

ಕೆ.ವಿ. ಸುಬ್ಬಣ್ಣನವರು ಸ್ವಂತ ಹಣವನ್ನು ವಿನಿಯೋಗಿಸಿ ಪ್ರಾರಂಭಿಸಿದ 'ಅಕ್ಷರ ಪ್ರಕಾಶನ' ಈಗ ಒಂದು ಟ್ರಸ್ಟ್ ಆಗಿದೆ. ಈಗ ಪ್ರಕಾಶನದ ಹಣದಿಂದಲೇ ಅದು ನಡೆಯುತ್ತಾ ಇದೆ. ಹಳೇ ಪುಸ್ತಕಗಳನ್ನು ಮಾರಿ ಹೊಸ ಪುಸ್ತಕ ಪ್ರಕಟಿಸುತ್ತಿದ್ದಾರೆ.

ಕೆ.ವಿ. ಸುಬ್ಬಣ್ಣನವರ 'ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು' ಅತ್ಯುತ್ತಮ ಕೃತಿ. ಕೆ.ವಿ. ಸುಬ್ಬಣ್ಣನವರ ಮೂರು ಮುಖ್ಯ ಕಾಳಜಿಗಳು ಮತ್ತು ಆದರ್ಶಗಳೆಂದರೆ ಸಹಕಾರ, ಸಮಾನತೆ, ವಿಕೇಂದ್ರೀಕರಣ. ಕೃತಿಕಾರ, ಓದುಗ, ವಿಮರ್ಶಕ ಎಲ್ಲರೂ ಸಮಾನರು. ಅವರ ನಡುವೆ ಶ್ರೇಣೀಕರಣ ಇರಬಾರದು ಎಂಬುದು ಸುಬ್ಬಣ್ಣನವರ ನಿಲುವಾಗಿತ್ತು.

ಪಠ್ಯ ನಿರ್ಮಾಣ, ಅರ್ಥ ನಿರ್ಧಾರಗಳು ಯಾವುದೇ ಒಂದು ಕೇಂದ್ರದಿಂದ ಹೇರಲ್ಪಡುವುದಿಲ್ಲ. ಒಂದು ಸಮುದಾಯದ ಪ್ರತಿಯೊಬ್ಬ ಮನುಷ್ಯನೂ ಈ ಪ್ರಕ್ರಿಯೆಯಲ್ಲಿ ಯಾವತ್ತೂ ತೊಡಗಿಕೊಂಡಿರುತ್ತಾನೆ ಎಂಬುದು ಅವರ ಅಭಿಪ್ರಾಯ.

ಇಂಥ ಸಾಮುದಾಯಿಕ ಪಾಲುದಾರಿಕೆ ಮತ್ತು ಅಪೇಕ್ಷೆಗಳಿಂದ ಪಠ್ಯ ಮತ್ತು ಅರ್ಥಗಳ ಹಲವು ಪರಂಪರೆಗಳು ಒಂದು ಸಂಸ್ಕೃತಿಯಲ್ಲಿ ಬೆಳೆಯುತ್ತವೆ ಎಂದು ಸಮುದಾಯ ಪ್ರಜ್ಞೆಯನ್ನು ವ್ಯಕ್ತಪಡಿಸುತ್ತಿದ್ದ ಸುಬ್ಬಣ್ಣ ತಾವು ಪ್ರಕಟಿಸಿರುವ ಪುಸ್ತಕಗಳಲ್ಲೂ ಈ ತತ್ವಕ್ಕೆ ಬದ್ಧರಾಗಿದ್ದಾರೆ.

ಪಿ. ಲಂಕೇಶ್ ತಮ್ಮ ಆತ್ಮಕಥೆ 'ಹುಳಿಮಾವಿನಮರ' – ದಲ್ಲಿ "ಮಹಾ ಸುಸಂಸ್ಕೃತ ವ್ಯಕ್ತಿ; ಜಾತ್ಯತೀತ ಮನುಷ್ಯ ಕೂಡ, ಬದುಕನ್ನು ಒಂದು ಕುಶಲತೆಯ ಮಟ್ಟ ಮುಟ್ಟಿಸಬಲ್ಲ ಕೆ.ವಿ. ಸುಬ್ಬಣ್ಣ ತುಂಬ ಮಾನವೀಯ, ಸ್ನೇಹಮಯ ವ್ಯಕ್ತಿ ಹಾಗೂ ಅಪಾರ ಧೈರ್ಯಶಾಲಿ.... ನಾನು ನನ್ನ 'ಮುಸ್ಸಂಜೆಯ ಕಥಾ ಪ್ರಸಂಗ' ಕಾದಂಬರಿಯನ್ನು ಶುರುಮಾಡಿದ್ದು ಸುಬ್ಬಣ್ಣನವರ ಮನೆಯಲ್ಲಿ...... ತುರ್ತು ಪರಿಸ್ಥಿತಿಯಲ್ಲಿ ...... ಇಂದಿರಾ ವಿರುದ್ಧ ಜನರನ್ನು ಸಂಘಟಿಸುತ್ತಿದ್ದರು" (ಪುಟ ೨೫೫, ಹುಳಿಮಾವಿನಮರ) ಎಂದು ಕೆ.ವಿ. ಸುಬ್ಬಣ್ಣನವರ ಬಗ್ಗೆ ಬರೆದಿದ್ದಾರೆ.

ಅಕ್ಷರ ಪ್ರಕಾಶನದ ಪುಸ್ತಕಗಳು ತಮ್ಮದೇ ಛಾಪನ್ನು ಹೊಂದಿವೆ. ಹೊರ ಸೌಂದರ್ಯಕ್ಕಿಂತ ಒಳಗಿನ ಸತ್ವ ಮುಖ್ಯ ಎಂಬ ತಾತ್ವಿಕತೆ. ಡೆಮಿ ೧/೮ ಆಕಾರದಲ್ಲಿ, ಸಣ್ಣ ಅಕ್ಷರಗಳಲ್ಲಿ ಮುದ್ರಿತವಾದ ಪುಸ್ತಕಗಳು. ಇದುವರೆಗೆ ಪ್ರಕಾಶನ ೫೦೦ ಕ್ಕಿಂತ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದೆ.

ಕನ್ನಡಿಗರ ಅಭಿರುಚಿಯನ್ನು ರೂಪಿಸುವಲ್ಲಿ ಕನ್ನಡ ಸಂಸ್ಕೃತಿಯನ್ನು ರೂಪಿಸುವಲ್ಲಿ ಅಕ್ಷರ ಪ್ರಕಾಶನ ತನ್ನದೇ ಆದ ಕಾಣಿಕೆಯನ್ನು ಸಮಾಜಕ್ಕೆ ಸಲ್ಲಿಸಿದೆ.

ಸುಬ್ಬಣ್ಣ ಅವರ ಮಗ ಕೆ.ವಿ. ಅಕ್ಷರ ಅವರೂ ಸ್ವತಃ ಲೇಖಕರಾಗಿ ಹಲವು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಆಧುನಿಕೋತ್ತರ ಚಿಂತನೆಯನ್ನು ಬಿಂಬಿಸುವ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಅಕ್ಷರ ಪ್ರಕಾಶನವನ್ನು ಸಮರ್ಥವಾಗಿ ಒಳನೋಟಗಳಿಂದ ನಡೆಸಿಕೊಂಡು ಬರುತ್ತಿದ್ದಾರೆ ಎಂಬುದಕ್ಕೆ 'ಮೊದಲ ಓದು' ಮಾಲಿಕೆಯ ಪುಸ್ತಕಗಳೇ ನಿದರ್ಶನಗಳಾಗಿವೆ. ಓದುಗರನ್ನು ಕುರಿತು ಕಾಳಜಿ ವಹಿಸುವ ಕನ್ನಡದ ಪ್ರಕಾಶನ ಸಂಸ್ಥೆಗಳಲ್ಲಿ ಅಕ್ಷರ ಪ್ರಕಾಶನವೂ ಒಂದು ಮುಖ್ಯ ಸ್ಥಾನ ಪಡೆದಿದೆ. ❑

ಪ್ರಗತಿಶೀಲರ ಜಟಾಪಟಿ : ಒಂದು ಅನುಬಂಧ

ದೇಶ ಕುಲಕರ್ಣಿ

'ಪುಸ್ತಕಮನೆ'ಯ ('ಪ್ರಜಾಸಾಹಿತ್ಯ'ದ) ಸೆಪ್ಟೆಂಬರ್ ಮಾಹೆಯ ಪುಸ್ತಿಕೆಯಲ್ಲಿ ಬಂದಿರುವ ಗೆ. ಜಿ.ವಿ. ವೈಕುಂಠರಾಜು ಅವರ ಲೇಖನ ಅನಕೃ-ನಿರಂಜನರ ಜಟಾಪಟಿಯನ್ನು ಓದಿ ಹಳೆಯದೆಲ್ಲ ನೆನಪಿಗೆ ಬಂತು. ಕನ್ನಡಕ್ಕೆ ಕಳೆದುಹೋದ ದಿನಗಳು ಅವು. ಆ ಲೇಖನಕ್ಕೆ ಒಂದು ಅನುಬಂಧವನ್ನು ಬರೆಯುವ ಪ್ರಯತ್ನ ಮಾಡುತ್ತೇನೆ.

ಲೇಖನದಲ್ಲಿ ಬಹು ಮುಂಚೆಯೇ 'ಕನ್ನಡಮ್ಮನ ಗುಡಿಯಲ್ಲಿ' ಪ್ರಸ್ತಾಪ ಬಂದಿದೆ. ಆ ವಿಷಯವನ್ನೇ ಈಗ ಕೈಗೆತ್ತಿಕೊಳ್ಳಬಹುದು. ಅ.ನ. ಕೃಷ್ಣರಾಯರು ವಸ್ತುವೈವಿಧ್ಯವನ್ನು ಮೆರೆದ ಬಹುಮುಖ ವ್ಯಕ್ತಿತ್ವದ ಲೇಖಕರು. ಬರಹಗಾರನ ಬದುಕು ಅಂಥ ಒಂದು ವಸ್ತು. ಈ ವಸ್ತುವಿನ ಸುತ್ತಮುತ್ತ ಅನಕೃ ಮೂರು ಕಾದಂಬರಿಗಳನ್ನು ಬರೆದಿದ್ದಾರೆ. ಆ ಮೂರು ಕಾದಂಬರಿಗಳಲ್ಲಿ 'ಕನ್ನಡಮ್ಮನ ಗುಡಿಯಲ್ಲಿ' ಮುಖ್ಯವೂ ಸ್ವಾರಸ್ಯಕರವೂ ಆದುದು. ರಾಜು ಅವರು ಹುನಗುಂದ ಈಶ್ವರರಾಯನ ಪಾತ್ರವನ್ನು ಈಗಾಗಲೇ ಪ್ರಸ್ತಾಪಿಸಿದ್ದಾರೆ.

ಇನ್ನೊಂದು ಪಾತ್ರವನ್ನು ನಾನು ಹೆಸರಿಸುತ್ತೇನೆ. ವರ್ತಮಾನ ಕಾಲದ 'ಆವರಣ' ಕಾದಂಬರಿಯಲ್ಲಿ ಪ್ರೊ. ಶಾಸ್ತ್ರಿಯವರ ಪಾತ್ರವನ್ನು ಸಮಕಾಲೀನ ಪ್ರಮುಖ ಲೇಖಕರೊಬ್ಬರನ್ನು ಮಾದರಿಯಾಗಿಟ್ಟುಕೊಂಡು ರಚಿಸಲಾಗಿದೆ ಎಂದು ಊಹಿಸುತ್ತಿದ್ದಾರಷ್ಟೆ ? ಅನಕೃ ತಮ್ಮ ಕಾದಂಬರಿಯಲ್ಲಿ ಸಹ-ಲೇಖಕರ ಹೆಸರು-ಪಾತ್ರಗಳನ್ನು ಇನ್ನೂ ಹೆಚ್ಚು ರಾಜಾರೋಷವಾಗಿ ಚಿತ್ರಿಸಿದ್ದಾರೆ. ಹುನಗುಂದ ಈಶ್ವರರಾಯನ ಜೋಡಿ ಇನ್ನೊಂದು ಪಾತ್ರ ಇದೆ : ಅದರ ಹೆಸರು ಕುಟ್ಟೋ ಶನಿ. ಹುನಗುಂದ ಈಶ್ವರಾಯ ಕುಳಕುಂದ ಶಿವರಾಯ (ನಿರಂಜನ)ನಾದರೆ ಕುಟ್ಟೋಶನಿ ಬಸವರಾಜ ಕಟ್ಟೀಮನಿ.

ತಮಾಷೆಯೆಂದರೆ ಈ ಮೂರು ಜನ ಲೇಖಕರೂ ಪ್ರಗತಿಶೀಲ ಚಳುವಳಿಗೆ ಸೇರಿದವರೇ. ಪ್ರಗತಿಶೀಲರಲ್ಲಿ ಮುಖ್ಯರಾದವರೆಂದರೆ ಅನಕೃ, ತರಾಸು, ನಿರಂಜನ, ಕಟ್ಟೀಮನಿ ಮತ್ತು ಚದುರಂಗರು. ಕೆಲವರು ಅರ್ಚಕ ವೆಂಕಟೇಶರ ಹೆಸರನ್ನೂ ಕೂಡಿಸುತ್ತಾರೆ. ಸಾಂಸಾರಿಕತೆಯನ್ನು ಸಾಮಾಜಿಕತೆಗೆ ವಿಸ್ತರಿಸುವಲ್ಲಿ ಇವರೆಲ್ಲರೂ ನಿಪುಣರೇ. ಸಾಮಾಜಿಕ ಸಮಸ್ಯೆಗಳಿಗೆ ರಾಜಕೀಯ, ಮತೀಯ ಮತ್ತು ಆರ್ಥಿಕ ಆಯಾಮಗಳು ಸೇರಿಕೊಂಡು ಅವನ್ನು ಗಾಢವಾಗಿಸುತ್ತವೆ. ಈ ಸಮಸ್ಯೆಗಳನ್ನು ತಮ್ಮ ಪಾತ್ರಗಳ ಮೂಲಕ ಚರ್ಚಿಸುತ್ತಲೇ ಪ್ರಗತಿಶೀಲ ಲೇಖಕರು ಜನಪ್ರಿಯರಾಗಿಬಿಟ್ಟರು. ಪ್ರಗತಿಶೀಲ ಲೇಖಕರು ಮುನ್ನಾದಿನಗಳಲ್ಲಿ ತಮ್ಮ ಕಾದಂಬರಿ-ಕತೆಗಳನ್ನು ವಿಮರ್ಶೆಗೆ ಕಳಿಸುತ್ತಿರಲಿಲ್ಲ; ಈಗಿನಂತೆ ಆಗ ಗ್ರಂಥಾಲಯಗಳೂ ಇರಲಿಲ್ಲ. ಆದರೆ ಕನ್ನಡದ ಅದೃಷ್ಟವೆಂದರೆ ಇವರೆಲ್ಲರೂ ಮನೆಮಾತಾಗಿದ್ದರು. ಓದು-ಬರಹ ಬಲ್ಲವರು ಈ ಕತೆ-ಕಾದಂಬರಿಗಳನ್ನು ಓದಿ ಚರ್ಚಿಸುತ್ತಿದ್ದರು. ಓದಿ ಇಷ್ಟಪಡುತ್ತಿದ್ದರು. ಈ ಲೇಖಕರಿಗೇ ಪ್ರತ್ಯೇಕ ವಿಶಿಷ್ಟ ವಲಯಗಳೂ ಇದ್ದುವು.

ನಿರಂಜನರು ಬಳಸಿದ ಪದ ಅಕ್ಷರ ವ್ಯಭಿಚಾರವನ್ನು 'ಪ್ರಜಾವಾಣಿ' ಪತ್ರಿಕೆಯು ಶೀರ್ಷಿಕೆಯನ್ನಾಗಿ ಮಾಡಿಕೊಂಡು ದಪ್ಪ ಅಕ್ಷರಗಳಲ್ಲಿ ಪ್ರಕಟಿಸಿತು. ನಿರಂಜನರ ಬೇರೆಬೇರೆ ತರಹದ ಲೇಖನ/ಅಂಕಣಗಳು ಆ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದುವು. ಆ ಪತ್ರಿಕೆಗೆ ನಿರಂಜನರ ಕಡೆ ಒಲವು ಜಾಸ್ತಿ. ಅನಕೃಗೆ ಈ ತೆರನ ಅನುಕೂಲವಿಲ್ಲ. ಅವರು ಪ್ರತಿಕ್ರಿಯಿಸುತ್ತಿದ್ದುದು ಬೇರೆ ರೀತಿಯಲ್ಲಿ.

ವೇಶ್ಯಾ ಸಮಸ್ಯೆ ಪ್ರಗತಿಶೀಲ ಲೇಖಕರಿಗೆ ಬಹು ಆಪ್ಯಾಯಮಾನವಾದ ವಸ್ತು. ಗಮನಿಸಬೇಕಾದ ಅಂಶ ಅಂದರೆ ಈ ಸಮಸ್ಯೆಯನ್ನು ಅವರೆಲ್ಲರೂ ತಮ್ಮದೇ ಆದ ವಿಶಿಷ್ಟ ರೀತಿಗಳಲ್ಲಿ ಬಿಡಿಸಿ ಕತೆ-ಕಾದಂಬರಿಗಳನ್ನು ಹೆಣೆದಿದ್ದಾರೆ. ಬಹುತೇಕ ಕಾದಂಬರಿಗಳಲ್ಲಿ ಕಾಮವು ಇವರ ವಸ್ತುವಾದರೂ ಅದು ವೈಯಕ್ತಿಕ ವಿಕೃತಿಯೋ ಹಾದರವೋ ಆಗಿರುತ್ತಿತ್ತು. ಇದು ಬರುವುದು ಸಾಂಸಾರಿಕತೆಯ ಒಳಗಡೆ. ಆದರೆ ವೇಶ್ಯಾ ಸಮಸ್ಯೆಯಾದರೋ ಸಮಾಜದ ಒಂದು ಹೀನ ಮುಖ. ಆ ಸಮಸ್ಯೆಯು ವ್ಯಕ್ತಿಯನ್ನು ಮೀರಿ ಬೆಳೆಯುತ್ತದೆ. ಹಾದರಕ್ಕೂ ಅದಕ್ಕೂ ಸಂಬಂಧವೇ ಇಲ್ಲ.

ಅ.ನ.ಕೃ. ಅವರ ಅನೇಕ ಕಾದಂಬರಿಗಳಲ್ಲಿ ಲೈಂಗಿಕತೆಯು ಅಂತರ್ಗತವಾಗಿ ಬರುತ್ತದೆ. ಆದರೆ ವೇಶ್ಯಾಸಮಸ್ಯೆಯನ್ನು ಪ್ರಧಾನವಾಗಿ ಚರ್ಚಿಸಿರುವುದು ಮೂರು ಕಾದಂಬರಿಗಳಲ್ಲಿ (ಸಂಜೆಗತ್ತಲು, ನಗ್ನ ಸತ್ಯ ಮತ್ತು ಶನಿ ಸಂತಾನ). ಈ ಕಾದಂಬರಿಗಳಲ್ಲಿ ವೇಶ್ಯೆಯರು, ಅವರ ಮಾಲಕಿಯರು ಬರುವಂತೆ ವಿಟರೂ ಬರುತ್ತಾರೆ. ಇದು ಸರಿ. ಆದರೆ ಬರವಣಿಗೆಯ ಶೈಲಿಯಲ್ಲಿ ಘರ್ಷಣೆ ಇಲ್ಲ; ಮಾರ್ದವತೆ ಇದೆ. ಎಲ್ಲಕ್ಕಿಂತ ಹೆಚ್ಚಾಗಿ ಮಾದಕತೆಯಿದೆ. ರಮಣೀಯತೆಯಿದೆ. ಜೀವನದ ಒಂದು ಮುಖ್ಯ ಸೊಗಸು ಅದು ಅನ್ನುವ ರೀತಿಯಲ್ಲಿ ಅನಕೃ 'ತನ್ಮಯರಾಗಿ' ಬರೆಯುತ್ತಾರೆ. ಒಳಗಿನ ಮಾತೆಂದರೆ ನಮಗೂ ಅದು ಬೇಕು ಅನ್ನಿಸುತ್ತದೆ. ಈ ಕಾದಂಬರಿಗಳು ಬಂದಾಗ ಇದನ್ನು ಅಶ್ಲೀಲ ಸಾಹಿತ್ಯ ಎಂದು ಹೀಗಳೆದರು. ಇದು ದುರ್ನಡತೆಯನ್ನು ಪ್ರಚೋದಿಸುತ್ತದೆ ಅಂದರು. ಅ.ನ.ಕೃ. ಇದಕ್ಕೆ ಪುಸ್ತಕ ರೂಪದಲ್ಲಿಯೇ ಉತ್ತರ ನೀಡಿದರು. ಸಾಹಿತ್ಯದಲ್ಲಿನ ಕಾಮವನ್ನು ಕುರಿತಂತೆ ಜಗತ್ತಿನ ವಿದ್ವಾಂಸರು, ಕಲಾವಿದರು, ಲೇಖಕರು ಮತ್ತು ಮನೋವಿಜ್ಞಾನಿಗಳ ವಿಚಾರಗಳನ್ನು ಕ್ರೋಢೀಕರಿಸಿ 'ಸಾಹಿತ್ಯ ಮತ್ತು ಕಾಮಪ್ರಚೋದನೆ' ಎಂಬ ಪುಸ್ತಕದಲ್ಲಿ ಚರ್ಚಿಸಿದರು. ಕನ್ನಡದಲ್ಲಿ ಇದೊಂದು ಅಪರೂಪದ ಗ್ರಂಥ. (ವಿಟ ಅನ್ನುವ ಮಾತು ಬಂದಿರುವಾಗ ಆನುಷಂಗಿಕವಾಗಿ ಇನ್ನೊಂದು ವಿಷಯ ನೆನಪಿಗೆ ಬರುತ್ತಿದೆ : ಅ.ನ.ಕೃ. ಅವರ 'ನಟ ಸಾರ್ವಭೌಮ' ಕಾದಂಬರಿ ಕಂಪೆನಿ ನಾಟಕದ ನಾಯಕ-ನಾಯಕಿಯರ ಕತೆ. ಕಂಪನಿ ನಾಟಕದ ವಿಷಯ ಬಲ್ಲವರು ರಂಗದ ಹಿನ್ನೆಲೆಗಿರುವ ಮಾಲೀಕ-ನಟ-ನಟಿಯರ ಕಾಮಜೀವನವನ್ನು ಅರಿತೇ ಇರುತ್ತಾರೆ. ನಿರಂಜನರಂಥ ವಿಮರ್ಶಕರು ಈ ವಾಸ್ತವವನ್ನು ಮರೆತು ಆ ಕಾದಂಬರಿಯನ್ನು 'ವಿಟ ಸಾರ್ವಭೌಮ' ಎಂದು ಹಂಗಿಸಿದರು).

ತ.ರಾ.ಸು. ಅವರ ಕಾದಂಬರಿಗಳಲ್ಲಿ ಕಾಮವು ಬದುಕಿನ ಪರಿಧಿಯಲ್ಲೇ ಬಂದಂತೆ ಭಾಸವಾಗುತ್ತದೆ. ಮಾದಕತೆಗೆ ಬದಲು ಅಲ್ಲಿ ಮೋಹಕತೆ ಇದೆ; ಆದರೆ ಅವರು ವೇಶ್ಯಾಸಮಸ್ಯೆಯನ್ನು ಕುರಿತು ಬರೆದ 'ಮಸಣದ ಹೂವು' ಕಾದಂಬರಿ ಮಾತ್ರ ಅ.ನ.ಕೃ. ಕಾದಂಬರೀತ್ರಯಕ್ಕೆ ಉತ್ತರರೂಪದಂತಿದೆ. ವೇಶ್ಯಾ ಸಮಸ್ಯೆಯ ಸಕಲ ವಿಕಾರಗಳನ್ನು ಅದೆಲ್ಲದರ ಹೀನತೆಯಲ್ಲಿ ತ.ರಾ.ಸು. ತೆರೆದು ತೋರಿದ್ದಾರೆ. ಆ ವೃತ್ತಿಯ ಅಸಹ್ಯವು ಎಷ್ಟರಮಟ್ಟಿಗೆ ಚಿತ್ರಿತವಾಗಿದೆ ಅಂದರೆ ಅದು ನಮಗೆ ಬೇಡ ಅನ್ನಿಸುತ್ತದೆ. ಲೇಖಕರ ಉದ್ದೇಶ ಸಫಲವಾಗಿದೆ. ಆ ಕಾದಂಬರಿಯಲ್ಲಿ ಬರುವ ಹೆಣ್ಣೊಬ್ಬಳಿಗೆ ಒಬ್ಬ ತಲೆಹಿಡುಕ ತುಂಬ ಪ್ರಿಯನಾಗಿರುತ್ತಾನೆ. ಕಾದಂಬರಿಯ ಕೊನೆಕೊನೆಗೆ ಯಾವುದೋ ಒಂದು ಹತಾಶೆಯಲ್ಲಿ ಅವನು ಅವಳನ್ನು ಬಯಸುತ್ತಾನೆ. ಆಕೆ ನಿನಗೂ ಇದು ಬೇಕೆ ಎಂದು ಪ್ರಶ್ನಿಸುತ್ತಾಳೆ. ಸಾಹಿತ್ಯದ ಗುಟ್ಟನ್ನು ಬಯಲಾಗಿಸುವುದು ಈ ಬಗೆಯ ಮಾರ್ಮಿಕತೆಯೇ.

ಬಸವರಾಜ ಕಟ್ಟೀಮನಿ ಹಾಗು ನಿರಂಜನರಲ್ಲಿ ಕಾಮವು ಅಪೇಕ್ಷಣೀಯ ಪ್ರವೃತ್ತಿಯಾಗಿ ಬರುವುದಿಲ್ಲ. ಶೋಷಣೆಯ ಕ್ರಿಯೆಯಾಗಿ ಬರುತ್ತದೆ. ಕಟ್ಟೀಮನಿಯವರ ಖಾನಾವಳಿಯ ನೀಲಾ ಮತ್ತು ನಿರಂಜನರ ಕೊನೆಯ ಗಿರಾಕಿ - ಇವು ವೇಶ್ಯಾ ಸಮಸ್ಯೆಗೆ ಸಂಬಂಧಪಟ್ಟ ಕೃತಿಗಳೇ! ಕೊನೆಯ ಗಿರಾಕಿ ಕತೆಯಲ್ಲಿ ಕಾಮವು ಕ್ರೌರ್ಯ ಮತ್ತು ಹಿಂಸೆಯ ರೂಪ ತಾಳುತ್ತದೆ. ವ್ಯಂಗ್ಯ ಮತ್ತು ವಸ್ತು ನಿಷ್ಠತೆ ಇವರಿಬ್ಬರ ಶೈಲಿ.

ರಾಜು ಅವರು ಅ.ನ.ಕೃ. - ನಿರಂಜನರ ಹಗೆತನದ ಮಾತನ್ನೆತ್ತಿದ್ದಾರೆ. ಹಗೆತನಕ್ಕೆ ಕೆಲವು ಲೌಕಿಕ ಕಾರಣಗಳಿರಬಹುದು. ಅದರ ಗೋಜು ಸಾಹಿತ್ಯಚರಿತ್ರೆಗೆ ಬೇಕಿಲ್ಲ. ಆದರೆ ಈ ವೈಷಮ್ಯಕ್ಕೆ ಮುಖ್ಯ ಕಾರಣ, ಜೀವನತತ್ತ್ವಕ್ಕೆ ಸಂಬಂಧಿಸಿದ್ದು. ಕಟ್ಟೀಮನಿ ಮತ್ತು ನಿರಂಜನರು 'ಹುಟ್ಟು' ವಾಮ ಪಂಥೀಯರು. ಯಾವುದೇ ವಸ್ತುವನ್ನು ಅವರು ನೋಡುವ ಕ್ರಮದಲ್ಲೇ ಇದು ತಿಳಿಯುತ್ತದೆ. ನಿರಂಜನರಂತೂ ತಮ್ಮ ಪೂರ್ವಾಶ್ರಮದಲ್ಲಿ ಒಬ್ಬ ಕಾರ್ಡ್‌ಹೋಲ್ಡರ್ ಆಗಿದ್ದರು. ಅ.ನ.ಕೃ. ಈ ತರಹದ ಬದ್ಧರಲ್ಲ. ವ್ಯಕ್ತಿ ವಿಶಿಷ್ಟತೆಯನ್ನು ನಂಬಿದವರು. ವ್ಯಕ್ತಿ ಜೀವನದ ಉದ್ಧಾರವೇ ಸಮಾಜಕ್ಕೆ ಮತ್ತು ದೇಶಕ್ಕೆ ವಿಸ್ತಾರವಾಗುತ್ತದೆ ಎಂದು ಪ್ರತಿಪಾದಿಸಿದವರು. ಆರ್ಥಿಕ ಮತ್ತು ಸಾಮಾಜಿಕ ಅಸಮತೆ ಅವರಿಗೂ ಗೊತ್ತು. ಆದರೆ ಅದರಲ್ಲಿ ಅಡಗಿರುವ ಬದುಕು ಅಷ್ಟೇ ಮುಖ್ಯ ಅನ್ನಿಸಿ ಹಾಗೇ ಬರೆದವರು.

ಈ ತಾತ್ವಿಕತೆಯು ಆ ಲೇಖಕರುಗಳ ಶೈಲಿಯಲ್ಲೇ ಸಹಜವಾಗಿ ಪ್ರತಿಬಿಂಬಿತವಾಗಿದೆ. ಅ.ನ.ಕೃ. ಕಾದಂಬರಿ ಬರೆಯಲಿ, ಕತೆ ಬರೆಯಲಿ, ಕಲಾವಿದರ ಜೀವನ ವಿಷಯ ಬರೆಯಲಿ - ಏನೇ ಬರೆಯಲಿ ಆ ಬರಹದ ಜೊತೆಗೆ ಭಾವನಾತ್ಮಕ ಸಂಬಂಧವನ್ನು ಇರಿಸಿಕೊಂಡಿರುತ್ತಿದ್ದರು. ಅವರು ಭಾಷಣ ಮಾಡುವಾಗಲೂ ಭಾವುಕತೆಯಿಂದಲೇ ಮಾತಾಡುತ್ತಿದ್ದರು. ಅವರ ಪಾತ್ರಗಳ ಸಂಭಾಷಣೆಯು ಭಾವಪೂರ್ಣವಾದದ್ದು

(ಒಮ್ಮೊಮ್ಮೆ ಭಾವೋದ್ರೇಕದ್ದು). ಅವರ ಶೈಲಿ ರಕ್ತ-ಮಾಂಸ ತುಂಬಿದ ಸಮೃದ್ಧ ಶೈಲಿ. ನಿರಂಜನರ ಸಂಬಂಧ ಹೀಗಲ್ಲ-ಅವರು ಏನೇ ಬರೆಯಲಿ ಅದರ ಜೊತೆ ಅವರಿಗಿದ್ದದ್ದು ಬೌದ್ಧಿಕ ಸಂಬಂಧ ಮಾತ್ರ. ಅದರಿಂದಲೇ ಅವರ ಶೈಲಿ ಜರ್ನಲೀಸ್ ಆಗಿರುತ್ತದೆ (ಒಮ್ಮೊಮ್ಮೆ ಸ್ಕೆಲಿಟಲ್ ಕೂಡ!). ರಕ್ತ-ಮಾಂಸ ಇರದೆ ಶುಷ್ಕವಾಗಿರುತ್ತದೆ. ಅ.ನ.ಕೃ. ಬದುಕಿನ ಒಳಗೆ ಹೊಕ್ಕು ತನ್ಮಯವಾಗುತ್ತಾರೆ. ನಿರಂಜನರು ಪರಿಧಿಯಾಚೆಗೆ ನಿಲ್ಲುತ್ತಾರೆ. ಬದುಕಿಗೆ ಒಂದು ಬಿಂದುವಿನಲ್ಲಿ ಮಾತ್ರ ಅಂಟಕೊಂಡು.

ಭಾವನಾತ್ಮಕ ಅಂದಾಗ ಒಂದು ಸಂಗತಿ ಜ್ಞಾಪಕಕ್ಕೆ ಬರುತ್ತದೆ; (ಪ್ರಾಚೀನ ಕಾಲದಲ್ಲಿ). ಬೆಂಗಳೂರು ಬಸವನಗುಡಿಯ ಗಾಂಧಿಬಜಾರ್ ವೃತ್ತದಲ್ಲಿ ಆಗಾಗ, ಸಾರ್ವಜನಿಕ ಸಭೆಗಳಾಗುತ್ತಿದ್ದುವು. ವೃತ್ತದ ಒಂದು ಮೂಲೆಯಲ್ಲಿದ್ದ ಸರ್ಕಲ್ ಲಂಚ್‌ಹೋಂನ ಮಹಡಿಯ ಮೇಲೆ ಭಾಷಣಕಾರರ ವೇದಿಕೆ ನಿರ್ಮಾಣವಾಗುತ್ತಿತ್ತು (ಈಗ ಆ ಲಂಚ್ ಹೋಂ ಇಲ್ಲ). ಮೂಲೆಮೂಲೆಯಲ್ಲಿ ಜನರು ಕಿಕ್ಕಿರಿದು ನೆರೆಯುತ್ತಿದ್ದರು. ಒಮ್ಮೆ ಅ.ನ.ಕೃ. ಈ ವೇದಿಕೆಯ ಮೇಲಿಂದ (ರಾಜು ಗಮನಿಸುವಂತೆ) 'ಓತಪ್ರೋತ'ವಾಗಿ ಭಾಷಣ ಮಾಡುತ್ತಿದ್ದರು. ಸಂಜೆಯ ಸಮಯ. ಕತ್ತಲಾಗುತ್ತಿದೆ. ಜನರು ಮೂಕರಾಗಿದ್ದಾರೆ. ಭಾಷಣದ ನಡುವೆ ಅ.ನ.ಕೃ.ಗೆ ಒಂದು ಚೀಟಿ ಬಂತು. ಅದರ ಒಕ್ಕಣೆಯನ್ನು ಓದಿಕೊಂಡವರೇ ಅ.ನ.ಕೃ. ಭಾಷಣಾ ನಿಲ್ಲಿಸಿ ಮೌನಿಯಾದರು. ಬಳಿಕ ಸಭಿಕರನ್ನುದ್ದೇಶಿ, ಕ್ಷಮಿಸಿ, ಸುಬ್ಬಯ್ಯನಾಯ್ಡು (ನಟ) ಅವರು ತೀರಿಕೊಂಡಿದ್ದಾರೆ, ನಾನು ಹೋಗಬೇಕು ಎಂದು ಹೇಳಿ ತಕ್ಷಣ ದಾರಿ ಮಾಡಿಕೊಂಡು ಹೊರಟುಬಿಟ್ಟನು. ಆ ಸಂಗತಿಯು ಅವರ ಬರಹ ಹೇಗೋ ಹಾಗೆ ಮನಸ್ಸಿನಲ್ಲಿ ಉಳಿದುಬಿಟ್ಟಿದೆ.

ನಾನು ಕಾಲೇಜು ದಿನಗಳಲ್ಲಿ ಒಂದು ಕೈಬರಹದ ಮಾಸಪತ್ರಿಕೆ ಸಂಪಾದಿಸುತ್ತಿದ್ದೆ. ಆ ಪತ್ರಿಕೆಯ ದೀಪಾವಳಿ ಸಂಚಿಕೆಯ ಬಗ್ಗೆ ನನಗೆ ತುಂಬ ಹೆಮ್ಮೆ. ಅದನ್ನು ಅದ್ದೂರಿಯಾಗಿ ತಂದೆ. ಆ ಸಂಚಿಕೆಗೆ ಅ.ನ.ಕೃ. ಅವರಿಂದ ಮುನ್ನುಡಿ ಬರೆಸಿದ್ದೇನೆ. ಆ ಸಂಚಿಕೆಯಲ್ಲಿ ನಾನು ಬರೆದ ಚಿತ್ರ ವಿಮರ್ಶೆಯನ್ನು ಅವರು ಬಹುವಾಗಿ ಮೆಚ್ಚಿ ಒಳ್ಳೆಯ ಮಾತಾಡಿದ್ದಾರೆ.

ಈ ಹಿಂದೆ ಪ್ರಸ್ತಾಪಿಸಿದ ಮುಖ್ಯ ಪ್ರಗತಿಶೀಲ ಲೇಖಕರಾರೂ ಈಗಿಲ್ಲ. ತಲೆಮಾರುಗಳು ಮುಂದೆ ಹೋದಂತೆ ಒಂದು ದಿನ ಅವರು ಅಳಿಸಿ ಹೋಗಬಹುದು. ಇದೆಲ್ಲ ಹೇಳುವುದಕ್ಕೆ ನಾವೂ ಇಲ್ಲದಿರಬಹುದು. ಅ.ನ.ಕೃ.-ಗುಂಡಿನ ವಿಷಯ ಬಂದಿದೆ. ಗುಂಡಿರಲಿ ಬಿಡಲಿ ಅ.ನ.ಕೃ. ತುಂಬ ಎತ್ತರಕ್ಕೆ ಬೆಳೆದರು. ಸಾಹಿತ್ಯವನ್ನು ಮನೆಮನೆಗೆ ತಂದರು. ಈಗೇನು, ಲೇಖಕರಲ್ಲಿ ಗುಂಡಿಲ್ಲವೆ? ಗುಂಡಿನಲ್ಲೇ ಸಾಹಿತ್ಯ ರಚನೆ ಆಗುತ್ತದೆ, ಸಾಹಿತ್ಯ ವಿಮರ್ಶೆ ಆಗುತ್ತದೆ. ಗುಂಡಿನ ಗುಂಗಿನಲ್ಲಿ ಯಾರನ್ನು ಎಬ್ಬಿಸುವದು ಯಾರನ್ನು ಬೀಳಿಸುವದು ಎಂದು ರಾತ್ರೋರಾತ್ರಿ ನಿರ್ಧರಿಸುತ್ತಾರೆ. ಅಷ್ಟೇಕೆ, ಗುಂಡು ಎಂಬ ಪದವನ್ನು ನವ್ಯರೇ ಸೃಷ್ಟಿಸಿದ್ದು !

ಅ.ನ.ಕೃ. ಬಗೆಗೆ ಪುಸ್ತಿಕೆಗಳು ಬಂದಿವೆ. ಆದರೆ ಅವು ವಿಮರ್ಶಾತ್ಮಕವಾಗಿಲ್ಲ (ಆಮೂರರನ್ನು ಹೊರತುಪಡಿಸಿ). ಪಾಶ್ಚಾತ್ಯ ದೇಶಗಳಲ್ಲಿ ಖ್ಯಾತ ಲೇಖಕರ ಬಗೆಗೆ ಮ್ಯೂಸಿಯಂ ಅನ್ನೇ ನಿರ್ಮಿಸುತ್ತಾರೆ. ಆ ಲೇಖಕರ ಸ್ವರೂಪವನ್ನು ಅಂಥ ಮ್ಯೂಸಿಯಂಗಳು ಅಜರಾಮರವಾಗಿಸುವೆ.

ನಮ್ಮಲ್ಲಿ ಎಷ್ಟು ಜನ ಖ್ಯಾತ ಲೇಖಕರ ಬಗೆಗೆ ಇಂಥ ಮ್ಯೂಸಿಯಂಗಳಿವೆ, ಲೆಕ್ಕ ಹಾಕಿ.

ಶುಭಾಶಯಗಳು

ನಮ್ಮೆಲ್ಲರ ಪ್ರೀತಿಪಾತ್ರ ವ್ಯಕ್ತಿಯೂ ಪುಸ್ತಕಮನೆ ಪುಸ್ತಿಕೆ ಸುಂದರವಾಗಿ, ಸಮಯಕ್ಕೆ ಸರಿಯಾಗಿ ರೂಪುಗೊಳ್ಳಲು ಕಾರಣರಾದ, ಇಳಾ ಮುದ್ರಣದ ಸಿಬ್ಬಂದಿಯರಲ್ಲೊಬ್ಬರಾದ ಶ್ರೀ ಎಂ. ವೆಂಕಟೇಶ್ ಅವರು ದಿನಾಂಕ ೧೦ ಫೆಬ್ರವರಿ ೨೦೦೮ರಂದು ಗೃಹಸ್ಥಾಶ್ರಮಕ್ಕೆ ಕಾಲಿಡುತ್ತಿದ್ದಾರೆ. ಅವರಿಗೆ ಶುಭ ಕೋರಲಾಗುತ್ತದೆ.

ಸಂಪಾದಕ

೧೦

ಆರ್ಕೆ : ಸಮಾಜವಾದಿ ವಿಮರ್ಶೆಯ ಮಾದರಿ

ಬಿ.ಎಸ್. ಚಂದ್ರಶೇಖರ್

ವಿಮರ್ಶೆಯ ಜವಾಬ್ದಾರಿ ದೊಡ್ಡದು. ಕೃತಿಯನ್ನು ಆಮೂಲಾಗ್ರವಾಗಿ ಗ್ರಹಿಸಬೇಕು. ಕೃತಿ ರಚನೆಯ ದೇಶಕಾಲಗಳನ್ನೂ, ಸಾಮಾಜಿಕ ಸ್ಥಿತಿಗತಿಗಳನ್ನೂ ಕಣ್ಣೆದುರು ಇರಿಸಿಕೊಂಡೇ ವರ್ತಮಾನದ ದೃಷ್ಟಿಯಿಂದ ಅದರ ಬೆಲೆ ಕಟ್ಟಬೇಕು. ಸಾಹಿತ್ಯಪರಂಪರೆಯಲ್ಲಿ ಒಟ್ಟಾರೆ ದೃಷ್ಟಿಯಿಂದ ಕೃತಿಯ ಸ್ಥಾನವೇನೆಂಬುದನ್ನು ನಿಷ್ಕರ್ಷಿಸಬೇಕು. ಪೂರ್ವಾಗ್ರಹವಿಲ್ಲದೆ ಕೃತಿಯ ಗುಣಾವಗುಣಗಳನ್ನು ಗುರುತಿಸಿ ಪ್ರಕಟಿಸಬೇಕು. ವಿಮರ್ಶಾ ಲೇಖನಗಳ ಸಂಕಲನವಾದ ಈ ಕೃತಿಗೆ ಆರ್ಕೆ ಮಣಿಪಾಲ ಅವರು ನೀಡಿರುವ 'ವಿಮರ್ಶೆಯ ಸವಾಲು' ಎಂಬ ಶೀರ್ಷಿಕೆಯಿಂದಲೇ ಅವರ ದೃಷ್ಟಿಕೋನವು ಸ್ಪಷ್ಟವಾಗಿ, ಮೆಚ್ಚುಗೆಗೆ ಅರ್ಹವಾಗುತ್ತದೆ.

ಸಮಕಾಲೀನ ವಿಮರ್ಶಾ ಕ್ಷೇತ್ರದ ಪ್ರಮುಖರಲ್ಲಿ ಒಬ್ಬರಾಗಿದ್ದು, ಮುಖ್ಯವಾಗಿ ಸಮಾಜವಾದಿ ನಿಲುವಿನಿಂದ ಕೃತಿಗಳ ಹೂರಣವನ್ನು ಹೊರಗೆಳೆಯುವುದರಲ್ಲಿ ನಿರತರಾಗಿರುವ ಆರ್ಕೆ ಮಣಿಪಾಲ ತಮ್ಮ ಎರಡು ದಶಕಗಳ ವಿಮರ್ಶಾ ಲೇಖನಗಳಲ್ಲಿ ಹಲವನ್ನು ಆಯ್ದು ಕೃತಿಯ ಒಡಲನ್ನು ತುಂಬಿದ್ದಾರೆ. ಇಲ್ಲಿ ಒಟ್ಟು ೩೬ ಲೇಖನಗಳಿದ್ದು ಇವು ಪರಿಚಯಾತ್ಮಕವಾಗಿರದೆ ವಿಶ್ಲೇಷಣಾತ್ಮಕ ಶೈಲಿಯವೇ ಆಗಿವೆ. ಆದ್ದರಿಂದ ಇಲ್ಲಿ ಪ್ರಸ್ತಾಪಿಸಲಾಗಿರುವ ಕೃತಿಗಳ ಪರಿಚಯವುಳ್ಳ ಸಾಹಿತ್ಯಜೀವಿಗಳಾದ ಪ್ರೌಢ ಓದುಗವರ್ಗವನ್ನು ಲಕ್ಷ್ಯದಲ್ಲಿರಿಸಿಕೊಂಡೇ ಚರ್ಚೆ, ವಿಮರ್ಶೆಗಳನ್ನು ಮಂಡಿಸಲಾಗಿದೆ. ಇಲ್ಲಿಯ ಹಲವು ಬರಹಗಳ ವ್ಯಾಪ್ತಿಯೂ ವಿಶಾಲವೇ - ಉದಾ: ಬಂಡಾಯ ಕತೆಗಳು ಮತ್ತು ದಲಿತ ಬಂಡಾಯ ಕಾದಂಬರಿಗಳನ್ನು ಸಮೀಕ್ಷಿಸುವ ಲೇಖನಗಳು, ಮಹಿಳಾ ಪ್ರಜ್ಞೆ ಮತ್ತು ಕಾವ್ಯ, ಪ್ರಗತಿಶೀಲ ಸಾಹಿತ್ಯದ ಸ್ಥೂಲ ಚಿತ್ರ, ಇತ್ಯಾದಿ. ಮತ್ತೆ ಕೆಲವು ಲೇಖನಗಳು ಕೃತಿಯ ಒಡಲನ್ನು ಬಗೆಯುವಂಥದು - ಉದಾ: 'ಸಿಂಗಾರೆವ್ವ'ದ ತಾತ್ತ್ವಿಕತೆಯ ಸ್ವರೂಪ, 'ಅಳಿದ ಮೇಲೆ' - ಅರ್ಥ-ಪರಮಾರ್ಥದ ದ್ವಂದ್ವ ವಿನ್ಯಾಸ, ಕನಕನ ಲೋಕಗ್ರಹಿಕೆ, ಇತ್ಯಾದಿ.

ಇವುಗಳಲ್ಲದೆ ಚಂಪಾ, ಶಾಂತಿನಾಥ ದೇಸಾಯಿ, ಕಾರಂತ, ಲಂಕೇಶ್, ಡಿ.ಆರ್. ನಾಗರಾಜ್, ಪೋಲಂಕಿ ಮುಂತಾದವರ ಚಿಂತನೆಗಳನ್ನೂ, ವಿಮರ್ಶಾ ದೃಷ್ಟಿಕೋನಗಳನ್ನೂ ವಿವಿಧ ರೀತಿಗಳಲ್ಲಿ ಪರಿಚಯಿಸುವ ಬರಹಗಳು ಇಲ್ಲಿವೆ. 'ಉಳಿಮುಟ್ಟಿದ ಲಿಂಗವ ಮನ ಮುಟ್ಟಬಲ್ಲುದೆ?' ಎಂಬ ಅಲ್ಲಮನ ವಾಣಿಯನ್ನು ನೆನಪಿಸುತ್ತಾ ಲೇಖನಗಳನ್ನು ಮುಂದಿಡಲಾಗಿದೆ. ಆರ್ಕೆಯವರ ಚಿಂತನೆಗಳನ್ನು, ಒಳನೋಟಗಳನ್ನು ದಕ್ಕಿಸಿಕೊಳ್ಳಲು ಅಗತ್ಯವಾದ ಗಟ್ಟಿತನವನ್ನು ಸೂಚಿಸಲು ಇಷ್ಟು ಹಿನ್ನೆಲೆ.

ಆರಂಭದ ಲೇಖನದಲ್ಲಿ (ಗೋವಿಂದಯ್ಯ ಅವರ "ಅ, ಆ ಮತ್ತು....") ಆರ್ಕೆಯವರ ದೃಷ್ಟಿಯಲ್ಲಿ ಅತ್ಯಂತ ಬಿಗಿಯಾದ, ಕಲಾತ್ಮಕ ಸೃಷ್ಟಿಯಾದ ಗೋವಿಂದಯ್ಯನವರ ಒಂದು ಕವಿತೆಯ ಸುದೀರ್ಘ ವಿಶ್ಲೇಷಣೆಯಿದೆ. ಬಂಡಾಯ ಲೇಖಕನಿಗಿರಬೇಕಾದ ಸಾಮರ್ಥ್ಯ ಮತ್ತು ಕಲೆಯ ಎಲ್ಲ ಸೂಕ್ಷ್ಮತೆಗಳನ್ನೂ, ನಾಜೂಕುಗಳನ್ನೂ ಸಾಧಿಸಿಕೊಂಡಿರಬೇಕಾದ ಅಗತ್ಯವನ್ನು ಪ್ರಸ್ತಾಪಿಸುತ್ತಾ ಬರಹ ಕೊನೆಗೊಂಡಿದೆ. ಆದರೆ, ಲೇಖನದಲ್ಲಿ ಬಿಡಿಸಿ ಬಿಡಿಸಿ ಹೇಳಿರುವಂಥ, ಕಲೆಯ ಈ ಸೂಕ್ಷ್ಮಗಳನ್ನು, ನಾಜೂಕುಗಳನ್ನು ಗ್ರಹಿಸುವಷ್ಟು ವ್ಯವಧಾನ ಇಂದಿನ ಓದುಗನಿಗಿದ್ದೀತೆ? ಎಂಬ ಪ್ರಶ್ನೆ ಉಳಿಯುತ್ತದೆ. 'ಈಚಿನ ಕನ್ನಡ ಕಾವ್ಯ-ವಸ್ತು : ಸಂವೇದನೆ' ಲೇಖನದಲ್ಲಿ ಮೂರು ದಶಕದ ಕನ್ನಡ ಕಾವ್ಯವನ್ನು ಕುರಿತ ಗಂಭೀರ ಚಿಂತನೆಯನ್ನು ಕಾಣಬಹುದು. ಕನ್ನಡ ಕಾವ್ಯದ ಇತಿಹಾಸದ ದೃಷ್ಟಿಯಿಂದ ೭೦ರ ದಶಕವನ್ನು ಸಂಘರ್ಷ-ಹೋರಾಟಗಳದ್ದು, ೮೦ರ ದಶಕ ವಿವಾದ-ಸಾಮರಸ್ಯಗಳದ್ದು, ೯೦ರ ದಶಕ ಚ್ಯುತಿ-ದ್ರೋಹಗಳದ್ದು ಎಂದು ಸಕಾರಣವಾಗಿ ವಿಶ್ಲೇಷಿಸಲಾಗಿದೆ. ನವ್ಯದಲ್ಲಿ ಜನವಿಮುಖಿಯಾಗಿದ್ದ ಕಾವ್ಯ, ತಿರುಮಲೇಶರ 'ಮುಖಾಮುಖಿ' (೧೯೭೭)ಯಿಂದೀಚೆಗೆ ಧ್ವನಿಸೂಕ್ಷ್ಮತೆಯನ್ನು ಉಳಿಸಿಕೊಂಡಿದ್ದರೂ, ಸರಳವೂ ಆಗಿದ್ದು ತಾಂತ್ರಿಕತೆಯನ್ನು ಮೀರಿ ಜನಮುಖಿಯಾಗಿದೆ - ಎಂದು ಲೇಖಕರು ಸೋದಾಹರಣವಾಗಿ ಗುರುತಿಸಿದ್ದಾರೆ. ನವ್ಯದ ಜಾಡನ್ನೇ ಹಿಡಿದ ಸಮಕಾಲೀನ ಲೇಖಕರಲ್ಲಿ ಕೆಲವರು ಈಚಿನ ರಚನೆಗಳ ಪರಿಣಾಮಕಾರಿತ್ವವನ್ನು ಮನಗಾಣದೆ

ಸತ್ವಹೀನವಾದ ರಚನೆಯಲ್ಲಿ ತೊಡಗಿದ್ದು ಮತ್ತೆ ಕೆಲವರು ನಡುಗನ್ನಡ ಲಯಕ್ಕೋ, ಸಂಸ್ಕೃತದ ಅಥವಾ ಇಂಗ್ಲೀಷಿನ (ಎಂದೂ ಸಕಾಲಿಕವಾಗದ) ಅನುವಾದಕ್ಕೆ ಮರಳುತ್ತಿರುವುದು ಏನನ್ನು ಸೂಚಿಸುತ್ತದೆ? ಎಂದು ಪ್ರಶ್ನಿಸಿ ಚಿಂತನೆಗೆ ಹಚ್ಚುವ ಲೇಖನವು ಕಥನ-ಜನಪದ ಮತ್ತು ಹಾಡಿನ ಪರಂಪರೆಯ ಕಡೆ ಮುಖಮಾಡಿಕೊಂಡಿರುವುದರತ್ತ ಗಮನ ಸೆಳೆಯುತ್ತದೆ. ಈಚೆಗೆ ಬರುತ್ತಿರುವ ಮಕ್ಕಳ ಕವಿತೆಗಳು ಕೇವಲ ಮಕ್ಕಳ ಕವಿತೆಗಳೇ ಆಗಿ ಉಳಿದಿಲ್ಲದಿರುವುದನ್ನು ಬೊಟ್ಟು ಮಾಡಿ ಚಿಂತೆಗೆ ಹಚ್ಚುತ್ತದೆ. ಮೂರು ದಶಕಗಳ ಕಾವ್ಯದ ಹರಹನ್ನು ವೀಕ್ಷಿಸುತ್ತ ಹೇಳುವಂಥ ಯಾವುದೇ ಬರವಣಿಗೆಯೂ ಕಾಣದಿರುವ ಈ ಸ್ಥಿತಿಯು ಸಾಮಾಜಿಕವಾದ ಭಾಷೆಯ ಮೂಲಕ ಸ್ವಂತ ಅನುಭವದ ಸಂವಹನಕ್ಕಾಗಿ ಶ್ರಮಿಸುವುದು ನಮ್ಮ ಕವಿಗ ಕಾಳಜಿಯಾಗಲೆಂಬ ಹಾರೈಕೆಯೊಡನೆ ಲೇಖನ ಮುಕ್ತಾಯಗೊಂಡಿದೆ.

ಕನ್ನಡ ಕಾವ್ಯದಲ್ಲಿ ಮಹಿಳಾ ಪ್ರಜ್ಞೆ ಎಚ್ಚರಗೊಂಡಿರುವ ರೀತಿಯನ್ನು (ಮಹಿಳಾ ಪ್ರಜ್ಞೆ ಮತ್ತು ಕಾವ್ಯ ಕವಿತೆಯ ಸಾಲುಗಳನ್ನು ಉಲ್ಲೇಖಿಸುತ್ತಾ ವಿಶ್ಲೇಷಿಸುವುದು ಚೆನ್ನಾಗಿದೆ. ಮಹಿಳೆಯರ ಬದುಕಿನ ಸೂ ಅನುಭವಗಳನ್ನು ಸಂಪಾದಿಸಿ ಸಮಗ್ರ ಸ್ತ್ರೀತ್ವದ ಪ್ರಜ್ಞೆಯನ್ನು ಶೋಧಿಸುವುದರಿಂದ ಮಹಿಳೆಯರ ವ್ಯಕ್ತಿತ್ವ ವಿಕಸನ ಸಾಧ್ಯವೆನ್ನುವ ಮಾತು ಒಪ್ಪಬಹುದಾಗಿದ್ದು–ಅಂಥ ಶೋಧನೆಯ ಮಾದರಿಯನ್ನು ಈ ಲೇಖನದಲ್ಲಿ ಕಾಣಿಸಲಾಗಿದೆ.

ಬಂಡಾಯ ಕೃತಿಗೆ ಉಳಿದ ಪರಂಪರೆಯ ಕೃತಿಗಳಿಗಿಂತ ಹೆಚ್ಚಿನ 'ಸಿದ್ಧತೆ' ಅಗತ್ಯ ಎನ್ನುತ್ತಾ ನವ ಪರಂಪರೆಯ ಸೂಕ್ಷ್ಮವೂ ದ್ವಂದ್ವಾತ್ಮಕವೂ ಆದ ಒಟ್ಟು ಪರಾಮರ್ಶೆಯ ಪ್ರಯತ್ನಗಳ ಅಪರೂಪವಾಗಿಯಾದರೂ ಆಗಿರುವುದನ್ನು ಗಮನಿಸಿ ಆಶಾಭಾವನೆ ಪ್ರಕಟಿಸುತ್ತಾ ಲೇಖಕರು ಬಂಡಾಯ ಚಳುವಳಿಯ ಎರಡು ಮುಖ್ಯ ಪ್ರಭಾವಗಳನ್ನು ಗುರುತಿಸಿರುವುದು ಗಮನಾರ್ಹ :

i) ದಲಿತರಿಗೆ ಬಾಯ್ಬಿಡುವ ಧೈರ್ಯ ನೀಡಿದ್ದು,

ii) ಪ್ರತಿಷ್ಠಿತ ನವ್ಯ ಲೇಖಕರೂ ಸಮಾಜಮುಖಿ ಧೋರಣೆ ತಳೆಯಬೇಕಾದ ಜರೂರನ್ನು ಮನಗಾಣಿಸಿದ್ದು.

ದಲಿತ ಸಾಹಿತ್ಯ ಹಾಗೂ ಸ್ತ್ರೀಸಂವೇದಿ ಸಾಹಿತ್ಯ ಕೃತಿಗಳನ್ನೂ ಪರಿಶೀಲಿಸಿ ಅವರ ಇತಿಮಿತಿಗಳನ್ನೂ ಶಕ್ತಿ ದೌರ್ಬಲ್ಯಗಳನ್ನೂ ಗುರುತಿಸುವ ಸ್ತುತ್ಯ ಪ್ರಯತ್ನವೂ ಇಲ್ಲಿದೆ. ಸಮಕಾಲೀನ ಕಥಾ ಸಾಹಿತ್ಯದ ಸ್ಥೂಲ ನೋಟ ನೀಡುತ್ತಾ ಪ್ರಮುಖ ಲೇಖಕರ ಕೊಡುಗೆಗಳನ್ನೂ, ವೈಶಿಷ್ಟ್ಯಗಳನ್ನೂ ಇಲ್ಲಿ ಎತ್ತಿ ತೋರಲಾಗಿದೆ ಉದಾ: i) ನಮ್ಮ ಸಮಾಜದಲ್ಲಿ ಎರಡನೇ ದರ್ಜೆಯ ಪೌರರಾಗಿಬಿಟ್ಟಿರುವ ಮುಸ್ಲಿಮರ, ಅದರಲ್ಲೂ ಮುಸ್ಲಿಂ ಮಹಿಳೆಯರ, ಶೋಷಣೆಯ ವಿವಿಧ ಬಗೆಗಳನ್ನು ಪರಿಚಯಿಸುವ ಫಕೀರ್ ಮಹಮ್ಮದ್ ಕಟ್ಪಾಡಿಯವರ ಕೆಲವು ಕತೆಗಳು (ಅಪ್ಪ, ನೋಂಬು, ಮುಸುಕು) ಮುಸ್ಲಿಂ ಸಮುದಾಯದ ಬಗೆಗಿನ ಹಿಂದೂಗಳ (ಕಲುಷಿತ ಮನಸ್ಸನ್ನು ಕಲಕುವಷ್ಟು ಶಕ್ತವಾಗಿದೆ. ii) 'ಕಿರಿಗೂರಿನ ಗಯ್ಯಾಳಿಗಳು' ಮೂಲಕ ಪೂರ್ಣಚಂದ್ರ ತೇಜಸ್ವಿ ಕ್ಲೀಷೆಯಾಗಿ ಬಿಟ್ಟಿರುವ ಮಹಿಳಾವಾದಕ್ಕೆ ಗ್ರಾಮೀಣ ಒರಟುತನದ ಆಯಾಮವನ್ನು ಜೋಡಿಸಿದ್ದಾರೆ (ಈಚಿನ ಸಣ್ಣ ಕತೆಗಳು).

ದಲಿತ ಲೇಖಕರಲ್ಲೇ ಒಂದು ಗುಂಪು ಬಂಡಾಯದೊಳಗೆ ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ಉಳಿಸಿಕೊಳ್ಳಲು ತೊಡಗಿದ ಅರಾಜಕ ಪ್ರವೃತ್ತಿಯ ಪರಿಣಾಮವೇ ದಲಿತ ಬಂಡಾಯ. ದಲಿತ ಬಂಡಾಯ ಕೃತಿಗಳು ಇತರ ಕೃತಿಗಳಿಂದ ಹೇಗೆ, ಎಷ್ಟರಮಟ್ಟಿಗೆ ಭಿನ್ನ? ಎಂಬ ಪ್ರಶ್ನೆಗಳಿಂದಲೇ ತೊಡಗಿ ದಲಿತ ಬಂಡಾಯ ಕಾದಂಬರಿಗಳ ಚರ್ಚೆ ಆರಂಭಿಸುವ ಶೈಲಿ ಆಕರ್ಷಕವಾಗಿದೆ. ಕುಸುಮಬಾಲೆಯ ಸಂವಹನಾ ಶೂನ್ಯತೆಗೇ ಒತ್ತುಕೊಟ್ಟ ಕುತರ್ಕದಿಂದ ಕೃತಿಯ ಮೇಲೆ ಆರೋಪ ಹೊರಿಸುತ್ತಾ ಚರ್ಚೆಯ ದಿಕ್ಕು ತಪ್ಪಿರುವುದನ್ನು ವಿಷಾದದಿಂದ ಗುರುತಿಸುವ ಆರ್‍ಕೆ 'ಒಡಲಾಳ'ದ ಸಾರ್ಥಕತೆಯನ್ನೂ ಅಂಥ ಇತರ ಕೃತಿಗಳಿಗೆ ಅದು ಮುಟ್ಟುಗೋಲಾದುದನ್ನೂ ತಪ್ಪದೆ ದಾಖಲಿಸುತ್ತಾರೆ.

'ವಿಮರ್ಶೆಯ ಸವಾಲು' ಎಂಬ ಶೀರ್ಷಿಕ ಲೇಖನವು ವಿಮರ್ಶೆ-ಮುಖ್ಯವಾಗಿ ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆ-ಎದುರಿಸುತ್ತಿರುವ ಸಂದಿಗ್ಧತೆ-ಆತಂಕಗಳನ್ನು ಕುರಿತು ಚಿಂತಿಸುವಂತೆ ಮಾಡುತ್ತ

ನವೋದಯ, ನವ್ಯ, ನವ್ಯೋತ್ತರ (ದಲಿತ-ಬಂಡಾಯ) ಎಂಬ ಮೂರು ಪಂಥಗಳ ವಿಮರ್ಶೆಯ ವಿಶಿಷ್ಟ ಆಶಯಗಳನ್ನೂ ಪರಿಭಾಷೆಯನ್ನೂ ಪರಿಚಯಿಸುವ ಬೋಧಪ್ರತ ಬರವಣಿಗೆ ಇದು.

ಸಮಕಾಲೀನ ವಿಮರ್ಶೆ ಕೃತಿಕಾರನಿಗೆ ನ್ಯಾಯ ಒದಗಿಸೀತೇ? ಸಾಹಿತ್ಯವನ್ನು ಜಾತಿವಾರು ವಿಭಜಿಸುವ ಪ್ರವೃತ್ತಿ ಬೆಳೆದರೆ ಗತಿಯೇನು? ಸಾಹಿತಿಯ 'ವಿನಯ'ವೇನೋ ಸರಿ, ಅದನ್ನು ಗ್ರಹಿಸುವ 'ವಿಮರ್ಶಕನ ವಿನಯ'ವು ವಿಮರ್ಶೆಯಲ್ಲಿ ಎಷ್ಟರಮಟ್ಟಿಗೆ ಪ್ರಕಟವಾಗಿದೆ? ಕೃತಿಯನ್ನು ಕುರಿತ ಇಬ್ಬರು ವಿಮರ್ಶಕರ ತೀರ್ಮಾನಗಳಲ್ಲಿ ಧ್ರುವಗಳಷ್ಟು ಭಿನ್ನತೆ ಇದ್ದರೆ ಹೇಗೆ ? ವಿಭಿನ್ನ ಸೈದ್ಧಾಂತಿಕ ನಿಲುವುಗಳು ಮತ್ತು ಅವುಗಳ ನಡುವಿನ ಸಂಘರ್ಷ ವಿಮರ್ಶೆಯಲ್ಲಿ ಎದುರಾಗುವ ನಿತ್ಯ ಸವಾಲು. ಆದರೆ ಕೃತಿಕಾರ ಬಯಸುವುದು ಮಾತ್ರ 'ಮುಡಿದ ಘೋಗಿ'ಗಳನ್ನೇ! ವಿಮರ್ಶಕನಿಗೆ ನಮ್ಮ ಸಾಂಸ್ಕೃತಿಕ ಪರಂಪರೆಯ ಹಿನ್ನೆಲೆ ತಿಳಿಯದಿದ್ದರೆ ವಿಮರ್ಶೆ ಸೋಲಬಹುದು. ಇನ್ನು ಬುದ್ಧಿಜೀವಿಗಳನ್ನು ಮರಳು ಮಾಡುವ ಪ್ರಶಸ್ತಿ, ಪ್ರಕಟನೆ, ಸದಸ್ಯತ್ವ ಮುಂತಾದ ಶಸ್ತ್ರಗಳಿಂದ ವಿಮರ್ಶಕ ಹೇಗೆ ಪಾರಾದಾನು? ಹಾಗೇ-ಕೇವಲ ಜನಪ್ರಿಯತೆಯನ್ನೂ ವ್ಯಾಪಾರೀ ದೃಷ್ಟಿಯನ್ನೂ ಮುಂದುಮಾಡಿಕೊಂಡಿರುವ ಪತ್ರಿಕೆಗಳಿಂದ ನಿಜವಾದ ವಿಮರ್ಶೆ ಬೆಳಗುತ್ತದೆಯೇ? ಇಂಥ ಪತ್ರಿಕೆಗಳಲ್ಲಿ ಪ್ರಕಟವಾಗುವ ವಿಮರ್ಶೆಯಿಂದ ಸಾಮೂಹಿಕ ಪ್ರಜ್ಞೆ ಬೆಳೆದೀತೇ? ಎಷ್ಟೊಂದು ಪ್ರಶ್ನೆಗಳು! ವಿಮರ್ಶೆ ನಿಜವಾಗಿಯೂ ಸವಾಲೇ.

ಓದುತ್ತಾ ಹೋದಂತೆ ಸಾಹಿತ್ಯ ಕೃತಿಗಳು, ಕೃತಿಕಾರರ ಬಗೆಬಗೆಯ ಚಿತ್ರಗಳನ್ನು ಕೃತಿ ಕಟ್ಟಿಕೊಡುತ್ತಲೇ ಹೋಗುತ್ತದೆ. ಅತಿಯಾದ ಗೇಲಿ, ವಿಡಂಬನೆಗಳಿಂದ ವಾಚಾಳಿತನದ ದೋಷದೆಡೆಗೆ ಹೊರಳುವ, ಒಮ್ಮೊಮ್ಮೆ ಸದಭಿರುಚಿಯ ಚೌಕಟ್ಟನ್ನು ಮೀರುವ (ತಮ್ಮ) ಕಾವ್ಯಕ್ಕಿಂತ ತಮ್ಮ ನಾಟಕಗಳನ್ನು ಕಾವ್ಯಗುಣದಿಂದ ಜೀವಂತವಾಗಿಸಿದ 'ಚಂಪಾ'; ಪ್ರಗತಿಪರ ಲೇಖಕರನ್ನು ಸಂದೇಹಿಸಿ ಲೇವಡಿಯಿಂದ ಪ್ರತಿಕ್ರಿಯಿಸುತ್ತಿದ್ದ ಮತ್ತು ನವ್ಯಕಾಲದವರ ಗುಂಪುಗಾರಿಕೆಯನ್ನು ಮುಂದುವರೆಸಿದ ಲಂಕೇಶ್, ಯಾವುದೇ ಸಾಮೂಹಿಕ ಹೋರಾಟದಲ್ಲಿ ಕಾರ್ಯಕರ್ತರೊಂದಿಗೆ ಭಾಗಿಯಾಗದ ವೈದೇಹಿ, ಮಾರ್ಕ್ಸ್‌ನ ಪರಿಭಾಷೆಯನ್ನು ಅನಾಮತ್ತಾಗಿ ಕನ್ನಡಿಸಿದ ಹಾಗೂ ವಿದೇಶೀ ಧನದ ಜಾಲಕ್ಕೆ ಬಲಿಬಿದ್ದ, ಅರಳುವ ಮೊದಲೇ ಕಮರಿಹೋದ ಗಾಢ ಅಧ್ಯಯನಶೀಲತೆಯ ಡಿ.ಆರ್. ನಾಗರಾಜ್; 'ನನ್ಗೆ ಅನುಭವ ಮುಖ್ಯ-ಟೆಕ್ನಿಕ್ ಅಲ್ಲ' - 'ನಾವು ಸಾಹಿತಿಗಳು ಕಲಾವಿದರಾದರೂ ಕೂಡಾ ನಾವು ಮನುಷ್ಯರೇ. (ಅಮವಾಸ್ಯೆ ಹುಣ್ಣಿಮೆಗೆ ಕತೆ ಬರೆದ ಕೂಡ್ಲೆ ನಾವು ಬೇರೆ ಮನುಷ್ಯರಾಗೊಲ್ಲ)' ಎನ್ನುವ ಕಾರಂತ - ಹೀಗೆ ಹಲವು ಚಿತ್ರಗಳನ್ನು ಸ್ಪಷ್ಟವಾಗಿ ಕಟ್ಟಿಕೊಡುವಲ್ಲಿ ಈ ಕೃತಿ ಯಶಸ್ವಿಯಾಗಿದೆ ಎನ್ನಬೇಕು.

ಈ ಪುಸ್ತಕದ ಒಡಲಲ್ಲಿ ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಹರಾಯ', ಕಾರಂತರ 'ಅಳಿದ ಮೇಲೆ' 'ಮೈಮನಗಳ ಸುಳಿಯಲ್ಲಿ', 'ಹೊಸ ಒಲವಿಗೆ ಕುರುಡಾದ ಅಕ್ಷರ ಹೊಸ ಕಾವ್ಯ', ತೇಜಸ್ವಿಯವರ ಕರ್ವಾಲೋ, (ಸಿ. ವೀರಣ್ಣ ಅವರ) ಕನ್ನಡ ಸಾಹಿತ್ಯ-ಚಾರಿತ್ರಿಕ ಬೆಳವಣಿಗೆ-೧, 'ಶಾಂತಿನಾಥ ದೇಸಾಯಿಯವರ ವಿಮರ್ಶೆ' ಇವುಗಳನ್ನು ಒಳಗೊಂಡಂತೆ ಅನೇಕ ಕೃತಿಗಳ ಪ್ರೌಢ ವಿಮರ್ಶೆಯಿದೆ. ವಿಸ್ತಾರ ಗಾತ್ರ ಭಯದಿಂದ ಮಹತ್ವದ್ದೆಂದು ನನಗೆ ತೋರಿದ ಈ ನಾಲ್ಕು ಲೇಖನಗಳನ್ನು ಮಾತ್ರ ಇಲ್ಲಿ ಪ್ರಸ್ತಾಪಿಸಬಯಸುತ್ತೇನೆ : i) ಅನಂತಮೂರ್ತಿ ಅವರ 'ಭವ' ii) 'ಸಿಂಗಾರೆವ್ವ'ದ ತಾತ್ತ್ವಿಕತೆ iii) ದೇವನೂರರ ಕತೆ ಕಾದಂಬರಿಗಳು - ಆಶಯ ಮತ್ತು ವಿನ್ಯಾಸ iv) ಕನಕ ಲೋಕಗ್ರಹಿಕೆ.

'ಭವ ಕಾದಂಬರಿಯಲ್ಲಿ ಮೂರು ತಲೆಮಾರಿನ ವ್ಯಕ್ತಿಗಳ ಅನುರಕ್ತಿ ವಿರಕ್ತಿ ಬೆಳೆಯುವ ಸಂಗಮ ಸ್ಥಾನವನ್ನು ಶೋಧಿಸಲಾಗಿದೆ'ಯೆಂದೂ, 'ಸಂಸಾರ ನಿರ್ವಾಣಗಳ ನಡುವೆ ವ್ಯತ್ಯಾಸವೇ ಇಲ್ಲವೆಂಬ ಘನವಾದ ಬೌದ್ಧ ದಾರ್ಶನಿಕ ಸತ್ಯವನ್ನು ತೀರಾ ಆಕರ್ಷಕವಾಗಿ ಲೌಕಿಕ ರೀತಿಯಲ್ಲೇ ಕಾದಂಬರಿಯು ಮಂಡಿಸುತ್ತದೆ' ಎಂದೂ ಡಿ.ಆರ್. ನಾಗರಾಜ್ 'ಭವ'ದ ಬೆನ್ನುಡಿಯಲ್ಲಿ ಹೇಳಿದ್ದಾರೆ. ಆದರೆ 'ಭವ'ದ ತೀವ್ರ ಇತಿಮಿತಿಗಳನ್ನು ಗುರುತಿಸುವ ಅರ್ಕೆ 'ಕೇಂದ್ರ ಪಾತ್ರವಾದ ದಿನಕರನ ಪ್ರಜ್ಞೆಯಿಂದ ಸಮಸ್ಯೆಗಳನ್ನು ಶೋಧಿಸ ಹೊರಡುವುದರಿಂದ ಏಕಮುಖಿ ದೃಷ್ಟಿಕೋನವಿದ್ದು ಕಾದಂಬರಿಕಾರನ ಪೂರ್ವಾಗ್ರಹವು ಕೃತಿಯಲ್ಲಿ ಪ್ರಾಬಲ್ಯ ಪಡೆದುಕೊಳ್ಳುತ್ತದೆಂದೂ 'ಭವ'ದಲ್ಲಿ 'ಆಗುವ' ಕ್ರಿಯೆಯು ಉಲ್ಲೇಖವಿದ್ದರೂ ಅದು ಕಾದಂಬರಿಯ ಕೇಂದ್ರ ಆಶಯವಾಗಿಲ್ಲ ಎಂದೂ ಅಭಿಪ್ರಾಯ ಪಡುತ್ತಾರೆ.

'ಆಗುತಿರುವ' ಮತ್ತು 'ಆಗದೆ' 'ಇರುವು'ದರಲ್ಲೇ ತೃಪ್ತರಾಗುವ ಪಾತ್ರಗಳ ಭವವಾಸನೆಯೇ

ಮೇಲುಗೈಯಾಗಿದ್ದು ನಮ್ಮ ಸಂಸ್ಕೃತಿಯ 'ಒಳ ವಿಮರ್ಶೆ'ಯ ಗುಣ ಕಾದಂಬರಿಯಲ್ಲಿ ಗೈರುಹಾಜರಾಗಿದೆ. (ಹೆಣ್ಣನ್ನು ಕಾಮದ ಸರಕಾಗಿ, ಯೋನಿಯಾಗಿ ಮಾತ್ರ ಕಲ್ಪಿಸಲಾಗಿರುವುದು ಭಾರತೀಯ ಸಂಸ್ಕೃತಿಯಲ್ಲಲ್ಲ- ಅನಂತಮೂರ್ತಿ ತಿಳಿದಿರುವ 'ಸಂಸ್ಕೃತಿ'ಯಲ್ಲಿ). ಹೀಗಾಗಿ ಕಾದಂಬರಿಯ ಆಶಯ ಪ್ರತಿಗಾಮಿಯಾಗಿದೆ. ಇಂಗ್ಲೀಷಿನ ಚಿಂತನಾಕ್ರಮವನ್ನು ಕನ್ನಡಕ್ಕೆ ತರ್ಜುಮೆ ಮಾಡುವ ಬಗೆಯ ಬರಹ, ಜೊತೆಗೆ ಕಾದಂಬರಿಕಾರರು ಪ್ರತಿನಿಧಿಸುವ ವಿಚಾರ ಪ್ರಣಾಲಿಯ ಔಚಿತ್ಯವನ್ನೂ ಲೇಖನವು ಪ್ರಶ್ನಿಸುತ್ತದೆ. ಒಂದು ಸಣ್ಣ ಕತೆಯ ಹರಹು ಉಳ್ಳ ಸಾಮಾನ್ಯ ಕಾದಂಬರಿ 'ಭವ'ವನ್ನು ಕುರಿತು ಬೆನ್ನುಡಿಯಲ್ಲಿ ದೊಡ್ಡ ಮಾತುಗಳನ್ನು ಬರೆದ ಡಿ.ಆರ್. ನಾಗರಾಜರನ್ನು 'ಸಾಹಿತ್ಯಕ ಸಾಮ್ರಾಜ್ಯಶಾಹಿಯ ದುಷ್ಟವ್ಯೂಹದ ಏಜೆಂಟ್' ಎಂದು ಚುಚ್ಚದೆ ಬಿಡುವುದಿಲ್ಲ ಆರ್ಕೆ!

'ಸಿಂಗಾರೆವ್ವ'ದ ತಾತ್ತ್ವಿಕತೆಯ ಸ್ವರೂಪವನ್ನು ಚರ್ಚಿಸುವ ಲೇಖನದಲ್ಲಿ ಹಲವು ಮುಖ್ಯ ಸಂಗತಿಗಳನ್ನು ಕುರಿತ ಗಾಢ ಚಿಂತನೆಯನ್ನು ನೋಡಬಹುದು. ಭಗ್ನವಾಗುತ್ತಿರುವ ಊಳಿಗಮಾನ್ಯ ಚೌಕಟ್ಟಿನ ಹಂದರದ ಸರಳೀಕೃತ ಧಾಟಿಯ ಕೃತಿಗಳ ಹಿನ್ನೆಲೆಯಲ್ಲಿ, 'ಗ್ರಾಮಾಯಣ'ದ ಪರಂಪರೆಯ ಕೃತಿಗಳ ಹಿನ್ನೆಲೆಯಲ್ಲಿ ಕಂಬಾರರ 'ಸಿಂಗಾರೆವ್ವ'ವನ್ನು ತೂಗಿ ನೋಡುವ ಪ್ರಯತ್ನದಲ್ಲೇ ಕಂಬಾರರ ತಾತ್ತ್ವಿಕ ಕಾಳಜಿಗಳು, ನವ್ಯ ಸಾಹಿತ್ಯದ ಪ್ರಮುಖ ನೆಲೆಯಾದ ದೇಹ-ಮನಸ್ಸಿನ ನಡುವಣ ಬಿರುಕಿನ/ವಿಕ್ಷಿಪ್ತತೆಯು 'ಸಿಂಗಾರೆವ್ವ'ದಂಥ ಜಾನಪದ ಆಶಯ ಮತ್ತು ಆಕೃತಿಯುಳ್ಳ ಕೃತಿಗಳಿಗೆ ಎಷ್ಟರಮಟ್ಟಿಗೆ ಸಲ್ಲುತ್ತದೆ? ದೇಹದೊಳಗಿರುವ ದೇಹದಿಂದ ಬಲಗೊಂಡ, ದೇಹಕ್ಕಿಂತ ಭಿನ್ನವಲ್ಲದ ಮನಸ್ಸನ್ನು ದೇಹಕ್ಕಿಂತ ಮಿಗಿಲಾಗಿ ಕಾಣುವುದು ತಾರ್ಕಿಕವೇ? ದೇಹಮನಸ್ಸುಗಳು ಅವಿಭಾಜ್ಯವೆನ್ನುವ ಸರಳ ತರ್ಕವನ್ನು ಕಡೆಗಣಿಸಬಹುದೇ? ಎಂಬ ಪ್ರಶ್ನೆಗಳನ್ನು ಎತ್ತಲಾಗಿದೆ.

ಹೆಣ್ಣಿನ ಫಲವತ್ತತೆ ಪ್ರಕೃತಿಯ ಫಲವತ್ತತೆ, ಅದು ಒಂದು ವರ್ಗದ ಸ್ವಾಮ್ಯವಾಗಲಾರದು. ಹಾಗಿದ್ದ ಅಂತಹ ವ್ಯವಸ್ಥೆ ಬದಲಾಗಲೇಬೇಕಾದ್ದು. ಬದಲಾಗಬೇಕಾದ ಸ್ವರೂಪ ಹೇಗಿರಬೇಕು? - ಇವು ಕಂಬಾರ ಕೃತಿಗಳ ಕಾಳಜಿ. ದೈವೀ ಅನುಭವಗಳ ಅಭಿವ್ಯಕ್ತಿಗಾಗಿ ಲೈಂಗಿಕ ಪ್ರತಿಮೆಗಳ ಧಾರಾಳ ಬಳಕೆ - ಇವ ಕಂಬಾರರ ಮುಖ್ಯ ತಾತ್ತ್ವಿಕ ನೆಲೆಗಳೆನ್ನುವ ಡಿ.ಆರ್. ನಾಗರಾಜ್ ಇದನ್ನು ಕವಿಗೆ ಶಿಷ್ಟೇತರ ಪರಂಪರೆಗ ಜತೆ ಇರುವ ಗಾಢ ಸಂಬಂಧಕ್ಕೆ ಅನ್ವಯಿಸುತ್ತಾರೆ. ಆದರೆ ಪದೇಪದೇ ಬರುವ ಇಂಥ ಪ್ರತಿಮೆಗ ಧಾರಾಳತನದಿಂದ ಕೃತಿಗಳ ತಾತ್ತ್ವಿಕತೆಯ ಪರಿಧಿ ಸೀಮಿತವಾಗುವುದನ್ನು ಆರ್ಕೆ ಮಣಿಪಾಲರು ಗುರುತಿಸುತ ಕಂಬಾರರು ಕಲ್ಪಿಸುವ ಹೊಸ ವ್ಯವಸ್ಥೆಯ ಹರಿಕಾರರಾಗುವ ಪಾತ್ರಗಳು ಕಿಲಾಡಿಗಳಾಗಿ ಅಥವ ಸ್ವೇಚ್ಛಾಚಾರಿಗಳಾಗಿ ಚಿತ್ರಿತವಾಗಿರುವುದರಿಂದ ತಾತ್ತ್ವಿಕತೆಯ ಗಹನತೆ ನಷ್ಟವಾಗುವುದೆಂಬ ಆತಂಕವನ ತೋರುತ್ತಾರೆ. ಈ ಲೇಖನದಲ್ಲಿಯ ಒಂದು ಸ್ಫೋಟಕ ಅಂಶವೆಂದರೆ 'ಸಿಂಗಾರೆವ್ವ' ಕಾದಂಬರಿಯ ಎಮಿಲಿ ಬ್ರಾಂಟಿಯ 'ವುದರಿಂಗ್ ಹೈಟ್ಸ್'ಅನ್ನು ನಿಕಟವಾಗಿ ಹೋಲುವ ಸಂಗತಿ. ಕಥೆಯ ನಿರೂಪ ಒಡಲು, ಸ್ತ್ರೀಪಾತ್ರಗಳು, ತಂತ್ರ, ಪ್ರೇಯಸಿಯ ಸಾವಿನಿಂದ ನೊಂದ ತಾನೂ ಸಾಯಲು ನಿರ್ಧರಿಸು ರೀತಿ, ಕೋರ್ಟು ವ್ಯವಹಾರಗಳ ವಿವರವಾದ ಉಲ್ಲೇಖ – ಇತ್ಯಾದಿ ಹಲವು ಸಂಗತಿಗಳಲ್ಲಿ ಸಾದೃಶವಿರುವುದ ಎತ್ತಿ ಹೇಳಿ ಇದು ಆಕಸ್ಮಿಕವಲ್ಲ, ನೇರಪ್ರಭಾವದ ಫಲ ಎಂಬ ತೀರ್ಮಾನಕ್ಕೆ ಬರುತ್ತಾರೆ. ಕಂಬಾರರು ಕುರಿತು ಚಕಾರವೆತ್ತದಿರುವ ಬಗ್ಗೆ ಆರ್ಕೆ ಮಣಿಪಾಲರು ಸಹಜವಾಗಿಯೇ ಆಶ್ಚರ್ಯ ವ್ಯಕ್ತಪಡಿಸಿದ್ದಾ ಜತೆಗೇ ಸಂದೇಹಕ್ಕೆಡೆಯಿಲ್ಲದ ಸ್ವಂತಿಕೆಯನ್ನು ಕಲ್ಪಿಸುವ ಕಂಬಾರರ ಮಾಂತ್ರಿಕ ಚೈತನ್ಯ ಮತ್ತು ಸೃಜನಶೀ ಪ್ರತಿಭೆಗಳನ್ನೂ ಶ್ಲಾಘಿಸುವುದನ್ನು ಮರೆಯುವುದಿಲ್ಲ.

ದೇವನೂರರ ಕತೆ ಕಾದಂಬರಿಗಳನ್ನು ಕುರಿತು ಹೇಳುತ್ತಾ ದೇವನೂರರು ನವ್ಯತಂತ್ರಗಳನ್ನು ಯಶಸ್ವಿಯಾ ಬಳಸಿಕೊಂಡಿರುವುದನ್ನು ಸೋದಾಹರಣವಾಗಿ ತಿಳಿಸಿದ್ದಾರೆ. ನಿರೂಪಣಾ ಪ್ರಧಾನಶೈಲಿಯ ಎರಡು ಕಥೆಗಳ 'ಒಡಲಾಳ' ಮತ್ತು 'ಕುಸುಮ ಬಾಲೆ'ಯಲ್ಲಿ ಎರಡನೇ ಕಥೆಯ ನಿರೂಪಣೆ ಹೆಚ್ಚು ಜಾನಪದೀಯವ ಡಾಕ್ಯುಮೆಂಟರಿಯೂ ಆಗುವುದನ್ನು ಗುರುತಿಸಿದ್ದಾರೆ. ದಲಿತರ ಸ್ವಾಭಿಮಾನವನ್ನು ತಮ್ಮ ಕತೆಗಳಲ್ಲಿ ಎ ಹಿಡಿಯುತ್ತಿರುವ ದೇವನೂರರ ರೀತಿಯನ್ನು ಮೆಚ್ಚಿ ದಾಖಲಿಸಿದ್ದಾರೆ. 'ಅಮಾಸ ಎಂಬುದು ಅಮಾ ಹೆಸರು' ಎಂಬ 'ಅಮಾಸ' ಕತೆಯ ಆರಂಭದ ಸಾಲಿನಿಂದ ತೊಡಗಿ ಕತೆ ಕಾದಂಬರಿಗಳನ್ನು ವಿಮರ್ಶಿಸು ದಲಿತ ಸಂವೇದನೆ ಸಂಕೀರ್ಣಗೊಂಡು ದೇವನೂರರ ಕತೆಗಳಲ್ಲಿ ಮೈದಳೆದಿರುವ ರೀತಿಯ

ದೃಷ್ಟಾಂತಪೂರ್ವಕವಾಗಿ ನಿರೂಪಿಸಲಾಗಿರುವ ಈ ಬರಹ ಆರ್ಕೆಯವರ ವಿಮರ್ಶೆಯ ಒಂದು ಉತ್ಕೃಷ್ಟ ಮಾದರಿ.

ಹಾಗೇ ಒಡಲಾಳದಲ್ಲಿ ವರ್ಗ ಸಂಘರ್ಷದ ಸ್ವರೂಪ ಚಿತ್ರಣವಾಗಿರುವ ಬಗೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗಿದೆ. ಸಾಹುಕಾರನು ಸಾಕವ್ವನಿಗೆ ಎಲೆ ಅಡಿಕೆಗೆ ಒಂದು ರೂಪಾಯಿ ಕೊಡುವುದು, ಕಡಲೇ ಕಾಯಿಯ ಪ್ರಸಂಗ- ಇಂಥ ಪುಟ್ಟ ಸಂಗತಿಗಳಲ್ಲೂ ದೇವನೂರರ ತೋರುವ ಒಳನೋಟಗಳತ್ತ ಗಮನ ಹರಿಸುವಂತೆ ಮಾಡುವ ಲೇಖನವಿದು. ಗಾರಸಿದ್ದ ಮಾವನ ಪ್ರಸಂಗ, ಚನ್ನಮಧ್ವಾಚಾರ್ಯರ ಸಂವಾದ, ಮಾರಿಗುಡಿಯಲ್ಲಿ ದಸಂಸ ಸಭೆ - ಮುಂತಾದ ಸನ್ನಿವೇಶಗಳು ಅನುಭವವನ್ನು ಬಿಚ್ಚಿಡುತ್ತ ಹೋಗುವ ರೀತಿಯನ್ನು ನೆನೆಯುತ್ತ ಕನ್ನಡ ಸಾಹಿತ್ಯಕ್ಷೇತ್ರಕ್ಕೆ ಹೊಸ ಸಂವೇದನೆಗಳ ಸಮಾವೇಶವಾಗಿದೆಯೆನ್ನುತ್ತ 'ಒಡಲಾಳ'ದ ವಿಶಿಷ್ಟತೆಯನ್ನೂ ಸಾರ್ಥಕತೆಯನ್ನೂ ಎತ್ತಿ ತೋರಿಸಲಾಗಿದೆ.

'ಕನಕನ ಲೋಕಗ್ರಹಿಕೆ ಮತ್ತು ಅಭಿವ್ಯಕ್ತಿ' ಇಲ್ಲಿಯ ಇನ್ನೊಂದು ವಿಶಿಷ್ಟ ಲೇಖನ. ಪ್ರಖರ ಸಾಮಾಜಿಕ ವಿಮರ್ಶಕ, ಕವಿ-ಸಂತ ಕನಕನು ಕುರುಬರ ಆಸ್ತಿಯಾದ್ದರ ಬಗ್ಗೆ ವಿಷಾದಿಸುತ್ತಾ ನಮ್ಮ ಸಾಮಾಜಿಕ-ಸಾಂಸ್ಕೃತಿಕ ಪರಂಪರೆಯ ಅರಿವಿನ ಟೊಳ್ಳುತನವನ್ನು ಬಯಲಿಗೆಳೆಯುತ್ತಾ ಲೇಖನಕ್ಕೆ ಪೀಠಿಕೆ ಹಾಕಲಾಗಿದೆ.

ಕನಕನ ಲೋಕಗ್ರಹಿಕೆ ಅವನ ಪ್ರತಿಭೆಯ ದ್ಯೋತಕ. ದೇವರು ಭಕ್ತನ ಕೈಯ ಅಸ್ತ್ರವಾಗಿರುವ, ಆಳುವ ವರ್ಗದ ಕೈಯಲ್ಲಿನ ಸರಕಾಗಿರುವ ಸ್ಥಿತಿಯನ್ನು ಕನಕನು -

'ಯಾಕೆ ನೀನಿಲ್ಲಿ ಪವಡಿಸಿದ್ಯೊ ಹರಿಯೇ ।
ಜಗದೇಕ ವಿಖ್ಯಾತ ಪಶ್ಚಿಮರಂಗನಾಥಾ
ಇನ್ನಷ್ಟು ಕಾಲ ನೀನಿಲ್ಲಿ ಮಲಗಿದ್ದರು
ನಿನ್ನನೆಬ್ಬಿಸುವರೊಬ್ಬರನು ಕಾಣೆ'

ಎಂದಿದ್ದಾನೆ. :

'ಕನಕನ ಈ ನೇರತೆ-ನಿಷ್ಠುರತೆ ಸಂದೇಹವಾದಿ (sceptic) ನೆಲೆಯದು. ವೈಚಾರಿಕ ನೆಲೆಯನ್ನು ಮುಟ್ಟುವ ಮನಸ್ಸು ಯುಗದ ದ್ವಂದ್ವಗಳನ್ನು, ವೈರುಧ್ಯಗಳನ್ನು ಸೂಕ್ಷ್ಮವಾಗಿ ದಾಖಲಿಸಬಲ್ಲುದು. ದಾಸರ ಪೈಕಿ ಕನಕನಲ್ಲಿ ಈ ಗುಣ ಎದ್ದು ಕಾಣುತ್ತದೆ-' ಇಂಥ ಒಳನೋಟಗಳನ್ನು ನೀಡುವ ಕೃತಿ ಕುತೂಹಲದಿಂದ ಓದಿಸಿಕೊಂಡು ಹೋಗುತ್ತದೆ.

'ಹರಿಭಕ್ತಿಸಾರ' ಕನಕನ ಷಟ್ಪದೀಕಾವ್ಯ. ಪ್ರತಿ ಪದ್ಯದ ಕೊನೆಯರ್ಧ ಚರಣದಲ್ಲಿ 'ರಕ್ಷಿಸುನಮ್ಮನನವರತಾ' ಎಂಬ ಉದ್ಗಾರವಿದ್ದರೂ, ಅದೊಂದನ್ನೇ ಗಮನಿಸಿದರೆ ಕವಿಯ ಆರ್ತತೆ, ಶರಣಾಗತಿಯ ಚಿತ್ರಣವೆನಿಸೀತು. ಆದರೆ ಸೃಷ್ಟಿಯ ಭಗವಂತನ ನೀತಿಯನ್ನೇ ಪ್ರಶ್ನಿಸುವ ಸಾಲುಗಳು, ಕರ್ಮಸಿದ್ಧಾಂತಕ್ಕೆ ಆಕ್ಷೇಪ ಮುಂತಾದವುಗಳನ್ನೊಳಗೊಂಡ ಇಲ್ಲಿಯ ಪದ್ಯಗಳು ಕನಕನ ದೃಷ್ಟಿಕೋನವನ್ನು ಸ್ಪಷ್ಟಪಡಿಸುತ್ತವೆ. 'ಬಂದೆವಯ್ಯ ಗೋವಿಂದಶೆಟ್ಟಿ, ಅಪರೂಪ ಕಜ್ಜಾಯ ರಾಶಿಗಳ ಛಪ್ಪನ್ನ ದೇಶಕೆ ಮಾರುವ ಶೆಟ್ಟಿ, ದೇಶದೇಶಕೆ ಹೆಸರಾದ ಶೆಟ್ಟಿ, ಆಶೆಯಿಂದ ಹಣಕಾಸು ಗಳಿಸುವ ಶೆಟ್ಟಿ, ಆದಿಕೇಶವ ನಾರಾಯಣನೆಂಬ ಶೆಟ್ಟಿ' ಎಂಬ ಸಾಲುಗಳನ್ನು ಉದ್ಧರಿಸಿ ಕನಕನು ತಿರುಪತಿಯ ಶ್ರೀನಿವಾಸನನ್ನು 'ಶೆಟ್ಟಿ' ಎಂದು ಸಂಬೋಧಿಸಿ, 'ಭಕ್ತಿ'ಯು ಸರಕಾಗಿ ಹೋದ ಸನ್ನಿವೇಶವನ್ನು ವಿಡಂಬಿಸಿರುವುದನ್ನು ತೋರಿಸಿದ್ದಾರೆ. ಕನಕ ಭಕ್ತನಿರಬಹುದು. ತಿಮ್ಮಪ್ಪನ ಲೋಭವನ್ನು ಟೀಕಿಸದೆ ಬಿಡುವುದಿಲ್ಲ. 'ಶೆಟ್ಟಿ' ಎಂಬ ಶಬ್ದ ಬಳಸಿ ಸುರಕ್ಷಿತ ಭೂಮಿಕೆಯನ್ನು ಸಿದ್ಧಪಡಿಸಿ ಟೀಕಾಸ್ತ್ರ ಪ್ರಯೋಗ ಮಾಡುತ್ತಾನೆ, ಕವಿ. ಅದು ಕವಿಯ ಮನಸಾಕ್ಷಿಯ ಪ್ರಶ್ನೆ.

ದಾಸರ ಕಾಲದ ಆರ್ಥಿಕ ಸ್ಥಿತಿಗತಿಗಳು, ತಿರಿದು ಬೇಡುವವರ ನಿಕೃಷ್ಟ ಬದುಕು, ಜಾತೀಯತೆ ಮುಂತಾದ ಸೂಕ್ಷ್ಮ ಸಂಗತಿಗಳತ್ತ ನಮ್ಮ ಗಮನ ಸೆಳೆದು ದಾಸಸಾಹಿತ್ಯವೆಂದರೆ ಕೇವಲ ಭಕ್ತಿ ಮಾತ್ರವಲ್ಲ ಎಂದು ಮನವರಿಕೆ ಮಾಡಿಕೊಡುವ ಆರ್ಕೆಯವರ ಸ್ವೋಪಜ್ಞತೆಯನ್ನು ಮೆಚ್ಚಬೇಕು. ಕನಕನ ಕೆಲವು ಹಾಡುಗಳು ಭಕ್ತಿಪಂಥದ ನಿಲುವಿಗೆ ಅಳವಡದೆ ಅವನ ಸ್ಪಷ್ಟ ವೈಯಕ್ತಿಕ ಅಭಿಪ್ರಾಯವಾಗಿರುವುದನ್ನು ಸೋದಾಹರಣವಾಗಿ ಮುಂದಿಡುವ ಲೇಖಕರು ದೇವರನ್ನು ಪ್ರಶ್ನಿಸುವಂಥ ಸನ್ನಿವೇಶಗಳನ್ನೆಲ್ಲ 'ನಿಂದಾಸ್ತುತಿ' ಅಥವಾ 'ಹಾಸ್ಯ' ಎಂದು ಹೇಳಿ ಗುಡಿಸಿ ಹಾಕುವ ವಿಮರ್ಶಕರ ನಿಲುವನ್ನು ಟೀಕಿಸುತ್ತಾರೆ.

ಒಟ್ಟಾರೆ 'ವಿಮರ್ಶೆಯ ಸವಾಲು' ಒಂದು ಪ್ರೌಢ ವಿಮರ್ಶಾಗ್ರಂಥ. ಎರಡು ದಶಕಗಳಲ್ಲಿ ಬರೆದ

ಲೇಖನಗಳು ಇಲ್ಲಿ ಒಟ್ಟಾಗಿದ್ದು ಆಧುನಿಕ ಕನ್ನಡ ಸಾಹಿತ್ಯ ನಡೆದು ಬಂದ ರೀತಿಯನ್ನು, ಅದರ ದಿಕ್ಕುದೆಸೆಗಳನ್ನು ಕುರಿತು, ಪ್ರಮುಖ ಬರಹಗಾರರು, ವಿಮರ್ಶಕರನ್ನು ಕುರಿತ ಸ್ವತಂತ್ರವೂ ದಿಟ್ಟವೂ ಆದ ವಿಚಾರಗಳು ಕೃತಿಯಲ್ಲಿ ಹಾಸುಹೊಕ್ಕಾಗಿವೆ. ಆಳವಾದ ಅಧ್ಯಯನ, ಒಪ್ಪುವಂಥ ತರ್ಕ, ಸೋದಾಹರಣ ನಿರೂಪಣೆ ಹಾಗೂ ನೇರ-ನಿಷ್ಠುರ ಅಭಿಪ್ರಾಯ ಮಂಡನೆಯಿಂದ ಕೂಡಿ ಈ ಕೃತಿ ಗಟ್ಟಿತನವನ್ನು ಮೆರೆಯುತ್ತದೆ. ಇಲ್ಲಿಯ ಹಲವಾರು ಲೇಖನಗಳಿಗೆ ನೀಡಲಾಗಿರುವ ಅಡಿಟಿಪ್ಪಣಿಗಳೂ ಕೃತಿಯನ್ನು ಅಧ್ಯಯನಿಸಲೂ, ಅರ್ಥಮಾಡಿಕೊಳ್ಳಲೂ ನೆರವಾಗುವಂತಿವೆ.

ಈ ಪುಸ್ತಕಕ್ಕೆ 'ಪೂರ್ವಾಗ್ರಹವಿಲ್ಲದ ದ್ವಂದ್ವಾತ್ಮಕ ವಿಮರ್ಶೆ' ಎಂಬ ಹಣೆಪಟ್ಟಿಯಡಿ ಡಾ. ಆರ್.ವಿ. ಭಂಡಾರಿಯವರು ಮುನ್ನುಡಿ ಬರೆದಿದ್ದಾರೆ. ಪ್ರಾಯಃ ಸಮಾಜವಾದಿ ವಿಮರ್ಶೆಯ ಆಚಾರ್ಯಕೃತಿ (master piece) ಎಂದು ಇದನ್ನು ಕೀರ್ತಿಸಲು ಸಾಧ್ಯವಿದೆಯಾದರೂ ಕೆಲವು ಕೃತಿಕಾರರನ್ನು ಟೀಕಿಸುವಲ್ಲಿನ ಅತಿ ನಿಷ್ಠುರತೆಯ ಕಾರಣದಿಂದ ಆರ್ಕೆಯವರ ವಿಮರ್ಶೆಯ ಖಡ್ಗ ಹಲವೆಡೆ ಅಗತ್ಯಕ್ಕಿಂತ ಮೊನಚಾಯಿತೇನೋ ಎನ್ನಿಸುತ್ತದೆ. ಹಲವು ಪ್ರಮುಖ ಸಾಹಿತಿಗಳ, ವಿಮರ್ಶಕರ ಕೃತಿಗಳ ಚಿಂತನೆಯಿರಲಿ, ಕಿಂಚಿತ್ ಪ್ರಸ್ತಾಪವೂ ಇಲ್ಲದಿರುವುದು ಕೃತಿಯ ಒಂದು ಕೊರತೆ ಎನ್ನದೆ ವಿಧಿಯಿಲ್ಲ. 'ಆರ್ಕೆಯವರ ಯಾವ ಬರಹವೂ ಪೂರ್ವಾಗ್ರಹ ದೂಷಿತವಾಗಿಲ್ಲ. ಪೂರ್ವಾಗ್ರಹ ಇದ್ದರೆ ಅದು ಸಮಾಜವಾದಿ ಪೂರ್ವಾಗ್ರಹ' ಎಂಬ ಮುನ್ನುಡಿಯಲ್ಲಿನ ಮಾತುಗಳು ಅರ್ಥಗರ್ಭಿತವಾಗಿವೆ.

ಇದೇನೇ ಇರಲಿ: ಸಾಹಿತ್ಯ ವಲಯಗಳಲ್ಲೂ ಅಧ್ಯಯನದ ಕೊರತೆ ತೀವ್ರವಾಗಿರುವ ಈ ದಿನಗಳಲ್ಲಿ, ವಿಮರ್ಶೆಯ ದಿಕ್ಕುಗಳೇ ಚದುರಿ ಹೋಗುತ್ತಿರುವ ಇಂದಿನ ಸನ್ನಿವೇಶದಲ್ಲಿ ವಿಮರ್ಶೆಯ ಸವಾಲುಗಳನ್ನು ಮನಗಾಣಿಸಿ ಉತ್ತಮ ವಿಮರ್ಶೆಯ ಹಲವು ಮಾದರಿಗಳನ್ನು ದಾಖಲಿಸಿರುವ 'ವಿಮರ್ಶೆಯ ಸವಾಲು' ಕನ್ನಡ ಸಾಹಿತ್ಯ ವಿಮರ್ಶೆಯ ಮೈಲುಗಲ್ಲಾಗಿ ನಿಂತೀತು ಎನ್ನಲು ಅಡ್ಡಿಯಿಲ್ಲ.

❑

ಹಿರಿಯರಾದ ಶ್ರೀ ಹರಿಹರಪ್ರಿಯ ಅವರಿಗೆ, ಹೊಸ ವರುಷದ ಶುಭಾಶಯಗಳು.

ಸರ್,

'ಪುಸ್ತಕಮನೆ' ಸೊಗಸಾಗಿ ಬಂದಿದೆ. ಆಪ್ತವೆನಿಸುತ್ತದೆ, ಎಂದಿನ ಆತ್ಮೀಯತೆ ಅದರಲ್ಲಿದೆ. ತಮ್ಮ 'ಅನನ್ಯತೆ' ಇದರ ಜೊತೆಗಿದೆ.

'ಪುಸ್ತಕಮನೆ' ಎಂದಾಗ - ಹರಿಹರಪ್ರಿಯ ನೆನಪಾಗುತ್ತಾರೆ. 'ಹರಿಹರಪ್ರಿಯ' ಎಂದಾಗ ಪುಸ್ತಕಮನೆ ನೆನಪಾಗುತ್ತದೆ. ಅವೆರಡೂ ಪದಗಳು ನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ಒಂದೇ ನಾಣ್ಯದ ಎರಡು ಮುಖಗಳಾಗಿ; ಒಂದರೊಳಗೊಂದು ಬೆರೆತಿವೆ. ಇನ್ನೂ ಮುಂದೆ 'ಪುಸ್ತಕಮನೆ'ಯೇ ಇರಲಿ. ತಮ್ಮ ಯೋಜನೆ-ಯೋಚನೆಗೆ ಅಭಿನಂದನೆಗಳು.

* * *

"ಭಾರತೀಯ ಮೊದಲ ಸ್ತ್ರೀವಾದಿ ಪ್ರತಿಪಾದಕಿ : ವಿದುಷಿ ನಾಗರತ್ನಮ್ಮ" ಸಂಪಾದಕೀಯ ಅತ್ಯಮೂಲ್ಯವಾಗಿದೆ. ಶತಮಾನ ಕಳೆದರೂ 'ನಾಗರತ್ನಮ್ಮ'ನವರ ಪ್ರಸ್ತಾಪ-ಪರಿಚಯ ನಾಡಿಗಿಲ್ಲದಿರುವುದು ಸಾಂಸ್ಕೃತಿಕ ದುರಂತ ! ತಾವು ನೆನಪಿಸಿ, ಶತಮಾನೋತ್ಸವ ಸಂದರ್ಭದಲ್ಲಿ ನಾಡಿನ ಓದು-ಬರಹ-ಬಲ್ಲವರಿಗೆ ತಿಳಿಸಿದ್ದಿರಿ ಅದಕ್ಕಾಗಿ ಅಭಿನಂದನೆಗಳು.

* * *

'ಈ ಮಾಸ ನಾಟಕ'ದ ಗೌರವ ಸಂಪಾದಕತ್ವದ ಹೊಣೆ ಹೊತ್ತಿರುವುದು ಅಭಿಮಾನದ ಸಂಗತಿಯಾಗಿದೆ. ನಿಮ್ಮ ಕನಸು ಕೈಗೂಡಲಿ, ಯೋಜನೆಗಳು ಸಾಕಾರಗೊಳ್ಳಲಿ.

ಸಂಕ್ರಮಣದ ಶುಭಾಶಯಗಳು.

ಮಹಾಲಿಂಗಪುರ, ಬಾಗಲಕೋಟ

ಅಶೋಕ ನರೋಡೆ

ಮತ್ತೆ ಮೈದಳೆದ 'ಪುಸ್ತಕಮನೆ' : ಕಾಣದ ಮಹಿಳೆಯರ ನೆರವು

ಕಳೆದ ತಿಂಗಳಿಂದಲೇ 'ಪ್ರಜಾಸಾಹಿತ್ಯ', 'ಪುಸಕ್ತಮನೆ'ಯಾಗಿ ಓದುಗರ ಕೈ ಸೇರಿದೆ. ರಾಜ್ಯದ ಹಾಗೂ ಹೊರ ರಾಜ್ಯದಲ್ಲಿರುವ ಓದುಗ ಪರಿವಾರದಿಂದ, ವ್ಯಾಪಕ ಸ್ವಾಗತ ಸಿಕ್ಕಿದೆ. ಮೊದಲ ಪುಸ್ತಿಕೆಯಲ್ಲಿ ಹೇಳಿದಂತೆ, ಕೇವಲ ಸಾಹಿತ್ಯ ಅಕಾಡಮಿಕ್ ಆಗದೆ, ಬದುಕಿನ ಎಲ್ಲ ರಂಗಗಳನ್ನು ಕುರಿತ ಚಿಂತನೆಗೆ ಅನುವು ಮಾಡಿಕೊಡಬೇಕೆಂಬ, ಆ ಮೂಲಕ ಮಾನವ ಸಮಾಜ ನಿರ್ಮಾಣ ಮಾಡಬೇಕೆಂಬ ಮಹತ್ವಾಕಾಂಕ್ಷೆ ಕಣ್ಣ ಮುಂದಿದೆ. ಅದಕ್ಕಾಗಿ ಈ ಸಾಹಿತ್ಯ ಎಂದರೆ ಯಾವುದೋ ಒಂದು ನೆಲೆಯ ಗ್ರಹಿಕೆಗೆ ಸೀಮಿತವಾಗಿ ಬಿಡುವುದರಿಂದ, 'ಪುಸ್ತಕಮನೆ' ಎಂಬ ವಿಸ್ತೃತ, ಸಾರ್ಥಕ ನಾಮಧೇಯವನ್ನೇ ಉಳಿಸಿಕೊಳ್ಳಲಾಗಿದೆ.

ಇದರೊಂದಿಗೆ, ೧೯೯೬ರಿಂದ ಈ ೧೨ ವರ್ಷದ ಬದುಕಿನಲ್ಲಿ ಸಾಮಾಜಿಕ-ಸಾಂಸಾರಿಕ ವನವಾಸದಲ್ಲಿ ಬೆಂದು, ಮತ್ತೆ 'ಪುಸ್ತಕಮನೆ' ಮೈದಳೆದಿದೆ. ಅದಕ್ಕಾಗಿಯೇ ಮೂರುವರೆ ಲಕ್ಷ ರೂ. ಗಳ ವ್ಯವಸ್ಥಿತ ಹಂಚಿನಮನೆ ಕಟ್ಟಲಾಗಿದೆ. ಮಗ, ಸಾಲ ಮಾಡಿ ನೆರವಿಗೆ ಬಂದಿದ್ದಾನೆ. ಹೆಂಡತಿ, ತನ್ನ ನಿವೃತ್ತಿ ವೇತನದಿಂದಲೇ, ಸುಂದರವಾದ ಕೈತೋಟ ಮಾಡಿಸಿದ್ದಾಳೆ. ಭಾರತದಲ್ಲಿಯೇ ಖಾಸಗಿ ಆಕರ ಗ್ರಂಥಾಲಯ ಒಂದು ಕರ್ನಾಟಕದಲ್ಲಿ ಸ್ಥಾಪನೆಗೊಂಡಿದೆ. ಇದಕ್ಕೆ ಮಾದರಿಯಾದ ಸರ್ ಆಶುತೋಷ ಮುಖರ್ಜಿ ಅವರ ನೆನಪಿಗೇ ಇದನ್ನು ಅರ್ಪಿಸಲಾಗಿದೆ. ಈ ಮೂಲಕ ಸಾಹಿತ್ಯ, ಸಂಗೀತ, ಕಲೆಗಳ ಸಾಂಸ್ಕೃತಿಕ ಕೇಂದ್ರವಾಗಿ 'ಪುಸ್ತಕಮನೆ'ಯಲ್ಲಿ ಇನ್ನು ಮುಂದೆ 'ಶ್ರೀ ವಿದ್ಯಾರಣ್ಯ ಮನ್ನಣೆ'ಯ ಚಟುವಟಿಕೆ ಪ್ರಾರಂಭಿಸಲಿದೆ.

ಇದನ್ನು ತಿಳಿದ, ಜಯನಗರದ ಪದ್ಮಾವತಮ್ಮ ಬಿ.ಎಸ್. ಗುಂಡೂರಾವ್ ಅವರು, ತಮ್ಮ ಮನೆಯವರು ೪೦-೫೦ ವರ್ಷಗಳ ಹಿಂದೆಯೆ ಕಾಪಿಟ್ಟಿದ್ದ ಜೀವನ, ಪ್ರಬುದ್ಧ ಕರ್ನಾಟಕ ಹಾಗೂ ಕನ್ನಡ ನುಡಿಯ ಕೆಲವಾರು ಸಂಪುಟಗಳನ್ನು, ಗೆಳೆಯ ಬಿ.ಎಸ್. ಚಂದ್ರಶೇಖರ್ ಮೂಲಕ 'ಪುಸ್ತಕಮನೆ'ಗೆ ಕಳಿಸಿಕೊಟ್ಟಿದ್ದಾರೆ. ಇಷ್ಟು ಕಾಲ ಮಕ್ಕಳಿಗಿಂತ ಹೆಚ್ಚಾಗಿ ಜೋಪಾನ ಮಾಡಿದ್ದವರು ಪದ್ದಕ್ಕ.

೧೯೧೬ರಲ್ಲಿಯೇ ಮುಳಿಯ ತಿಮ್ಮಪ್ಪಯ್ಯ ಅವರು, ಪಿ. ಭೋಜರಾವ್ ಅವರೊಂದಿಗೆ ಸೇರಿ ಸಂಪಾದಿಸುತ್ತಿದ್ದ 'ಕನ್ನಡ ಕೋಗಿಲೆ' ಎಂಬ ಮಾಸಪತ್ರಿಕೆಯ ಕೆಲವು ಸಂಚಿಕೆಗಳ ಝೆರಾಕ್ಸ್ ಪ್ರತಿಗಳನ್ನು ಮಂಗಳೂರಿನ ಕುಡುಪದ ಬಿ.ಎಂ. ರೋಹಿಣಿಯವರು ಕಳಿಸಿಕೊಟ್ಟಿದ್ದಾರೆ.

ರಾಯಚೂರಿನ ಸ್ನಾತಕೋತ್ತರ ವಿಭಾಗದ ಅಧ್ಯಾಪಕರೂ ವಿದ್ವಾಂಸರೂ ಆದ ಕೆ. ಶಾರದಾ ಅವರು, ಕನ್ನಡ ಪತ್ರಿಕೆಗಳ ಮೇಲಿನ ಮಮಕಾರದಿಂದ, 'ಪುಸ್ತಕಮನೆ'ಗೆ ೧೦-೧೨ ಜನರನ್ನು ಸದಸ್ಯರನ್ನಾಗಿಸಿದ್ದಾರೆ. ಈ ಮೂಲಕ ಕೆಲವರನ್ನು ಓದಲು, ಬರೆಯಲು ಹಚ್ಚಿದ್ದಾರೆ.

ಪ್ರತ್ಯಕ್ಷ ಕಾಣದ ಈ ಮೂವರು ಮಹಿಳೆಯರ ಸಹಕಾರದಿಂದ ಏನೋ ಸಾಧನೆ ಮಾಡಲು ಹುರುಪು ಮೂಡುತ್ತಿದೆ. ಅವರಿಗೆ ಕೃತಜ್ಞತೆ ಅರ್ಪಿಸುತ್ತ, ದಯವಿಟ್ಟು ನೀವೂ ಆರ್ಥಿಕವಾಗಿ ಅಥವ ಹಳೆಯ ಪುಸ್ತಕ-ಪತ್ರಿಕೆಗಳನ್ನು ನೀಡುವ ಮೂಲಕ ನೆರವಿಗೆ ನಿಲ್ಲಬಹುದು. ಕೊನೆಯ ಪಕ್ಷ ಆಗಿರುವ ಕೆಲಸವನ್ನಾದರೂ ಪ್ರತ್ಯಕ್ಷ ಒಮ್ಮೆ ನೋಡಬಹುದು. ತಪ್ಪದೆಯೇ ಬನ್ನಿ, "ಪುಸ್ತಕಮನೆ"ಗೆ ಚಂದಾದಾರರಾಗಿರಿ. ನಿಮ್ಮ ಬಂಧು ಮಿತ್ರರ ಗಮನ ಇತ್ತ ಸೆಳೆಯಿರಿ. ಎದುರು ನೋಡುವ,

ನಿಮ್ಮ
ಸಂಪಾದಕ

ಪುಸ್ತಕಮನೆಗೆ ಶುಭಕೋರಿ

No. : 99 100 01527

H.S. Chandrashekar
Proprietor

CHANDPRESS PRODUCTS
9A, Konanakunte Indl. Area
Anjanapura Road
Near Harinagar Cross
Konanakunte, Bangalore - 560 062
Phone : 28436611
E-mail : hscs2006@dataone.in

Mfrs :
Press Components &
Turning Components